# ಶ್ರಮಿಕ ದೃಷ್ಟಿಕೋನ

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ–ಕಮ್ಯುನಿಸ್ಟ್
ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ

SUCI(C)

ಸಂಪುಟ: 37 ಸಂಚಿಕೆ: 09
ನವೆಂಬರ್ 2024 ಬೆಲೆ: ರೂ. 7/–


**ಒಳ ಪುಟಗಳಲ್ಲಿ.............**


ಮುಡಾ ಹಗರಣ : ಮೂರು ‘ದೊಡ್ಡ’ಪಕ್ಷಗಳ ಬಣ್ಣ ಬಯಲು ........3
ಮಾವೋ ಜೆಡಾಂಗ್ ಜೀವನ ಸಂಘರ್ಷ ........4
ತಿರುಪತಿಯ ‘ಲಡ್ಡು’ ವಿವಾದ: ರಾಜಕೀಯದ ಮೇಲಾಟ! ........6
ತೆಂಗು ಬೆಳೆಗಾರರ ರಾಷ್ಟ್ರೀಯ ಸಮಾವೇಶ ........7
ನವೆಂಬರ್ ಮಹಾಕ್ರಾಂತಿಯ ಬೋಧನೆಗಳು ........9
ಐತಿಹಾಸಿಕ ಆರ್‌ಜಿ ಕರ್ ಆಂದೋಲನ ........10
ನ್ಯಾಯಮೂರ್ತಿ ಹೇಮಾ ಸಮಿತಿ ವರದಿ ........11


## 4ನೇ ರಾಜ್ಯ ಮಟ್ಟದ ಕಾರ್ಮಿಕ ಸಮ್ಮೇಳನ–ಎಐಯುಟಿಯುಸಿ

# ಕೊಳೆತ ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತುಹಾಕಿ, ಸಮಸಮಾಜವನ್ನು ನಿರ್ಮಿಸಲು ಕಾರ್ಮಿಕ ವರ್ಗ ಸನ್ನದ್ಧವಾಗಬೇಕು! ಕಾಂ ಕೆ. ರಾಧಾಕೃಷ್ಣ.

ಹೊಸ ಸಮಾಜದ ಸಂಕಲ್ಪಕ್ಕೆ ದೃಢವಾದ ಹೆಜ್ಜೆಗಳನ್ನು ಹಾಕುತ್ತಾ ಕೆಂಪು ಪತಾಕೆಗಳೊಂದಿಗೆ ಮುಗಿಲು ಮುಟ್ಟುವ ಘೋಷಣೆಗಳೊಂದಿಗೆ ಶಿಸ್ತಿನಿಂದ ಸಾಗಿದ ದುಡಿಯುವ ಜನರ ಉತ್ಸಾಹದ ಮೆರವಣಿಗೆಗೆ ಮೈಸೂರು ಸಾಕ್ಷಿಯಾಯಿತು. ಕಾರ್ಮಿಕರ ರಾಜ್ಯ ಸಮ್ಮೇಳನದ ಪ್ರಯುಕ್ತ ಈ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿತ್ತು. ನಮ್ಮ ಕಾರ್ಮಿಕ ಮುಂದಳವಾದ ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ (ಎಐಯುಟಿಯುಸಿ) ಕರ್ನಾಟಕ ರಾಜ್ಯ ಸಮಿತಿಯು ತನ್ನ 4ನೇ ರಾಜ್ಯ ಮಟ್ಟದ ಕಾರ್ಮಿಕ ಸಮ್ಮೇಳನವನ್ನು ಅಕ್ಟೋಬರ್ 26– 27, 2024ರಂದು ಮೈಸೂರಿನಲ್ಲಿ ಸಂಘಟಿಸಿತ್ತು.

**ಕೆಂಪಾದ ಪಾರಂಪರಿಕ ನಗರಿ : ಕಾರ್ಮಿಕ ಸೈನ್ಯದ ಮೆರವಣಿಗೆಯ ಗರಿ**

ಸಮ್ಮೇಳನದ ಭಾಗವಾಗಿ ಅಕ್ಟೋಬರ್ 26 ರಂದು ಬೆಳಿಗ್ಗೆ 11ಕ್ಕೆ ಎಐಯುಟಿಯುಸಿಯ ರಾಜ್ಯ ಅಧ್ಯಕ್ಷರು, ಕಾರ್ಯದರ್ಶಿಗಳೂ ಸೇರಿದಂತೆ ಎಲ್ಲಾ ರಾಜ್ಯ ನಾಯಕರು ಮೆರವಣಿಗೆಯ ಮುಂಚೂಣಿಯಲ್ಲಿ ಇದ್ದರು. ಅವರ ಹಿಂದೆ ಕೆಂಬಾವುಟವನ್ನು ಹೆಗಲ ಮೇಲೆ ಇಟ್ಟುಕೊಂಡು ಶಿಸ್ತಿನಿಂದ ಹೊರಟಿದ್ದ ಕಾರ್ಮಿಕ ವರ್ಗದ ಸೇನಾ ತುಕಡಿಯಂತೆ ಕಾಣುತ್ತಿದ್ದ ಕಾರ್ಮಿಕರು ಶಿಸ್ತಿನಿಂದ ಮೆರವಣಿಗೆಯಲ್ಲಿ ಹೊರಟಿದ್ದರು. ಅದರ ನಂತರ ವಿವಿಧ ಜಿಲ್ಲೆಗಳಿಂದ ಬಂದಿದ್ದ ಸಹಸ್ರಾರು ಜನ ಕಾರ್ಮಿಕರು ಮತ್ತು ಇತರ ದುಡಿಯುವ ಜನರು ತಮ್ಮ ತಮ್ಮ ಜಿಲ್ಲೆ ಮತ್ತು ಯೂನಿಯನ್‌ಗಳ ಬ್ಯಾನರ್‌ಗಳನ್ನು ಹಿಡಿದು ಮುಗಿಲು ಮುಟ್ಟುವಂತೆ ಘೋಷಣೆಗಳನ್ನು ಕೂಗುತ್ತಾ ಸಾಲಾಗಿ ಸಾಗುತ್ತಿದ್ದರು. ಈ ಬೃಹತ್ ಮೆರವಣಿಗೆಯು ಕೆಂಪು ಧ್ವಜಗಳು, ಕೆಂಪು ಬಣ್ಣದ ಬಂಟಿಂಗ್‌ಗಳ ಸಾಲುಗಳು, ಬ್ಯಾನರ್‌ಗಳು, ಕಮಾನುಗಳಿಂದ ಅಲಂಕಾರಗೊಂಡಿದ್ದ ರಸ್ತೆಗಳು, ವೃತ್ತಗಳಲ್ಲಿ ಹಾದು ಬಹಿರಂಗ ಅಧಿವೇಶನ ನಡೆಯಲಿರುವ ಬೃಹತ್ ಪೆಂಡಾಲ್‌ಗೆ ತಲುಪುತ್ತಿದ್ದಂತೆ ಇನ್ನೂ ಎತ್ತರದ ಧ್ವನಿಯಲ್ಲಿ ಘೋಷಣೆಗಳು ಮೊಳಗಿದವು.

**ಸೂಕ್ತಿ , ಛಾಯಾಚಿತ್ರ ಮತ್ತು ಪುಸ್ತಕ ಪ್ರದರ್ಶನ :**

ಸೂಕ್ತಿ, ಛಾಯಾಚಿತ್ರ ಮತ್ತು ಪುಸ್ತಕ ಪ್ರದರ್ಶನವನ್ನು ಸಹಸ್ರಾರು ಜನರ ಸಮ್ಮುಖದಲ್ಲಿ ಸಮ್ಮೇಳನದ ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾದ ಪ್ರೊ ಕೆ. ಕಾಳಚನ್ನೇಗೌಡರು ಉದ್ಘಾಟಿಸಿದರು. ಅವರ ಜೊತೆಯಲ್ಲಿ ಎಐಯುಟಿಯುಸಿಯ ಅಖಿಲ ಭಾರತ ಅಧ್ಯಕ್ಷರಾದ ಕಾಮ್ರೇಡ್ ಕೆ. ರಾಧಾಕೃಷ್ಣ , ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಶಂಕರ್ ದಾಸ್ ಗುಪ್ತಾ, ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ. ಉಗ್ರನರಸಿಂಹೇಗೌಡರು ಹಾಗೂ ಎಐಯುಟಿಯುಸಿ ರಾಜ್ಯ ನಾಯಕರು ಇದ್ದರು.

ನಂತರ ನಡೆದ ಸಮ್ಮೇಳನದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಎಐಯುಟಿಯುಸಿ ರಾಜ್ಯ ಕಾರ್ಯದರ್ಶಿಗಳಾದ ಕಾಮ್ರೇಡ್ ಕೆ. ಸೋಮಶೇಖರ್ ಯಾದಗಿರಿ ವಹಿಸಿಕೊಂಡು, ಸಮ್ಮೇಳನದ ಉದ್ಘಾಟಕರಾಗಿ ಆಗಮಿಸಿದ್ದ, ಎಐಯುಟಿಯುಸಿ ಅಖಿಲ ಭಾರತ ಅಧ್ಯಕ್ಷರಾದ ಕಾಮ್ರೇಡ್ ಕೆ. ರಾಧಾಕೃಷ್ಣ, ಮುಖ್ಯ ಭಾಷಣಕಾರರಾದ ಎಐಯುಟಿಯುಸಿ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಶಂಕರ್ ದಾಸ್ ಗುಪ್ತಾ, ಅತಿಥಿಗಳಾದ ಎಸ್‌ಯುಸಿಐ (ಸಿ) ನ ರಾಜ್ಯ ಕಾರ್ಯದರ್ಶಿಗಳಾದ ಕಾಮ್ರೇಡ್ ಕೆ. ಉಮಾ, ಭಾಷಣಕಾರರಾಗಿ ಆಗಮಿಸಿದ್ದ ತಮಿಳುನಾಡು ಎಐಯುಟಿಯುಸಿ ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಶಿವಕುಮಾರ್, ಎಐಯುಟಿಯುಸಿ ರಾಜ್ಯ ಅಧ್ಯಕ್ಷರಾದ ಕಾಮ್ರೇಡ್ ಕೆ. ಸೋಮಶೇಖರ್‌ರವರನ್ನು ವೇದಿಕೆಗೆ ಬರಮಾಡಿಕೊಂಡರು.




ಸಮ್ಮೇಳನದ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿರುವ ಎಐಯುಟಿಯುಸಿಯ ಅಖಿಲ ಭಾರತ ಅಧ್ಯಕ್ಷರಾದ ಕಾ. ಕೆ.ರಾಧಾಕೃಷ್ಣ, ಚಿತ್ರದಲ್ಲಿ ಸ್ವಾಗತ ಸಮಿತಿಯ ಗೌರವ ಅಧ್ಯಕ್ಷರಾದ ಡಾ. ಕೆ. ಕಾಳಚನ್ನೇಗೌಡ, ಅಧ್ಯಕ್ಷರಾದ ಶ್ರೀ. ಉಗ್ರನರಸಿಂಹೇಗೌಡ, ಎಸ್‌ಯುಸಿಐ(ಸಿ) ರಾಜ್ಯ ಕಾರ್ಯದರ್ಶಿ ಕಾ. ಕೆ. ಉಮಾ ಮತ್ತು ಎಐಯುಟಿಯುಸಿ ರಾಜ್ಯ ಕಾರ್ಯದರ್ಶಿ ಕಾ. ಸೋಮಶೇಖರ್ ಯಾದಗಿರಿ

ಉದ್ಘಾಟನಾ ಭಾಷಣ ಮಾಡಿದ ಎಐಯುಟಿಯುಸಿ ಅಖಿಲ ಭಾರತ ಅಧ್ಯಕ್ಷರಾದ ಕಾಮ್ರೇಡ್ ಕೆ. ರಾಧಾಕೃಷ್ಣ ರವರು ಮಾತನಾಡಿ, “ದೇಶದ ದುಡಿಯುವ ಜನರ ಜೀವನ ಸಂಕಟಮಯವಾಗಿದೆ. ಉದ್ಯೋಗ ಭದ್ರತೆ ಇಲ್ಲ, ಜೀವನಯೋಗ್ಯ ವೇತನಗಳಿಲ್ಲ. ಗೌರವಧನ, ಪ್ರೋತ್ಸಾಹ ಧನಗಳ ಹೆಸರಿನಲ್ಲಿ ಲಕ್ಷಾಂತರ

2ನೇ ಪುಟಕ್ಕೆ....

## ಯುಬಿಡಿಟಿ ಉಳಿಸಿ! 50% ಪೇಮೆಂಟ್‌ಕೋಟಾ ರದ್ದುಗೊಳಿಸಿ!

# ಜನತೆಯ ಸ್ವಯಂಪ್ರೇರಿತ ಅಭೂತಪೂರ್ವ ದಾವಣಗೆರೆ ಬಂದ್

ಕರ್ನಾಟಕದ ಪ್ರಥಮ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಪ್ರತಿಷ್ಠಿತ ಯುಬಿಡಿಟಿ (ಯುನಿವರ್ಸಿಟಿ ಬ್ರಹ್ಮಪ್ಪ – ದೇವೇಂದ್ರಪ್ಪ ತವನಪ್ಪರವರ್) ಇಂಜಿನಿಯರಿಂಗ್ ಕಾಲೇಜು ವಿವಾದದ ಕೇಂದ್ರದಲ್ಲಿದೆ. ದಾವಣಗೆರೆಯ ಹೆಮ್ಮೆಯ ಈ ಸರ್ಕಾರಿ ಕಾಲೇಜಿನಲ್ಲಿ ಪ್ರಸಕ್ತ ವರ್ಷದಿಂದ ಶೇಕಡ 50ರಷ್ಟು ಸೀಟುಗಳನ್ನು 97 ಸಾವಿರಕ್ಕೆ ಮಾರಲು ಸರ್ಕಾರ ಹಾಗೂ ವಿಟಿಯು (ವಿಶ್ವೇಶ್ವರಯ್ಯ ಟೆಕ್ನಿಕಲ್ ಯುನಿವರ್ಸಿಟಿ) ನಿರ್ಧರಿಸಿದವು! 73 ವರ್ಷಗಳನ್ನು ಪೂರೈಸಿ, ಅಮೃತೋತ್ಸವದ ಹೊಸ್ತಿಲಲ್ಲಿರುವ ಸಂಸ್ಥೆಯಲ್ಲಿ ಈಗ 50% ಪೇಮೆಂಟ್ ಕೋಟಾ ಜಾರಿಗೊಳಿಸಲಾಗಿದೆ! ಇಂಜಿನಿಯರಿಂಗ್ ಪ್ರಥಮ ವರ್ಷದ 540 ಸೀಟುಗಳಲ್ಲಿ ಪ್ರತ್ಯೇಕ ಎರಡು ಕೋಟಾ ಮಾಡಲಾಗಿದೆ. ಅರ್ಧದಷ್ಟು ಸೀಟುಗಳಿಗೆ (ಅಂದರೆ 250 ಸೀಟುಗಳಿಗೆ) ಪಡೆಯಲಾಗುತ್ತಿರುವ 43,000 ರೂಪಾಯಿ ಸರ್ಕಾರಿ ಶುಲ್ಕವೇ ಬಡರೈತ–ಕಾರ್ಮಿಕರ ಮಕ್ಕಳಿಗೆ ಹೊರೆಯಾಗಿದೆ. ಹೀಗಿರುವಾಗ, ‘ಉನ್ನತ ಸರ್ಕಾರಿ ಕೋಟಾ’ ದ ಹೆಸರಲ್ಲಿ ಹೇರಲ್ಪಟ್ಟಿರುವ 97,000 ರೂಪಾಯಿ ಶುಲ್ಕವು ಬಡ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಇಂಜಿನಿಯರಿಂಗ್ ಶಿಕ್ಷಣದಿಂದ ಹೊರದಬ್ಬುತ್ತಿದೆ.

ವಿಟಿಯು ಹಾಗೂ ಸರ್ಕಾರದ ಈ ಅಮಾನವೀಯ ಹಾಗೂ ಅವೈಜ್ಞಾನಿಕ ನಡೆಯ ವಿರುದ್ಧ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ಎಐಡಿಎಸ್‌ಓ ನೇತೃತ್ವದಲ್ಲಿ ‘ಯುಬಿಡಿಟಿ ಉಳಿಸಿ’ ಹೋರಾಟ ಸಮಿತಿ ರಚಿಸಿಕೊಂಡು ಕಳೆದ ಒಂದೂವರೆ ತಿಂಗಳಿನಿಂದ ಪ್ರತಿಭಟನೆ ನಡೆಸುತ್ತಿದ್ದಾರೆ.

ಸೆಪ್ಟೆಂಬರ್ 10 ರಂದು ಕಾಲೇಜಿನಿಂದ ಜಯದೇವ ವೃತ್ತದವರೆಗೆ ಮೆರವಣಿಗೆ ಹೊರಟು ಪ್ರತಿಭಟನೆ ನಡೆಸಲಾಯಿತು.

ಸೆಪ್ಟೆಂಬರ್ 24 ರಂದು ನಗರದ ಕುವೆಂಪು ಕನ್ನಡ ಭವನದಲ್ಲಿ ಪ್ರತಿಭಟನಾ ಸಮಾವೇಶ ನಡೆಸಲಾಯಿತು.

ಕಾಲೇಜಿನ ವಿದ್ಯಾರ್ಥಿಗಳು ಹಾಗೂ ದಾವಣಗೆರೆಯ ಜನತೆಯಿಂದ ಸಹಿ ಸಂಗ್ರಹಿಸಿ ಉನ್ನತ ಶಿಕ್ಷಣ ಸಚಿವರಿಗೆ ಮನವಿ ಸಲ್ಲಿಸಬೇಕೆಂದು ಸಮಾವೇಶದಲ್ಲಿ ನಿರ್ಣಯಿಸಲಾಯಿತು.

3 ಸಾವಿರಕ್ಕೂ ಹೆಚ್ಚು ಸಹಿಗಳೊಂದಿಗೆ ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಸಚಿವರಾದ ಡಾ. ಎಂ.

4ನೇ ಪುಟಕ್ಕೆ....



...1ನೇ ಪುಟದಿಂದ

ದುಡಿಯುವ ಮಹಿಳೆಯರನ್ನು ಶೋಷಿಸಲಾಗುತ್ತಿದೆ. ಉದ್ಯೋಗದಾತ ಮಾಲೀಕರೇ ಕಣ್ಣಿಗೆ ಕಾಣದ ಗಿಗ್ ಫ್ಲ್ಯಾಟ್‌ಫಾರ್ಮ್ ಹೆಸರಿನ ಹೊಸತೊಂದು ದುಡಿಯುವ ಸಮುದಾಯ ಸೃಷ್ಟಿಯಾಗಿದೆ. ಕಾರ್ಮಿಕ ಕಾಯಿದೆಗಳ ವ್ಯಾಪ್ತಿಗೆ ಬರದೆ ಇರುವ ಇಂತಹ ಅಪಾರ ದುಡಿಯುವ ಸಮುದಾಯವನ್ನು ಕ್ರೂರವಾದ ಶೋಷಣೆಗೆ ತಳ್ಳಲಾಗಿದೆ. ಇದಕ್ಕೆ ಪ್ರಸಕ್ತ ಬಂಡವಾಳಶಾಹಿ ವ್ಯವಸ್ಥೆಯೇ ಕಾರಣ. ಇದನ್ನು ಕಿತ್ತೊಗೆದು ಅನ್ಯಾಯ–ಶೋಷಣೆಗಳಿಲ್ಲದ ಕಾರ್ಮಿಕರ ರಾಜ್ಯವನ್ನು ನಿರ್ಮಿಸುವುದೊಂದೇ ಏಕಮಾತ್ರ ಪರಿಹಾರ"ಎಂದರು.

ಮುಂದುವರೆದು ಮಾತನಾಡಿದ ಅವರು, "ಕಾಂಗ್ರೆಸ್ ಹಾಗೂ ಬಿಜೆಪಿ ಸರ್ಕಾರಗಳ ನೀತಿಗಳಿಂದಾಗಿ ದೇಶದಲ್ಲಿ ಶತಕೋಟ್ಯಾಧಿಪತಿಗಳ ಸಂಖ್ಯೆ ಹೆಚ್ಚಳವಾಗುತ್ತಿದೆ. ಆದರೆ ಅವರುಗಳ ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕರ ಬದುಕು ಮಾತ್ರ ಶೋಚನೀಯವಾಗುತ್ತಿದೆ. ಅಂಬಾನಿಯ ಗಳಿಕೆ ದಿನಕ್ಕೆ ರೂ. 190 ಕೋಟಿಯಾದರೆ, ಕಾರ್ಮಿಕರ ತಿಂಗಳ ಸರಾಸರಿ ಸಂಪಾದನೆ ಅಂದಾಜು ರೂ. ಐದು ಸಾವಿರ!! ಆಳುವ ವರ್ಗದ ಈ ಕ್ರೂರ ಶೋಷಣೆ ವಿರುದ್ಧ ದುಡಿಯುವವರು ಎಲ್ಲೆಡೆ ಬಂಡೇಳುತ್ತಿದ್ದಾರೆ. ಅಂತೆಯೇ ಕಾರ್ಮಿಕ ಹೋರಾಟವನ್ನು ಹತ್ತಿಕ್ಕಲು ಕಾನೂನುಗಳನ್ನು ತಿದ್ದುಪಡಿ ಮಾಡಿ, ಮಾಲೀಕರ ಹಿತಕ್ಕಾಗಿ ಈಗ 4 ಲೇಬರ್ ಕೋಡ್‌ಗಳನ್ನು ಕೇಂದ್ರ ಬಿಜೆಪಿ ಸರ್ಕಾರ ಜಾರಿಗೆ ತರುತ್ತಿದೆ. ಆಳ್ವಿಕರ ಈ ಕುಟಿಲ ನೀತಿಗಳನ್ನು ಹಿಮ್ಮೆಟ್ಟಿಸಲು ಬಲಿಷ್ಠ ಕಾರ್ಮಿಕ ಚಳುವಳಿಯ ಅಗತ್ಯವಿದೆ. ಆದರೆ ದುರಂತವೆಂದರೆ ಎಡವಾದಿ ಸಂಘಟನೆಗಳ ರಾಜಿಯಿಂದಾಗಿ ಅವಿರತವಾದ ಬಲಿಷ್ಠ ಹೋರಾಟ ಬೆಳೆಸಲಾಗುತ್ತಿಲ್ಲ. ನರೇಂದ್ರ ಮೋದಿಯವರ ಲೇಬರ್ ಕೋಡ್‌ಗಳನ್ನು ದೇಶದಲ್ಲೇ ಮೊಟ್ಟಮೊದಲು ನಿಯಮಗಳನ್ನಾಗಿ ರೂಪಿಸಿದ್ದು ಕೇರಳದ ಎಡವಾದಿ ಸರ್ಕಾರವೆಂಬುದು ವಿಪರ್ಯಾಸ. ದುಡಿಯುವ ಜನರು ಜಾಗೃತರಾಗಿ ಈ ಎಲ್ಲಾ ಬೆಳವಣಿಗೆಗಳನ್ನು ಗಮನಿಸಬೇಕು. ಒಂದೆಡೆ ದುಡಿಯುವ ಜನರನ್ನು ದಿಕ್ಕುತಪ್ಪಿಸುವ ಸಲುವಾಗಿ ಜಾತಿ, ಮತ, ಭೇದಗಳನ್ನು ಮುಂದೆ ಮಾಡಿ ಕೋಮುವಾದಿ ಅಜೆಂಡಾದ ಮೂಲಕ ಒಡೆದಾಳುವ ಪ್ರಯತ್ನ ಮಾಡಲಾಗುತ್ತಿದೆ. ಇನ್ನೊಂದೆಡೆ ನೀತಿ–ಸಂಸ್ಕೃತಿಯನ್ನೇ ನಾಶ ಮಾಡಲಾಗುತ್ತಿದೆ. ನಮ್ಮ ಸಂಘದ ಸಂಸ್ಥಾಪಕರಾದ ಈ ಯುಗದ ಮಹಾನ್ ಮಾರ್ಕ್ಸ್‌ವಾದಿಗಳೂ ಆಗಿದ್ದ ಕಾ. ಶಿವದಾಸ್ ಘೋಷ್‌ರವರು ಬಹಳ ಆತಂಕದಿಂದ ಮಹಾನ್ ಸಾಹಿತಿ ಶರತ್‌ಚಂದ್ರರ ಮಾತುಗಳನ್ನು ಉಲ್ಲೇಖಿಸಿ 'ಮಾನವನ ಸಾವು ಅತ್ಯಂತ ನೋವಿನ ವಿಚಾರ. ಆದರೆ ಅದಕ್ಕೂ ಹೆಚ್ಚಿನ ವೇದನಾದಾಯಕ ಎಂದರೆ ಮನುಷ್ಯತ್ವದ ಸಾವು' ಎಂದು ಹೇಳುತ್ತಿದ್ದರು. ಕೀಳು ವ್ಯಕ್ತಿವಾದ, ವಿಕೃತ ಸಂಸ್ಕೃತಿ, ಕುರುಡು ಭಾವನೆಗಳ ಮೂಲಕ ಮನುಷ್ಯತ್ವವನ್ನೇ ನಾಶಪಡಿಸಿ ಮೃಗೀಯ ಭಾವನೆ ಬೆಳೆಸಲಾಗುತ್ತಿದೆ. ಕಾರ್ಮಿಕರು ಇದನ್ನು ಮೀರಿ ವರ್ಗಪ್ರಜ್ಞೆಯಿಂದ ಒಗ್ಗಟ್ಟಾಗಿ, ಬಂಡವಾಳಿಶಾಹಿ ವ್ಯವಸ್ಥೆಗೆ ಕೊನೆ ಹಾಕಿ ಕಾರ್ಮಿಕರ ರಾಜ್ಯ ಸ್ಥಾಪನೆಗಾಗಿ ಬಲಿಷ್ಠವಾದ ಹೋರಾಟವನ್ನು ಬೆಳೆಸಬೇಕು" ಎಂದು ಕರೆ ನೀಡಿದರು.

ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಕಾ. ಶಂಕರ್ ದಾಸ್ ಗುಪ್ತರವರು, "ಇಂದು ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಜನರ ಬವಣೆ ನೀಗಿಲ್ಲ. ಇಂದು ಶ್ರೀಮಂತರ ಮತ್ತು ಬಡವರ ನಡುವಿನ ಅಂತರ ಹೆಚ್ಚಳವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಸರಿಯಾದ ವೈಚಾರಿಕತೆಯ ಆಧಾರದಲ್ಲಿ ಹೋರಾಟಗಳನ್ನು ಕಟ್ಟಬೇಕಿದ್ದು, ಕಾ. ಶಿವದಾಸ್ ಘೋಷ್ ವಿಚಾರಗಳ ಆಧಾರದಲ್ಲಿ ರೂಪುಗೊಂಡ ಎಐಯುಟಿಯುಸಿ ಮಾತ್ರವೇ ಏಕಮಾತ್ರ ಕ್ರಾಂತಿಕಾರಿ ಕಾರ್ಮಿಕ ಸಂಘಟನೆಯಾಗಿದ್ದು ಈ ಕೆಲಸ ಮಾಡುತ್ತಿದೆ. ಇದಕ್ಕೆ ಪೂರಕವಾಗಿ ಡಿಸೆಂಬರ್‌ನಲ್ಲಿ ಒಡಿಸ್ಸಾದ ಭುವನೇಶ್ವರದಲ್ಲಿ ಅಖಿಲ ಭಾರತ ಸಮ್ಮೇಳನ ನಡೆಯುತ್ತಿದೆ. ಇದಕ್ಕೆ ದೇಶದ 25ಕ್ಕೂ ಹೆಚ್ಚು ರಾಜ್ಯಗಳಿಂದ ಪ್ರತಿನಿಧಿಗಳು ಪಾಲ್ಗೊಳ್ಳಲ್ಲಿದ್ದಾರೆ. ವಿವಿಧ ದೇಶಗಳ ಕಾರ್ಮಿಕ ಸಂಘಟನೆಗಳ ನಾಯಕರು ಸಹ ಭಾಗವಹಿಸುವರು" ಎಂದರು.

ಸ್ವಾಗತ ಸಮಿತಿಯ ಅಧ್ಯಕ್ಷರಾದ ಹಾಗೂ




ರಾಜ್ಯ ಸಮ್ಮೇಳನದ ಬಹಿರಂಗ ಸಭೆಯಲ್ಲಿ ಭಾಗವಹಿಸಿದ್ದ ಕಾರ್ಮಿಕ ಸಮೂಹ

ಸಾಮಾಜಿಕ ಹೋರಾಟಗಾರರಾದ ಶ್ರೀ. ಉಗ್ರನರಸಿಂಹೇಗೌಡರು ಮಾತನಾಡಿ, "ನಾವೇ ಆರಿಸಿದ ಸರ್ಕಾರಗಳು ಹನ್ನೆರಡು ತಾಸು ದುಡಿಮೆಯ ನೀತಿಯನ್ನು ಜಾರಿಗೆ ತಂದು ಕಾರ್ಮಿಕರನ್ನು ಜೀತಕ್ಕೆ ತಳ್ಳುತ್ತಿವೆ. ಇಂದಿಗೂ ರೈತರು, ಕಾರ್ಮಿಕರು ರಸ್ತೆಗಿಳಿದು ಹೋರಾಟ ಮಾಡಿಯೇ ಹಕ್ಕುಗಳನ್ನು ಪಡೆಯುವ ಪರಿಸ್ಥಿತಿ ಇದೆ" ಎಂದರು.

ಕಾಮ್ರೇಡ್ ಕೆ.ಸೋಮಶೇಖರ್‌ರವರು ಮಾತನಾಡಿ, ಬಂಡವಾಳಶಾಹಿ ವ್ಯವಸ್ಥೆಯು ತನ್ನ ಶೋಷಣೆಯನ್ನು ತೀವ್ರಗೊಳಿಸುವ ಸಲುವಾಗಿ ತರುತ್ತಿರುವ ಹೊಸ ಹೊಸ ನೀತಿಗಳನ್ನು ಮೈಸೂರಿನಲ್ಲಿ ಪ್ರಯೋಗ ಮಾಡುತ್ತಿದೆ. ಇದಕ್ಕೆ ಪರ್ಯಾಯವಾಗಿ ಕಾರ್ಮಿಕರು ಸಹ ಎಐಯುಟಿಯುಸಿ ನೇತೃತ್ವದಲ್ಲಿ ರಾಜಿರಹಿತವಾದ ಹೋರಾಟವನ್ನು ಕಟ್ಟುತ್ತಿದ್ದಾರೆ ಎಂದರು. ಕಾರ್ಮಿಕರ ಬದುಕು ದುಸ್ತರವಾಗುತ್ತಿರುವ ಸಂದರ್ಭದಲ್ಲಿ ಸರ್ಕಾರ ಕಾರ್ಮಿಕರ ಹಿತವನ್ನು ಕಾಯಬೇಕೆಂದು ಒತ್ತಾಯಿಸಿದರು.

ಈ ಕಾರ್ಯಕ್ರಮದ ಅತಿಥಿಗಳಾಗಿ ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿಗಳಾದ "ಕಾರ್ಮಿಕರ ಕಠಿಣ ಪರಿಶ್ರಮದ ಫಲವಾಗಿ ಕಾರ್ಖಾನೆಯ ಮಾಲೀಕರ ಸಂಪತ್ತು ಹೆಚ್ಚಳವಾಗುತ್ತಿದೆ. ಆದರೆ ನ್ಯಾಯಯುತವಾಗಿ ಕಾರ್ಮಿಕರಿಗೆ ಕೊಡಬೇಕಾದ ಪಾಲನ್ನು ನೀಡದೆ ವಂಚಿಸಲಾಗುತ್ತಿದೆ. ಇದನ್ನು ಮೊಟ್ಟ ಮೊದಲಬಾರಿಗೆ ವೈಜ್ಞಾನಿಕವಾಗಿ ನಿರೂಪಿಸಿ, ವರ್ಗ ಹೋರಾಟಕ್ಕೆ ಕರೆ ನೀಡಿದವರು ಮಹಾನ್ ತತ್ವಜ್ಞಾನಿ ಕಾರ್ಲ್ ಮಾರ್ಕ್ಸ್. ಇದರೊಂದಿಗೆ ಅವರು 'ವಿಶ್ವದ ಕಾರ್ಮಿಕರೇ ಒಂದಾಗಿ, ಹೋರಾಟಕ್ಕಾಗಿ ಮುಂದಾಗಿ' ಎಂದು ಕರೆ ನೀಡಿದರು. ಈ ಕರೆಗೆ ಬೆಚ್ಚಿದ ಬಂಡವಾಳಶಾಹಿ ಮಾಲೀಕರು, ಮತ್ತವರ ಪ್ರತಿನಿಧಿಗಳು ದುಡಿಯುವ ಜನರನ್ನು ದಿಕ್ಕು ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ. ಇಡೀ ಶ್ರಮಿಕ ವರ್ಗ ಇಂತಹ ಹೀನ ತಂತ್ರಗಳನ್ನು ಹಿಮ್ಮೆಟ್ಟಿಸಿ ಬಲಿಷ್ಠವಾದ ಹೋರಾಟವನ್ನು ಕಟ್ಟಲು ಮುಂದಾಗಬೇಕು" ಎಂದು ಕರೆ ನೀಡಿದರು.

**ಸಹೋದರ ಕೇಂದ್ರ ಕಾರ್ಮಿಕ ಸಂಘಟನೆಗಳಿಂದ ಶುಭ ಕೋರುವ ಕಾರ್ಯಕ್ರಮ:**

ನಂತರ ಸಹೋದರ ಕೇಂದ್ರ ಕಾರ್ಮಿಕ ಸಂಘಟನೆಗಳ ರಾಜ್ಯ ನಾಯಕರಾದ ಎಐಟಿಯುಸಿಯ ಕಾ. ಶೇಷಾದ್ರಿ, ಸಿಐಟಿಯುನ ಕಾ. ಬಾಲಾಜಿ ಎಐಸಿಸಿಟಿಯುನ ಕಾ. ನಾ.ದಿವಾಕರ್, ಟಿಯುಸಿಸಿಯ ಕಾ.ಜಿ.ಆರ್.ಶಿವಶಂಕರ್, ಎಚ್‌ಎಂಕೆಪಿ ರಾಷ್ಟ್ರೀಯ ಅಧ್ಯಕ್ಷ ಕಾ.ಎಲ್. ಕಾಳಪ್ಪ, ಶ್ರೀ ಬಸನಗೌಡರು ಅಧ್ಯಕ್ಷರು, ಕರ್ನಾಟಕ ಶುಗರ್ ವರ್ಕರ್ಸ್ ಫೆಡರೇಷನ್ ಮಾತನಾಡಿ, ಎಐಯುಟಿಯುಸಿ ಸಂಘಟಿತ 4ನೇ ಕಾರ್ಮಿಕ ಸಮ್ಮೇಳನಕ್ಕೆ ಶುಭ ಹಾರೈಸಿದರು. ಮುಂದಿನ ದಿನಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಾರ್ಮಿಕ ವಿರೋಧಿ ಮತ್ತು ಜನವಿರೋಧಿ ನೀತಿಗಳ ವಿರುದ್ಧ ಎಐಯುಟಿಯುಸಿ ಸೇರಿದಂತೆ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ಮೂಲಕ ಇನ್ನಷ್ಟು ಬಲಿಷ್ಠ ಒಕ್ಕೂಟ ಹೋರಾಟವನ್ನು ಬೆಳೆಸೋಣ ಎಂದರು.

ಈ ಸಮ್ಮೇಳನದಲ್ಲಿ ಈ ಕೆಳಗಿನ ನಿರ್ದಿಷ್ಟ ಗೊತ್ತುವಳಿಗಳನ್ನು ಮಂಡಿಸಿ ವಿಸ್ತ್ರತ ಚರ್ಚೆಯನ್ನು ನಡೆಸಿ ಅನುಮೋದನೆ ಪಡೆಯಲಾಯಿತಲ್ಲದೆ 18 ಬೇಡಿಕೆಗಳನ್ನು ಆಧರಿಸಿ ಮುಂದಿನ ಹೋರಾಟಗಳನ್ನು ಕಟ್ಟಲು ತೀರ್ಮಾನಿಸಲಾಯಿತು.

1. ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಬೇಕು. ಹಾಲಿ ಇರುವ ಕಾರ್ಮಿಕರನ್ನು ಖಾಯಂಗೊಳಿಸಬೇಕು. ಕನಿಷ್ಠ ವೇತನವನ್ನು ಕನಿಷ್ಠ ರೂ. 35,000 ನಿಗದಿಪಡಿಸಬೇಕು
2. ಸ್ಕೀಂ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಬೇಕು,ಅಲ್ಲಿಯವರೆಗೆ ಕಾರ್ಮಿಕರ ಸ್ಥಾನಮಾನ ಒದಗಿಸಬೇಕು.
3. ದುಡಿಯುವ ಅವಧಿಯನ್ನು ಹೆಚ್ಚಳ ಮಾಡುವ ಸರ್ಕಾರದ ಪ್ರಸ್ತಾಪ ಹಾಗೂ ರಾತ್ರಿ ಪಾಳಿಯಲ್ಲಿ ಮಹಿಳೆಯರನ್ನು ದುಡಿಸಿಕೊಳ್ಳಲು ಅನುಮೋದಿಸಿರುವ ನಿರ್ಧಾರವನ್ನು ಹಿಂಪಡೆಯಬೇಕು.
4. ಇಎಸ್‌ಐ ಹಾಗೂ ಪಿಎಫ್ ಅರ್ಹತೆಗೆ ಇರುವ ವೇತನದ ಮಿತಿಯನ್ನು ಹೆಚ್ಚಳ ಮಾಡುವುದು ಹಾಗೂ ಕನಿಷ್ಠ ಪಿಂಚಣಿಯನ್ನು 10000 ರೂ. ಗಳಿಗೆ ನಿಗದಿಗೊಳಿಸಬೇಕು.
5. ಗಿಗ್ ಕಾರ್ಮಿಕರನ್ನು ಕಾರ್ಮಿಕರೆಂದು ಪರಿಗಣಿಸಲು ಮತ್ತು ಸೇವಾ ಭದ್ರತೆಯನ್ನು ಒದಗಿಸಲು ಕಾಯ್ದೆ ರೂಪಿಸಬೇಕು.

ಕಾಮ್ರೇಡ್ ಕೆ. ಉಮಾರವರು ವೇದಿಕೆ ಮೇಲಿದ್ದರು. ಬಹಿರಂಗ ಅಧಿವೇಶನಕ್ಕೂ ಮುನ್ನ ನಿವೃತ್ತ ಪ್ರಾಧ್ಯಾಪಕರು, ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾದ ಪ್ರೊ.ಕಾಳಚನ್ನೇಗೌಡ, ತಮಿಳುನಾಡಿನ ಎಐಯುಟಿಯುಸಿ ರಾಜ್ಯ ಕಾರ್ಯದರ್ಶಿಗಳಾದ ಕಾ. ಶಿವಕುಮಾರ್ ಹಾಗೂ ರಾಜ್ಯ ಸೆಕ್ರೆಟೇರಿಯಟ್ ಸದಸ್ಯರಾದ ಕಾ. ಚಂದ್ರಶೇಖರ ಮೇಟಿಯವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಬಹಿರಂಗ ಅಧಿವೇಶನದ ಅಧ್ಯಕ್ಷತೆಯನ್ನು ರಾಜ್ಯ ಕಾರ್ಯದರ್ಶಿಗಳಾದ ಕಾ. ಕೆ.ಸೋಮಶೇಖರ್ ಯಾದಗಿರಿಯವರು ವಹಿಸಿದ್ದರು.

**ಪ್ರತಿನಿಧಿ ಅಧಿವೇಶನ: 26–27 ಅಕ್ಟೋಬರ್ 2024**

**ಕಾರ್ಮಿಕರ ಕೈಗೆ ವೈಚಾರಿಕ ಅಸ್ತ್ರ ಕೊಟ್ಟಿದ್ದು ಕಾರ್ಲ್ ಮಾರ್ಕ್ಸ್–ಕೆ. ಉಮಾ**

ಎಐಯುಟಿಯುಸಿಯ ನಾಲ್ಕನೇ ರಾಜ್ಯ ಸಮ್ಮೇಳನದ ಪ್ರತಿನಿಧಿ ಅಧಿವೇಶನವನ್ನು ಕೆ. ಉಮಾರವರು ಉದ್ಘಾಟಿಸಿ ಮಾತನಾಡುತ್ತಾ,

**ಸಮಾರೋಪ ಕಾರ್ಯಕ್ರಮ:**

**ಸಮತಾವಾದದ ಶಾಲೆಗಳಾಗುವಂತೆ ಕಾರ್ಮಿಕ ಚಳುವಳಿಯನ್ನು ರೂಪಿಸಿ – ಕಾಮ್ರೇಡ್ ಕೆ.ರಾಧಾಕೃಷ್ಣ**

**ಎಐಯುಟಿಯುಸಿ ನೂತನ ರಾಜ್ಯ ಸಮಿತಿ:**

ನೂತನ ಅಧ್ಯಕ್ಷರು : ಕೆ. ಸೋಮಶೇಖರ್

ಉಪಾಧ್ಯಕ್ಷರು : ಕೆ.ವಿ ಭಟ್, ದೇವದಾಸ್, ಡಿ.ನಾಗಲಕ್ಷ್ಮಿ, ಎಂ ಉಮಾದೇವಿ, ವೀರೇಶ್ ಎನ್.ಎಸ್, ಚಂದ್ರಶೇಖರ ಮೇಟಿ, ರಮಾ ಟಿ.ಸಿ, ಷಣ್ಮುಗಂ ಪಿ.ಎಸ್, ತಾಯಿದಾಸ್, ಮಲ್ಲಿಕಾರ್ಜುನ್ ಹೆಚ್.ಟಿ, ಮಂಜುನಾಥ್ ಕೈದಾಳೆ

ರಾಜ್ಯ ಕಾರ್ಯದರ್ಶಿ : ಕೆ. ಸೋಮಶೇಖರ್ ಯಾದಗಿರಿ.

ಸೆಕ್ರಟರಿಯೇಟ್ ಸದಸ್ಯರು :ಡಿ.ಉಮಾದೇವಿ, ವಿ.ಜಿ. ದೇಸಾಯಿ, ಎಸ್.ಎಂ ಶರ್ಮಾ, ಜಿ. ಹನುಮೇಶ್, ಗಂಗಾಧರ್ ಬಡಿಗೇರ್, ಮಹೇಶ್. ಸಿ, ಡಾ.ಪ್ರಮೋದ್, ಸಂಧ್ಯಾ ಪಿ.ಎಸ್, ಮಂಜುನಾಥ್ ಕುಕ್ಕವಾಡ, ಮಹೇಶ್ ನಾಡಗೌಡ

ಮತ್ತು 33 ಕಾರ್ಯಕಾರಿ ಸದಸ್ಯರು ಹಾಗೂ ಕೌನ್ಸಿಲ್ ಸದಸ್ಯರನ್ನು ಒಳಗೊಂಡ

171 ಮಂದಿಯ ಬಲಿಷ್ಠ ರಾಜ್ಯ ಸಮಿತಿಯನ್ನು ಚುನಾಯಿಸಲಾಯಿತು.

ಸಮ್ಮೇಳನದ ಸಮಾರೋಪದಲ್ಲಿ ಕಾಮ್ರೇಡ್ ಕೆ.ರಾಧಾಕೃಷ್ಣರವರು ಮಾತನಾಡಿ, "ಇಂದು ಸಮಾಜದಲ್ಲಿ ಬಿಕ್ಕಟ್ಟು ಸೃಷ್ಟಿಯಾಗುತ್ತಲೇ ಇದೆ, ಅಲ್ಲದೆ ಬಂಡವಾಳಶಾಹಿ ವ್ಯವಸ್ಥೆ ಲಾಭಕ್ಕಾಗಿ ಅಮಾನುಷ ಯುದ್ಧಗಳನ್ನು ಪ್ರಚೋದಿಸುತ್ತದೆ. ಚುನಾವಣೆಗಳಲ್ಲಿ ಪಕ್ಷಗಳನ್ನು ಬದಲಾಯಿಸಿ, ಮತ್ತೊಂದು ಪಕ್ಷವನ್ನು ಚುನಾಯಿಸುವುದರಿಂದ, ಇಂತಹ ಬಿಕ್ಕಟ್ಟುಗಳನ್ನು ಬಗೆಹರಿಸಿಕೊಳ್ಳಲು ಸಾಧ್ಯವಿಲ್ಲ. ಕಾರ್ಮಿಕ ವರ್ಗದ ನೇತೃತ್ವದಲ್ಲಿ ಸಮಾಜವಾದಿ ಕ್ರಾಂತಿಯೊಂದೇ ಇದಕ್ಕೆ ಪರಿಹಾರ.

"ಯಾವುದೇ ಚಳುವಳಿಗಳಿರಲೀ, ಅದರಲ್ಲಿ ಏಳು ಬೀಳುಗಳು ಇದ್ದೇ ಇರುತ್ತದೆ. ಚಳುವಳಿಗಳಿಗೆ ತಾತ್ಕಾಲಿವಾಗಿ ಹಿನ್ನಡೆಯಾಗಬಹುದು, ಆದರೆ ಅದು ತಾತ್ಕಾಲಿಕ. ಅಂತಿಮವಾಗಿ ಚಳುವಳಿಗಳಿಗೆ ಅಂದರೆ ಕ್ರಾಂತಿಕಾರಿ ವಿಚಾರಗಳಿಗೆ ಜಯವಿದ್ದೇ ಇರುತ್ತದೆ. ಮೊಟ್ಟಮೊದಲು ಕಾರ್ಮಿಕರನ್ನು ಮುನ್ನಡೆಸುವ ನಾಯಕರು ಸರಿಯಿರಬೇಕು. ವ್ಯಕ್ತಿತ್ವ ಪಾರದರ್ಶಕವಾಗಿರಬೇಕು. ವ್ಯಕ್ತಿಗತ ಅಹಂಭಾವ, ಎಲ್ಲವನ್ನೂ ಬಿಟ್ಟು ಬರಬೇಕು. ಹಾಗಾದಾಗ ಮಾತ್ರವೇ ಕಾರ್ಮಿಕ ಚಳುವಳಿಗಳನ್ನು ಸರಿಯಾದ ದಿಕ್ಕಿನಲ್ಲಿ ಮುನ್ನಡೆಸಲು ಸಾಧ್ಯ. ಇದೇ ನಮ್ಮ ಹಾಗೂ ಬೇರೆ ಸಂಘಟನೆಗೂ ಇರುವ ವ್ಯತ್ಯಾಸವಾಗಿದೆ. ನಮ್ಮ ನಾಯಕರಾದ ಕಾ.ಶಿವದಾಸ್ ಘೋಷ್‌ರವರು ಹೇಳಿದಂತೆ ನೈತಿಕ ಬೆನ್ನೆಲುಬು ಮುರಿದು ಹೋದರೆ ಯಾವುದೇ ದೇಶವಾಗಲೀ ಮುನ್ನಡೆಯವುದಿಲ್ಲ. ಕಾರ್ಲ್ ಮಾರ್ಕ್ಸ್‌ವರ ಸಮತಾವಾದ ಅತ್ಯಂತ ಮುಂದುವರೆದ ಕ್ರಾಂತಿಕಾರಿ ವಿಚಾರವಾಗಿದೆ. ಕಾರ್ಮಿಕ ವರ್ಗ ತನ್ನ ಹಾಗೂ ಇಡೀ ಮನುಕುಲದ ವಿಮುಕ್ತಿಗಾಗಿ ಸಮತಾವಾದಿ ವಿಚಾರವನ್ನು ತನ್ನ ಅಸ್ತ್ರವನ್ನಾಗಿಸಿಕೊಳ್ಳಬೇಕು. ಕಾರ್ಮಿಕ ಚಳುವಳಿಯು ಸಮತಾವಾದದ ಶಾಲೆಗಳಾಗಬೇಕು. ಈ ನಿಟ್ಟಿನಲ್ಲಿ ಕಾರ್ಮಿಕರು ಚಿಂತಿಸಬೇಕು" ಎಂದು ಕರೆ ನೀಡಿದರು.

**ಕಾರ್ಮಿಕರಲ್ಲಿ ರಾಜಕೀಯ ಪ್ರಜ್ಞೆ, ವರ್ಗ ಪ್ರಜ್ಞೆ, ವರ್ಗ ಸಂಸ್ಕೃತಿ ಬೆಳೆಸಬೇಕು**

**– ಕಾಮ್ರೇಡ್ ಶಂಕರ್‌ದಾಸ್ ಗುಪ್ತ**

ಕಾಮ್ರೇಡ್ ಶಂಕರ್‌ದಾಸ್ ಗುಪ್ತರವರು ಮಾತನಾಡಿ, "ಎಐಯುಟಿಯುಸಿಯ ನೇತೃತ್ವದಲ್ಲಿ ಹಲವು ಹೋರಾಟಗಳನ್ನು ಕಟ್ಟಿದ್ದೇವೆ. ನಾವು ಅನೇಕ ಆರ್ಥಿಕ ಬೇಡಿಕೆಗಳನ್ನು ಈಡೇರಿಸಿಕೊಂಡಿದ್ದೇವೆ. ಇದು ಸಾಲದು, ಕಾರ್ಮಿಕರಲ್ಲಿ ರಾಜಕೀಯ ಪ್ರಜ್ಞೆ, ವರ್ಗ ಪ್ರಜ್ಞೆ ಬೆಳೆಸಬೇಕಿದೆ. ಈ ಯುಗದ ಒಬ್ಬ ಮಹಾನ್ ಮಾರ್ಕ್ಸ್‌ವಾದಿ ಚಿಂತಕರಾದ ಕಾಮ್ರೇಡ್ ಶಿವದಾಸ್ ಘೋಷ ರವರ ಚಿಂತನೆಯ ಆಧಾರದ ಮೇಲೆ ಉನ್ನತ ನೈತಿಕತೆ, ಉದಾತ್ತ ರಾಜಕೀಯ ಚಿಂತನೆ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಬೆಳೆಸಿಕೊಂಡು ಹೋರಾಟಕ್ಕೆ ಸಜ್ಜಾಗಬೇಕಿರುವುದು ಈ ಗಳಿಗೆಯ ಅವಶ್ಯಕತೆ" ಎಂದು ನುಡಿದರು.

ಕಾರ್ಯಕ್ರಮದ ಕೊನೆಯಲ್ಲಿ ಎಐಯುಟಿಯುಸಿಯ ಮುಂದಿನ ಹೋರಾಟಗಳಿಗೆ ನಾಯಕತ್ವವನ್ನು ನೀಡಲು ನೂತನ ರಾಜ್ಯ ಸಮಿತಿಯನ್ನು ಆಯ್ಕೆ ಮಾಡಲಾಯಿತು.

# ಮುಡಾ ಹಗರಣ : ಮೂರು 'ದೊಡ್ಡ'ಪಕ್ಷಗಳ ಬಣ್ಣ ಬಯಲು

ಬಿಜೆಪಿ ಸರಕಾರದ ಬ್ರಹ್ಮಾಂಡ ಭ್ರಷ್ಟಾಚಾರವನ್ನು ಚುನಾವಣೆಯ ದಾಳವನ್ನಾಗಿಸಿಕೊಂಡು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಭರ್ಜರಿ ಜಯ ಸಾಧಿಸಿದ್ದು ಈಗ ಇತಿಹಾಸ. ಆದರೆ, ರಾಜ್ಯದಲ್ಲಿ ಅಧಿಕಾರಕ್ಕೆ ಬಂದ 15 ತಿಂಗಳ ಒಳಗೆ ಸಾಲುಸಾಲು ವಿವಾದಗಳು ಮತ್ತು ಭ್ರಷ್ಟಾಚಾರದ ಗಂಭೀರ ಆರೋಪಗಳನ್ನು ಎದುರಿಸುತ್ತಿರುವ ಸಿದ್ದರಾಮಯ್ಯ ಸರಕಾರ ಜನರನ್ನು ಮರುಚಿಂತನೆಗೆ ಹಚ್ಚಿದೆ.

### ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಗರಣ

ವಾಲ್ಮೀಕಿ ನಿಗಮದ ವ್ಯವಸ್ಥಾಪಕ ಪಿ.ಚಂದ್ರಶೇಖರ್ ಮೇ 26ರಂದು ಶಿವಮೊಗ್ಗದ ತಮ್ಮ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವ ಘಟನೆಯೊಂದಿಗೆ, ನಿಗಮದಲ್ಲಿ ನಡೆದ ಭ್ರಷ್ಟಾಚಾರದ ಹಗರಣ ಬಯಲಾಯಿತು. ನಿಗಮದ ಉನ್ನತಾಧಿಕಾರಿಗಳಿಂದ ಒತ್ತಡ ಇರುವುದಾಗಿ, ಅಕ್ರಮ ಹಣ ವರ್ಗಾವಣೆಗಾಗಿ ಕಿರುಕುಳ ಅನುಭವಿಸುತ್ತಿರುವುದರಿಂದ ತಾನು ಆತ್ಮಹತ್ಯೆಗೆ ಮೊರೆಹೋಗುತ್ತಿರುವುದಾಗಿ ಚಂದ್ರಶೇಖರ್ ಪತ್ರ ಬರೆದಿಟ್ಟು ಪ್ರಾಣ ಕಳೆದುಕೊಂಡಿದ್ದರು. ಇದು ರಾಜ್ಯದ ಜನರನ್ನು ದಂಗುಬಡಿಸಿದ್ದಲ್ಲದೇ, ಬಿಜೆಪಿ ಆಡಳಿತದ ದಿನಗಳ ನೆನಪು ಮರುಕಳಿಸುವಂತೆ ಮಾಡಿತು.

ಆದರೆ, ಕಾಂಗ್ರೆಸ್ ಸರಕಾರವು ಪ್ರಕರಣದ ನೈತಿಕ ಹೊಣೆಯನ್ನು ಹೊರದೆ, ವಿಶೇಷ ತನಿಖಾ ತಂಡ(**SIT**)ವನ್ನು ರಚಿಸಿ, ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಹವಣಿಸಿತು. ದಿನಗಳೆದಂತೆ ಬಂದ ಸುದ್ದಿಗಳು ನಿಗಮದಲ್ಲಿ 187 ಕೋಟಿ ರೂಪಾಯಿಗಳ ಹಗರಣ ನಡೆದಿದ್ದು, ಅದರಲ್ಲಿ 89 ಕೋಟಿ ರೂಪಾಯಿಗಳನ್ನು ಅಕ್ರಮವಾಗಿ ವಿವಿಧ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಲಾಗಿದೆ ಎಂಬ ಗುರುತರವಾದ ಆರೋಪಗಳನ್ನು ಹೊತ್ತು ತಂದವು. ಆ ಕೃತ್ಯಗಳಲ್ಲಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಜೆ.ಜಿ ಪದ್ಮನಾಭ ಮತ್ತು ಲೆಕ್ಕಾಧಿಕಾರಿ ಪರಶುರಾಮ ಭಾಗಿಯಾಗಿರುವುದು ಹಾಗೂ ಮಂತ್ರಿ ಬಿ.ನಾಗೇಂದ್ರ ಅವರ ಪಾತ್ರ ಇರುವ ಆರೋಪಗಳು ಕೇಳಿ ಬಂದವು.

ಈ ಹಂತದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ನಿಗಮದಲ್ಲಿ ಅಕ್ರಮ ಹಣದ ವರ್ಗಾವಣೆ ನಡೆದಿರುವುದನ್ನು ಒಪ್ಪಿಕೊಂಡರೂ ಸಹ ತಮ್ಮ ಸಂಪುಟದ ಸಹೋದ್ಯೋಗಿ ಮಂತ್ರಿ ಬಿ.ನಾಗೇಂದ್ರರ ಪಾತ್ರ ಇಲ್ಲವೇ ಇಲ್ಲ ಎಂದು ಸಮರ್ಥಿಸಿಕೊಂಡರು.

ಈ ಮಧ್ಯೆ ಜಾರಿ ನಿರ್ದೇಶನಾಲಯ(**ED**)ವು ಮಧ್ಯ ಪ್ರವೇಶ ಮಾಡಿ ಸ್ವತಂತ್ರ ತನಿಖೆಯನ್ನಾರಂಭಿಸಿತು. ಪ್ರಸಕ್ತ **SIT** ಮತ್ತು **ED** ತನಿಖೆಗಳು ಮುಂದುವರೆದಿದ್ದು, ನಿಗಮದ 12ಕ್ಕೂ ಹೆಚ್ಚು ಜನ ಅಧಿಕಾರಿಗಳು ಜೈಲು ಸೇರಿದ್ದಾರೆ. ಆರಂಭದಲ್ಲಿ ತಾನು ಯಾವ ತಪ್ಪು ಮಾಡಿಲ್ಲವೆಂದು ಎಲ್ಲಾ ಆರೋಪಗಳನ್ನು ಅಲ್ಲಗಳೆದಿದ್ದ ಸಚಿವ ಬಿ.ನಾಗೇಂದ್ರ ನಂತರ ರಾಜೀನಾಮೆ ಕೊಟ್ಟು ತನಿಖೆ ಎದುರಿಸಿ ಕೊನೆಗೆ ಜೈಲು ಸೇರಿ, ಈಗ ಜಾಮೀನಿನ ಮೇಲೆ ಹೊರಗೆ ಬಂದಿದ್ದಾರೆ. ವರ್ಷ ಕಳೆಯುವುದರೊಳಗೆ ಹಗರಣಕ್ಕೆ ಸಾಕ್ಷಿಯಾಗಿ ಸಂಪುಟದ ಸಚಿವರೊಬ್ಬರ ಪತನವಾದ ಅಪಕೀರ್ತಿಯನ್ನು ಕಾಂಗ್ರೆಸ್ ಹೊರಬೇಕಾಯಿತು. ಭ್ರಷ್ಟಾಚಾರ ಮುಕ್ತ ಆಡಳಿತ ನೀಡುವ ವಾಗ್ದಾನ ಮಾಡಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪಕ್ಷ ರಾಜ್ಯದ ಜನಗಳ ಮುಂದೆ ಈಗ ಅಪರಾಧಿ ಸ್ಥಾನದಲ್ಲಿ ನಿಂತಿದೆ.

### ಮುಡಾ ಹಗರಣ

ವಾಲ್ಮೀಕಿ ಹಗರಣದ ಬಿಸಿಗಾಳಿ ರಾಜ್ಯವನ್ನು ಆವರಿಸಿಕೊಂಡಿರುವ ಸಮಯದಲ್ಲೇ ಮುಡಾ ವಿವಾದ ಹುಟ್ಟಿಕೊಂಡು ದೊಡ್ಡ ರಾಜಕೀಯ ಬಿರುಗಾಳಿಯನ್ನೇ ಸೃಷ್ಟಿಸಿತು. ಮೈಸೂರು ನಗರ ಅಭಿವೃದ್ಧಿ ಪ್ರಾಧಿಕಾರ(ಮುಡಾ)ದ ವಿವಾದಾತ್ಮಕ ಕ್ರಮಗಳು ನಂತರ ಹಗರಣ ಸ್ವರೂಪವನ್ನು ಪಡೆದು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಕೊರಳಿಗೆ ಸುತ್ತಿಕೊಂಡಿದ್ದು, ಅವರನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸಿತು.

### ಏನಿದು ಮುಡಾ ಹಗರಣ?

ಸಾಮಾಜಿಕ ಕಾರ್ಯಕರ್ತ ಟಿ.ಜೆ. ಅಬ್ರಹಾಂ, ಸ್ನೇಹಮಯಿ ಕೃಷ್ಣ, ಪ್ರದೀಪ್ ಕುಮಾರ್ ಎಸ್.ಪಿ – ಈ ಮೂವರು ವ್ಯಕ್ತಿಗಳು ಪ್ರತ್ಯೇಕವಾಗಿ ರಾಜ್ಯಪಾಲರಿಗೆ ದೂರು ಅರ್ಜಿಗಳನ್ನು ಸಲ್ಲಿಸಿದ್ದು, ಮುಡಾ ಅಕ್ರಮವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಪಾರ್ವತಿಯವರಿಗೆ ಮೈಸೂರಿನ ಹೃದಯ ಭಾಗದಲ್ಲಿರುವ ಬಡಾವಣೆಯಲ್ಲಿ 14 ಸೈಟುಗಳನ್ನು ನೀಡಿದೆ, ಹಲವು ಹಂತಗಳಲ್ಲಿ ತಪ್ಪುಗಳಾಗಿವೆ, ಸಿದ್ದರಾಮಯ್ಯನವರು ಪ್ರಭಾವವನ್ನು ಬಳಸುವುದರ ಮೂಲಕ ಅಕ್ರಮದಲ್ಲಿ ಭಾಗಿಯಾಗಿದ್ದಾರೆ, ಅವರ ಮೇಲೆ ಕಾನೂನು ಕ್ರಮವನ್ನು ಜರುಗಿಸಬೇಕು ಎಂದು ಒತ್ತಾಯಿಸಿದ್ದರು. ಮನವಿ ಸ್ವೀಕರಿಸಿದ 24 ಗಂಟೆಯೊಳಗೆ ಚುರುಕಾದ ರಾಜ್ಯಪಾಲರು, ಮುಖ್ಯಮಂತ್ರಿಯವರಿಗೆ ನೋಟೀಸ್ ಜಾರಿ ಮಾಡಿದ್ದರು. ನಂತರ ರಾಜ್ಯಪಾಲರನ್ನು ಭೇಟಿ ಮಾಡಿ ಮುಖ್ಯಮಂತ್ರಿ ಪ್ರತ್ಯಕ್ಷವಾಗಿ ಆಗಲಿ ಅಥವಾ ಪರೋಕ್ಷವಾಗಿ ಆಗಲಿ ಈ ಪ್ರಕರಣದಲ್ಲಿ ತಮ್ಮ ಯಾವುದೇ ಪಾತ್ರ ಇಲ್ಲವೆಂದು ಸ್ಪಷ್ಟನೆ ನೀಡಿದರು. ಮುಖ್ಯಮಂತ್ರಿಗಳ ವಿರುದ್ಧ ಭ್ರಷ್ಟಾಚಾರ ನಿಗ್ರಹ ಕಾಯ್ದೆ, 1998ರ ಅನುಬಂಧ 170 ಹಾಗೂ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023ರ ಅನುಬಂಧ 218ರ ಅನ್ವಯ ಕಾನೂನು ಕ್ರಮ ಜರುಗಿಸಲು ರಾಜ್ಯಪಾಲರು ಅನುಮತಿ ನೀಡಿ ಆದೇಶ ಹೊರಡಿಸಿದರು. ಇದು ರಾಜ್ಯದಲ್ಲಿ ದೊಡ್ಡ ಬಿರುಗಾಳಿಯನ್ನು ಎಬ್ಬಿಸಿತು. ತಮ್ಮ ನಲವತ್ತು ವರ್ಷಗಳ ಕಾಲಾವಧಿಯ ರಾಜಕೀಯ ಜೀವನದಲ್ಲಿ ಒಂದೇ ಒಂದು ಸಣ್ಣ ಕಪ್ಪು ಚುಕ್ಕೆಯೂ ಇರದಂತೆ ನಡೆದುಕೊಂಡಿರುವ ಸಿದ್ದರಾಮಯ್ಯನವರ ಮೇಲೆ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ರಾಜ್ಯಪಾಲರ ಸ್ಥಾನವನ್ನು ದುರ್ಬಳಕೆ ಮಾಡಿಕೊಂಡು ಸೇಡಿನ ರಾಜಕಾರಣ ಮಾಡುತ್ತಿವೆ, ಅಂತಿಮವಾಗಿ ರಾಜ್ಯ ಸರಕಾರವನ್ನು ಅಲುಗಾಡಿಸಲು ಪ್ರಯತ್ನ ಮಾಡುತ್ತಿವೆ ಎಂದು ಕಾಂಗ್ರೆಸ್ ಪಕ್ಷ ಮತ್ತು ಸಿದ್ದರಾಮಯ್ಯನವರ ಬೆಂಬಲಿಗರು ಆರೋಪಿಸಿದರೆ, ಅಕ್ರಮ ನಡೆದಿಲ್ಲ ಎನ್ನುವುದಾದರೆ ತನಿಖೆಗೆ ಹೆದರುವುದೇಕೆ ಎಂದು ವಿರೋಧ ಪಕ್ಷಗಳು ಪಟ್ಟು ಹಿಡಿಯುವುದರೊಂದಿಗೆ ವಿವಾದವು ತಾರಕಕ್ಕೆ ಹೋಯಿತು.

ಈ ಮಧ್ಯೆ ಮುಖ್ಯಮಂತ್ರಿಗಳು ರಾಜ್ಯದ ಉಚ್ಚ ನ್ಯಾಯಾಲಯದ ಮೊರೆ ಹೋಗಿ ತನಿಖೆಗೆ ತಡೆ–ಯಾಜ್ಞೆ ನೀಡಬೇಕೆಂದು ಕೋರಿದ ಅರ್ಜಿಯು ತಿರಸ್ಕೃತಗೊಂಡು, ಇದು ತನಿಖೆಗೆ ಯೋಗ್ಯವಾದ ಪ್ರಕರಣ ಎಂದು ಆದೇಶ ಬಂದಿತು! ಈಗ ಮೇಲ್ಮನವಿಯೊಂದು ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ಮುಂದೆ ಇದ್ದು, ಅದು ವಿಚಾರಣೆಯ ಹಂತದಲ್ಲಿದೆ.

### ವಿವಾದವೇನು?

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಪಾರ್ವತಿಯವರು ತಮ್ಮ ಖಾಸಾ ಅಣ್ಣ ಮಲ್ಲಿಕಾರ್ಜುನ ಸ್ವಾಮಿಯವರಿಂದ ದಾನವಾಗಿ ಪಡೆದಿದ್ದ 3.16 ಎಕ–ರೆ ಜಮೀನನ್ನು ನಿವೇಶನಗಳನ್ನಾಗಿ ಪರಿವರ್ತಿಸಲು ಮುಡಾ ವಶಕ್ಕೆ ಪಡೆದುಕೊಂಡಿದ್ದು, ಅದಕ್ಕೆ ಪರಿಹಾರ ರೂಪವಾಗಿ 14 ನಿವೇಶನಗಳನ್ನು ಪಾರ್ವತಿಯವರಿಗೆ ಮಂಜೂರು ಮಾಡಿದ್ದು ವಿವಾದಿತ ಪ್ರಕರಣ. ಆದ–ರೆ ಪಾರ್ವತಿಯವರಿಂದ ತೆಗೆದುಕೊಂಡ 3.16 ಎಕರೆ ಭೂಮಿಯ ಬೆಲೆಗೆ ಪರಿಹಾರ ರೂಪವಾಗಿ ಮುಡಾ ಮೈಸೂರಿನ ಪ್ರತಿಷ್ಠಿತ ಬಡಾವಣೆಯಲ್ಲಿ 38,284 ಚದರಡಿಗಳ14 ನಿವೇಶನಗಳನ್ನು ನೀಡಿದ್ದು ಸಹಜ ನ್ಯಾಯದ ಉಲ್ಲಂಘನೆಯಾಗಿದ್ದು, ಇದು ಅಕ್ರಮವೇ ಸರಿ ಎಂದು ವಾದಿಸಲಾಗುತ್ತಿದೆ. ಮುಖ್ಯಮಂತ್ರಿಯವರನ್ನು ಒಳಗೊಂಡಿರುವ ಪ್ರಕರಣವೂ ಒಳಗೊಂಡು ಇತರೆಲ್ಲಾ ಪಕ್ಷಗಳಿಗೆ ಸೇರಿದ ರಾಜಕಾರಣಿಗಳು, ಅಧಿಕಾರಿಗಳು ಹಾಗೂ ಸಮಾಜದ ಪ್ರಭಾವಿ ವ್ಯಕ್ತಿಗಳೆಲ್ಲರೂ ಸೇರಿದಂತೆ ತಾನು ಲೇಔಟ್ ಮಾಡಲು ವಶಕ್ಕೆ ಪಡೆದ ಜಮೀನಿಗೆ ಪರಿಹಾರಾತ್ಮಕವಾಗಿ 50:50 ಅನುಪಾತದ ಆಧಾರದಲ್ಲಿ ಹಂಚಿಕೆ ಮಾಡಿರುವ ಪರ್ಯಾಯ ನಿವೇಶನಗಳ ವಿಷಯದಲ್ಲೇ ಮುಡಾ ಭಾರಿ ಹಗರಣದಲ್ಲಿ ಸಿಲುಕಿದೆ ಮತ್ತು ಒಟ್ಟಾರೆಯಾಗಿ ಅದರ ಮೌಲ್ಯ ಅಂದಾಜು ರೂ.3000ಕೋಟಿಯಿಂದ ರೂ.4000 ಕೋಟಿ ಆಗಬಹುದು ಎಂಬುದು ವಿರೋಧಿಗಳ ಅಂಬೋಣ.ಇತ್ತೀಚೆಗೆ, ಮುಖ್ಯಮಂತ್ರಿಯವರ ಪತ್ನಿ ಪಾರ್ವತಿ ತಮಗೆ ನೀಡಲಾಗಿದ್ದ 14 ನಿವೇಶನಗಳನ್ನು ಹಿಂದಿರುಗಿಸಿದ್ದಾರೆ. ಆದರೆ ಈ ಕೆಲಸವನ್ನು ವಿವಾದ ಸೃಷ್ಟಿಗೆ ಮುನ್ನಾದಿನಗಳಲ್ಲೇ ಮಾಡಿದ್ದರೆ, ಅವರ ಘನತೆ ಹೆಚ್ಚುತ್ತಿತ್ತೇನೋ! **ED** ತನಿಖೆ ನಡೆಸುವ ಮುನ್ಸೂಚನೆ ಸಿಕ್ಕ ನಂತರ ನಿವೇಶಗಳನ್ನು ಹಿಂತಿರುಗಿಸಿದ್ದು ಪ್ರಬುದ್ಧ ನಡೆಯಾಗಲಿಲ್ಲ ಎನ್ನುವ ಟೀಕೆಗಳು ಬಂದಿವೆ.

### ರಾಜಕೀಯ ಕೆಸರೆರಚಾಟ

ವಾಲ್ಮೀಕಿ ಮತ್ತು ಮುಡಾ ಹಗರಣಗಳ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕೆಂದು ಆಗ್ರಹಿಸುತ್ತಿರುವ ವಿರೋಧ ಪಕ್ಷಗಳು ಸತತವಾಗಿ ಇದನ್ನು ಬೀದಿಕಾಳಗದ ವಿಷಯವನ್ನಾಗಿಸಿವೆ. ಈ ವಿಷಯದ ಕುರಿತು ಸಮಗ್ರವಾಗಿ ಚರ್ಚೆ ಮಾಡಲು ವಿಧಾನಸಭಾ ಅಧಿವೇಶನದಲ್ಲಿ ಸಮಯ ಕೇಳಿದರೂ ಆಡಳಿತಾರೂಢ ಕಾಂಗ್ರೆಸ್ ಪಕ್ಷ ಚರ್ಚೆಗೆ ಅನುಮತಿ ನೀಡದೆ ನುಣುಚಿಕೊಂಡಿದೆ. SIT ರಚನೆ ಮಾಡಿ ತನಿಖೆ ಮಾಡಿದರೆ, ಮುಖ್ಯಮಂತ್ರಿಯವರ ಅಧೀನದಲ್ಲಿರುವ ಪೊಲೀಸ್ ಅಧಿಕಾರಿಗಳಿಂದ ನಿಷ್ಪಕ್ಷಪಾತ ತನಿಖೆ ನಡೆಸಲು ಹೇಗೆ ಸಾಧ್ಯವಾಗುತ್ತದೆ ಎನ್ನುವ ಪ್ರಶ್ನೆಗಳನ್ನು ಇತರ ಪಕ್ಷಗಳು ಎತ್ತಿವೆ.

ಈ ನಡುವೆ ಬೆಂಗಳೂರಿನಿಂದ ಮೈಸೂರಿನವರೆಗೆ ಪಾದಯಾತ್ರೆ ಹಮ್ಮಿಕೊಂಡ ಬಿಜೆಪಿ–ಜೆಡಿಎಸ್‌ಗಳು ಮುಖ್ಯಮಂತ್ರಿಗಳು ರಾಜೀನಾಮೆ ನೀಡುವವರೆಗೂ "ಹೋರಾಟವನ್ನು" ಮುಂದುವರೆಸುವುದಾಗಿ ಹೇಳಿಕೊಂಡಿವೆ. ಪ್ರತಿಪಕ್ಷಗಳ ಈ ನಡೆಯನ್ನು ಖಂಡಿಸಿ ಆಡಳಿತಾರೂಢ ಕಾಂಗ್ರೆಸ್ ಪಕ್ಷವು ಸಿದ್ದರಾಮಯ್ಯನವರ ತವರು ಜಿಲ್ಲೆ ಮೈಸೂರಿನಲ್ಲಿ ಬೃಹತ್ ಬಹಿರಂಗ ಸಭೆಯನ್ನು ಆಯೋಜಿಸಿ, ಬಿಜೆಪಿ ನೇತೃತ್ವದಲ್ಲಿ ಕೇಂದ್ರ ಸರಕಾರದ ಹುನ್ನಾರದ ಭಾಗವಾಗಿ ರಾಜ್ಯದಲ್ಲಿ ಪ್ರತಿಪಕ್ಷಗಳ ಹೋರಾಟ ನಡೆಯುತ್ತಿದೆ ಎಂದು ಆರೋಪಿಸಿದೆ. ಇದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರ ದೇಶದಲ್ಲಿನ ವಿರೋಧ ಪಕ್ಷಗಳ ಆಡಳಿತವಿರುವ ರಾಜ್ಯಗಳಲ್ಲಿ ಅಲ್ಲಿನ ಮುಖ್ಯಮಂತ್ರಿಗಳ ಮೇಲೆ ಕೇಂದ್ರೀಯ ಸಂಸ್ಥೆಗಳನ್ನು ಬಳಸಿಕೊಂಡು ಸುಳ್ಳು ಮೊಕದ್ದಮೆಗಳನ್ನು ಹೂಡುವ ಮೂಲಕ ರಾಜ್ಯ ಸರಕಾರಗಳನ್ನು ಅಸ್ಥಿರಗೊಳಿಸುತ್ತಿರುವ ಭಾಗವಾಗಿದೆ ಮತ್ತು ಇದರಲ್ಲಿ ಹಿಂದುಳಿದ ವರ್ಗದ ಪ್ರಭಾವಿ ನಾಯಕ ಸಿದ್ಧರಾಮಯ್ಯನವರನ್ನು ಅಧಿಕಾರದಿಂದ ಕೆಳಗಿಳಿಸುವ ಯೋಜನೆ ಅಡಗಿದೆ ಎನ್ನುವ ರಾಜಕೀಯ ಆರೋಪ–ಪ್ರತ್ಯಾರೋಪಗಳು ನಡೆದಿವೆ.

### ಬಿಜೆಪಿ ಮತ್ತು ಜೆಡಿಎಸ್ ಮುಖಂಡರ ಮೇಲೆ ಇದ್ದ ಭ್ರಷ್ಟಾಚಾರದ ಮೊಕದ್ದಮೆಗಳನ್ನು ಮರುಪರಿಶೀಲಿಸಲು ರಾಜ್ಯ ಸರಕಾರದ ಕ್ರಮ

ಈ ಎಲ್ಲಾ ಬೆಳವಣಿಗೆಗಳ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಗೃಹ ಸಚಿವ ಜಿ. ಪರಮೇಶ್ವರ ನೇತೃತ್ವದಲ್ಲಿ ಐವರು ಸಚಿವರನ್ನೊಳಗೊಂಡ ಸಮಿತಿಯನ್ನುರಚಿಸಿದ್ದು,ಬಿಜೆಪಿ–ಜೆಡಿಎಸ್‌ನಾಯಕರ ವಿರುದ್ಧದ ಮೊಕದ್ದಮೆಗಳನ್ನು ಮರುಪರಿಶೀಲಿಸಿ ಕ್ರಮಕೈಗೊಳ್ಳುವ ಜವಾಬ್ದಾರಿಯನ್ನು ನೀಡಿದ್ದಾರೆ. ಕಾನೂನು ಸಚಿವ ಎಚ್.ಕೆ. ಪಾಟೀಲ್, ಕಂದಾಯ ಸಚಿವ ಕೃಷ್ಣ ಭೈರೇಗೌಡ, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಕಾರ್ಮಿಕ ಸಚಿವ ಸಂತೋಷ್ ಲಾಡ್ ಈ ಸಮಿತಿಯಲ್ಲಿ ಇದ್ದಾ–ರೆ. ಸೆಪ್ಟೆಂಬರ್ 13ರಂದು ಮೊದಲ ಸಭೆ ಸೇರಿ ಚರ್ಚೆ ನಡೆಸಿದ ನಂತರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಸಚಿವ ಪರಮೇಶ್ವರ ಅವರು, ಬಿಜೆಪಿ ನಾಯಕರು ಆಪಾದಿತರಾಗಿರುವ 20–25 ಹಗರಣಗಳನ್ನು ನಾವು ಪಟ್ಟಿ ಮಾಡಿದ್ದೇವೆ. ಸಂಬಂಧಪಟ್ಟ ಹಗರಣಗಳ ಕಡತಗಳನ್ನು ಪರಿಶೀಲಿಸಿ ತನಿಖೆಯನ್ನು ಚುರುಕುಗೊಳಿಸುತ್ತೇವೆ ಎಂದು ಬಹಿರಂಗವಾಗಿಯೇ ಹೇಳಿದ್ದಾರೆ. ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿಯವರ ಮೇಲಿನ ಮೊಕದ್ದಮೆಗಳು ಈಗ ಮರು ಜೀವ ಪಡೆದು–ಕೊಂಡಿದ್ದು, ಅವರು ತನಿಖಾ ಸಂಸ್ಥೆಗಳ ವಿಚಾರಣೆಗೆ ಒಳಪಡುತ್ತಿದ್ದಾರೆ. ಮೈಸೂರಿನಲ್ಲಿ ನಡೆದ ಬಹಿರಂಗ ಸಭೆಯಲ್ಲೂ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾತನಾಡಿ, ನಾನು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ತಕ್ಷಣ ಬಿಜೆಪಿ–ಜೆಡಿಎಸ್ ನಾಯಕರ ಮೇಲಿದ್ದ ಭ್ರಷ್ಟಾಚಾರದ ಹಗರಣಗಳ ಮೇಲೆ ಕ್ರಮ ಕೈಗೊಂಡಿದ್ದರೆ, ನನಗೆ ಇಂದು ಈ ಸ್ಥಿತಿ ಬರುತ್ತಿರಲಿಲ್ಲ ಎಂದು ಹತಾಶರಾಗಿ ನುಡಿದಿದ್ದರು.

ಮುಡಾ ಹಗರಣದ ಸುತ್ತ ಕಾಂಗ್ರೆಸ್ ಪಕ್ಷ, ಅದರ ನೇತಾರರು ಮತ್ತು ಸರಕಾರದ ನಡೆಗಳನ್ನು ಗಮನಿಸಿದಾಗ ಕಾಣುವುದೇನು? ನಿಮ್ಮ ಪ್ರತಿಭಟನೆಗಳು, ವಿರೋಧಗಳು ಮಿತಿಯಲ್ಲಿರಲಿ ಎಂದು ವಿರೋಧ ಪಕ್ಷಗಳಿಗೆ ಆಡಳಿತಾರೂಢರು ಕಿವಿಮಾತು ಹೇಳಿದಂತಿದೆ! ಇದು, ಜನರ ಗಮನವನ್ನು ಬೇರೆಡೆಗೆ ಸೆಳೆದು ಒಬ್ಬರ ನಂತರ ಇನ್ನೊಬ್ಬರು ಅಧಿಕಾರ ಹಂಚಿಕೊಳ್ಳೋಣ, "ಹೊಂದಾಣಿಕೆ" ರಾಜಕೀಯ ಮಾಡೋಣ. ಸರಕಾರದ ಬೊಕ್ಕಸವನ್ನು, ಸಾರ್ವಜನಿಕ ಆಸ್ತಿಯನ್ನು ಸಮಾನವಾಗಿ ಲೂಟಿ ಮಾಡೋಣ. ತಮ್ಮ ನಿಷ್ಠ ಬಂಡವಾಳಗಾರರಿಗೆ ಅನುಕೂಲವಾಗುವ ನೀತಿಗಳನ್ನು ಅಭಾದಿತವಾಗಿ ಜಾರಿಗೊಳಿಸೋಣ ಅನ್ನುವುದೇ ಅಲ್ಲವೇ?

### ಬಂಡವಾಳಶಾಹಿ ವ್ಯವಸ್ಥೆಯ ಬಿಕ್ಕಟ್ಟು, ಅದನ್ನು ಕಾಪಾಡುತ್ತಿರುವ ಪಕ್ಷಗಳನ್ನು ಕಾಡುತ್ತಿದೆ

ಕಳೆದ ಒಂದು ವರ್ಷದಲ್ಲಿ ರಾಜ್ಯದ ಜನತೆ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷಗಳ ಕಿತ್ತಾಟ, ಆರೋಪ–ಪ್ರತ್ಯಾರೋಪಗಳನ್ನು ಕೇಳಿ ರೋಸಿ ಹೋಗಿದ್ದಾರೆ. ಮೂರು ಪಕ್ಷಗಳ ನಾಯಕರನ್ನೂ ಭ್ರಷ್ಟಾಚಾರದ ಹಗರಣಗಳು, ಲೈಂಗಿಕ ಹಗರಣಗಳು, ಸ್ವಜನ ಪಕ್ಷಪಾತ, ಕುಟುಂಬ ರಾಜಕಾರಣದ ಆರೋಪಗಳು ಸುತ್ತುವರೆದಿವೆ. ವಾಲ್ಮೀಕಿ, ಮುಡಾ ಹಗರಣಗಳು ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಪಕ್ಷವನ್ನು, ಅದರ ಮುಖವಾಡವನ್ನು ಬಯಲಿಗೆಳೆಯುವುದರ ಜೊತೆಗೆ, ಈಗಾಗಲೇ ಅದೇ ಭ್ರಷ್ಟಾಚಾರದ ಕರಿನೆರಳಲ್ಲಿ ಮುಳುಗೆದ್ದ ಬಿಜೆಪಿ–ಜೆಡಿಎಸ್ ಪಕ್ಷಗಳ ಕರಾಳ ಮುಖಗಳನ್ನೂ ಬಯಲು ಮಾಡಿವೆ. ಪ್ರಚಂಡ ಕುಖ್ಯಾತಿಯನ್ನು ಪಡೆದಿದ್ದ ರಾಜ್ಯದ ಗಣಿ ಹಗರಣದ ಫಲಾನುಭವಿಗಳು ಈ ಮೂರು ಪಕ್ಷಗಳಲ್ಲಿ ನಾಯಕರಾಗಿ ಮೆರೆಯುತ್ತಿದ್ದಾರೆ. ಅಧಿಕಾರಕ್ಕಾಗಿ ನೇತಾರರು ಈ ಮೂರು ಪಕ್ಷಗಳನ್ನು ತೊಡುವ ಅಂಗಿಯಂತೆ ಬದಲಿಸಿದ್ದಾರೆ. ರಾಜ್ಯ ಮತ್ತು ಜನರನ್ನು ಲೂಟಿ ಮಾಡಲು ಸಂದರ್ಭಾನುಸಾರ ಈ ಮೂರು ಪಕ್ಷಗಳು ಹೊಂದಾಣಿಕೆ ಮಾಡಿಕೊಂಡು ಆಡಳಿತ ನಡೆಸಿ ಅಧಿಕಾರವನ್ನು ಅನುಭವಿಸಿವೆ. ಅಧಿಕಾರಕ್ಕಾಗಿ ಕಚ್ಚಾಟ, ಒಳಜಗಳ, ಗುಂಪುಗಾರಿಕೆ, ಪಕ್ಷಾಂತರ, ಈ ಮೂರೂ "ದೊಡ್ಡ" ಪಕ್ಷಗಳನ್ನು ಬಿಟ್ಟಿಲ್ಲ. ಆರ್ಥಿಕ ಬಿಕ್ಕಟ್ಟಿನಿಂದಾಗಿ ಬಂಡವಾಳಶಾಹಿ ವ್ಯವಸ್ಥೆ ಎದುರಿಸುತ್ತಿರುವ ಅಸ್ಥಿರತೆ ಮತ್ತು ಬಿಕ್ಕಟ್ಟು ಈ ಪಕ್ಷಗಳನ್ನೂ ಆವರಿಸಿವೆ.

ಆದ್ದರಿಂದ, ಈ ಮೂರು ಪಕ್ಷಗಳ ನಡುವೆ ಮೇಲುಮೇಲೆ ಕಾಣುವ ವ್ಯತ್ಯಾಸಗಳು ಏನೇ ಇದ್ದರೂ, ಅಂತಿಮವಾಗಿ ಈ ಪಕ್ಷಗಳು ಶೋಷಕ ಬಂಡವಾಳಶಾಹಿ ವ್ಯವಸ್ಥೆಯನ್ನು ರಕ್ಷಿಸುವ ಕಾಯಕದಲ್ಲಿ ನಿರತವಾಗಿವೆ. ಹಾಗಾಗಿ, ಈ ಪಕ್ಷಗಳು ಮಾಡುವ ಹುಸಿ ಜಗಳ ಜನರಿಗೆ "ಮನರಂಜನೆ" ನೀಡಿದರೂ, ಅಂತಿಮವಾಗಿ ಅವು ಜಾರಿಗೊಳಿಸುತ್ತಿರುವ ನೀತಿಗಳು ಸಮಾನವಾಗಿ ಜನವಿರೋಧಿಯಾಗಿವೆ. ನಿರುದ್ಯೋಗ, ಬೆಲೆ ಏರಿಕೆ, ಬಡತನ, ಶಿಕ್ಷಣದ ವ್ಯಾಪಾರೀಕರಣ ಹೆಚ್ಚುತ್ತಲೇ ಇವೆ. ಅಸಂಖ್ಯಾತ ಜನಗಳ ಆದಾಯ ಕುಸಿತ ಕಂಡರೆ, ಬೆರಳೆಣಿಕೆಯಷ್ಟು ಬಂಡವಾಳಗಾರರ ಆದಾಯ ಮಿತಿಯಿಲ್ಲದೆ ಹೆಚ್ಚುತ್ತಿದೆ. ಇದಕ್ಕೆ ಈ ಪಕ್ಷಗಳು ಅನುಸರಿಸುತ್ತಿರುವ ಬಂಡವಾಳಶಾಹಿ ಪರ ನೀತಿಗಳೇ ಕಾರಣ. ಆದ್ದರಿಂದ, ಜನಹಿತ ಮರೆತು ಜನವಿರೋಧಿ ನೀತಿಗಳನ್ನು ಜಾರಿಗೊಳಿಸುತ್ತಿರುವ ಈ ಪಕ್ಷಗಳನ್ನು ಸೋಲಿಸಲು ಪ್ರಬಲ ಜನಾಂದೋಲನಗಳನ್ನು ರೂಪಿಸಬೇಕಾಗಿದೆ.

...1ನೇ ಪುಟದಿಂದ

## ದಾವಣಗೆರೆ ಬಂದ್

ಸಿ. ಸುಧಾಕರ್ ಅವರನ್ನು ಭೇಟಿ ಮಾಡಲಾಯಿತು. ಸಚಿವರಿಂದ ಯಾವುದೇ ಸಕಾರಾತ್ಮಕ ಪ್ರತಿಕ್ರಿಯೆ ದೊರೆಯದ್ದರಿಂದ ಹೋರಾಟವನ್ನು ತೀವ್ರಗೊಳಿಸಲು ನಿರ್ಧರಿಸಲಾಯಿತು. ಅಂತಿಮವಾಗಿ, ಜನರ ಬೆಂಬಲದೊಂದಿಗೆ ವಿದ್ಯಾರ್ಥಿಗಳು ಅಕ್ಟೋಬರ್ 16 ರಂದು ಜನತೆಯ ಸ್ವಯಂಪ್ರೇರಿತ ದಾವಣಗೆರೆ ಬಂದ್‌ಗೆ ಕರೆ ನೀಡಿದರು!

ರೈತರು, ಕಾರ್ಮಿಕರು, ಮಧ್ಯಮವರ್ಗದವರು ಸೇರಿದಂತೆ ಎಲ್ಲಾ ಜನಸಾಮಾನ್ಯರ ಮಕ್ಕಳು ಮೊಳಗಿಸಿದ ದಾವಣಗೆರೆ ಬಂದ್‌ನ ರಣಕಹಳೆಗೆ, ಎಲ್ಲೆಡೆಯಿಂದ ಅಭೂತಪೂರ್ವ ಬೆಂಬಲ ಮತ್ತು ಪ್ರತಿಕ್ರಿಯೆ ವ್ಯಕ್ತವಾಯಿತು. ಅನೇಕ ರೈತ ಸಂಘಟನೆಗಳು, ಕಾರ್ಮಿಕ ಸಂಘಟನೆಗಳು, ದಲಿತ ಸಂಘಟನೆಗಳು, ಕನ್ನಡಪರ ಸಂಘಟನೆಗಳು ಸೇರಿದಂತೆ ಅನೇಕರು ಈ ಹೋರಾಟಕ್ಕೆ ಬೆನ್ನೆಲುಬಾಗಿ ನಿಂತರು. ದಸರಾ ಹಬ್ಬದ ಮಧ್ಯೆ ವಿದ್ಯಾರ್ಥಿಗಳು ನಡೆಸುತ್ತಿದ್ದ ಬಂದ್ ಪ್ರಚಾರಕ್ಕೆ ಸ್ಫೂರ್ತಿಯುತವಾಗಿ ಪ್ರತಿಕ್ರಿಯಿಸಿದ ದಾವಣಗೆರೆಯ ಜನರು ಮಾರುಕಟ್ಟೆ, ಬಸ್ ನಿಲ್ದಾಣ ಸೇರಿದಂತೆ ವಿವಿಧ ಸಾರ್ವಜನಿಕ ಸ್ಥಳಗಳಲ್ಲಿ ಉದಾರವಾಗಿ ದೇಣಿಗೆ ನೀಡಿದರು. ಹೋರಾಟದ ಪ್ರಚಾರಾರ್ಥವಾಗಿ ನಗರದ ವಿವಿಧೆಡೆ ಪೋಸ್ಟರ್‌ಗಳನ್ನು ಅಂಟಿಸುತ್ತಿದ್ದ ವಿದ್ಯಾರ್ಥಿಗಳನ್ನು ಜನರು ಮುಕ್ತಕಂಠದಿಂದ ಹಾರೈಸಿದರು. ಹಗಲಿರುಳೆನ್ನದೆ ನಗರದಾದ್ಯಂತ ಪೋಸ್ಟರ್ ಅಂಟಿಸಿ ವಿದ್ಯಾರ್ಥಿಗಳು ಬಂದ್ ಕುರಿತು ಪ್ರಚಾರ ಮಾಡಿದರು ಹಾಗೂ ಆಟೋ ಪ್ರಚಾರದ ಮೂಲಕ ನಗರದ ಮನೆಮನೆಗೆ ಹೋರಾಟದ ವಿಚಾರವನ್ನು ತಲುಪಿಸಿದರು. ಹಬ್ಬದ ವಾತಾವರಣವನ್ನು ಹೋರಾಟದ ವಾತಾವರಣವನ್ನಾಗಿ ಪರಿವರ್ತಿಸಿದ ವಿದ್ಯಾರ್ಥಿಗಳು ಯುಬಿಡಿಟಿ ಕಾಲೇಜಿನ ಹೋರಾಟವನ್ನು ದಾವಣಗೆರೆಯ ಮನೆಮಾತಾಗುವಂತೆ ಮಾಡಿದರು. ಕಳೆದ ತಿಂಗಳಿನಿಂದ ಈ ಹೋರಾಟದ ಸುದ್ದಿಯನ್ನು ಎಲ್ಲೆಡೆ ಹರಡುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಮಾಧ್ಯಮಗಳು ಕೂಡ ವಿದ್ಯಾರ್ಥಿಗಳ ನ್ಯಾಯಯುತ ಹೋರಾಟಕ್ಕೆ ಧ್ವನಿಯಾದವು!

ಬಂದ್ ಹಿಂದಿನ ದಿನ ಅಕ್ಟೋಬರ್ 15ರಂದು ನಗರದ ಪ್ರಮುಖ ಬೀದಿಗಳಲ್ಲಿ ಬೈಕ್‌ಜಾಥಾ ನಡೆಸಲಾಯಿತು. ಆದರೆ, ಎಲ್ಲ ಅಧಿಕೃತ ಪರವಾನಿಗೆ ಹೊಂದಿದ್ದಾಗಿಯೂ ಬೈಕ್‌ಜಾಥಾ ನಡೆಸಲು ಪೊಲಿಸರಿಂದ ಅಡ್ಡಿಪಡಿಸಲಾಯಿತು. ಬೈಕ್‌ಜಾಥಾಗೆ ಬರಲು ತಯಾರಾಗಿದ್ದ ವಿದ್ಯಾರ್ಥಿಗಳನ್ನು ಹೆದರಿಸಿ ಚದುರಿಸುವ ಯತ್ನ ನಡೆಯಿತು. ಹೋರಾಟವನ್ನು ಹತ್ತಿಕ್ಕುವ ಆಡಳಿತದ ನಡೆಯ ವಿರುದ್ಧ ಕೂಡಲೇ ಕಾಲೇಜು ಗೇಟ್ ಮುಂದೆ ಪ್ರತಿಭಟನೆ ಆರಂಭಿಸಲಾಯಿತು. ಈ ಸಂದರ್ಭದಲ್ಲಿ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ. ಪುರುಷೋತ್ತಮ್ ಬಿಳಿಮಲೆ ಅವರಿಗೆ ಹೋರಾಟದ ಮನವಿ ಪತ್ರ ನೀಡಲಾಯಿತು. ಖಾಸಗೀಕರಣ, ಜಾಗತೀಕರಣದ ನಂತರ ಎಲ್ಲ ಸರ್ಕಾರಗಳು ಶಿಕ್ಷಣವನ್ನು ಮಾರಾಟದ ಸರಕನ್ನಾಗಿಸಿವೆ. ಇಂತಹ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳು ಬಲಿಷ್ಠ ಹೋರಾಟಗಳನ್ನು ಕಟ್ಟಬೇಕಿದೆ ಎಂದು ಮಾತನಾಡಿದ ಅವರು 50% ಕೋಟಾ ವಿರುದ್ಧ ಹೋರಾಡುತ್ತಿರುವ ಯುಬಿಡಿಟಿ ವಿದ್ಯಾರ್ಥಿಗಳನ್ನು ಅಭಿನಂದಿಸಿದರು. ಈ ವಿಷಯವನ್ನು ಶಿಕ್ಷಣ ಸಚಿವರು ಹಾಗೂ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ ಪರಿಹಾರ ಒದಗಿಸುವಂತೆ ಅವರನ್ನು ಒತ್ತಾಯಿಸುವ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆಯನ್ನು ನೀಡಿದರು. ಪ್ರಾಧಿಕಾರದ ಸದಸ್ಯರಾದ ಪ್ರೊ ಎ.ಬಿ. ರಾಮಚಂದ್ರಪ್ಪ ಕೂಡ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಅಷ್ಟರಲ್ಲಿ, ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿ ಸುರಿಯುತ್ತಿದ್ದ ಮಳೆಯ ನಡುವೆಯೇ ಬೈಕ್‌ಜಾಥಾ ಹೊರಟಿತು. ವಿದ್ಯಾನಗರ, ಹದಡಿರಸ್ತೆ, ಹಳೆ ದಾವಣಗೆರೆ, ಮಾರುಕಟ್ಟೆ, ಬಸ್–ರೈಲು ನಿಲ್ದಾಣ ಸೇರಿದಂತೆ ನಗರದ ಪ್ರಮುಖ ಸ್ಥಳಗಳ ಮೂಲಕ ಸಾಗಿದ ಬೈಕ್‌ಜಾಥಾಗೆ ಜನರಿಂದ ಉತ್ತಮ ಸ್ವಾಗತ ದೊರೆಯಿತು. ಜಯದೇವ ವೃತ್ತದಲ್ಲಿ ಬಂದ್‌ನ ಘೋಷಣೆಗಳೊಂದಿಗೆ ಬೈಕ್‌ಜಾಥಾ ಸಮಾಪ್ತಿಯಾಯಿತು. ಪೊಲೀಸರ ಅಡೆತಡೆಗಳನ್ನು ಎದುರಿಸಿ ನಗರದಾದ್ಯಂತ ಬಂದ್‌ನ ಸಂದೇಶವನ್ನು ಯಶಸ್ವಿಯಾಗಿ ಸಾರಲಾಯಿತು.

ಅಕ್ಟೋಬರ್ 16ರ ದಾವಣಗೆರೆ ಬಂದ್, ದಾವಣಗೆರೆ ಇತಿಹಾಸದಲ್ಲಿಯೇ ಅಭೂತಪೂರ್ವ ದಿನ. ಶಿಕ್ಷಣಕ್ಕಾಗಿ ನಡೆದ ಪ್ರಪ್ರಥಮ ಬಂದ್ ಇದು ಎಂದರೆ ತಪ್ಪಾಗಲಾರದು. ಈ ಹೋರಾಟವನ್ನು ತಮ್ಮ ಮಕ್ಕಳ ಹೋರಾಟವೆಂದು ಅರಿತುಕೊಂಡ ಬೀದಿಬದಿ ವ್ಯಾಪಾರಸ್ಥರು, ದಿನದ ದುಡಿಮೆಯನ್ನು ತೊರೆದು ಬಂದ್‌ನಲ್ಲಿ ಭಾಗವಹಿಸಿದರು. ಜವಳಿ, ದಿನಸಿ, ಹೂವು, ಹಣ್ಣು, ಸೇರಿದಂತೆ ವಿವಿಧ ವಿಭಾಗದ ವ್ಯಾಪಾರಿಗಳು, ಹೋಟೆಲ್‌ನವರು, ಮತ್ತು ಅನೇಕ ವ್ಯಾಪಾರೀ ಸಂಘಗಳು ಬಂದ್‌ಗೆ ಹೃದಯಪೂರ್ವಕ ಬೆಂಬಲ ವ್ಯಕ್ತಪಡಿಸಿ, ಅಂದು ಸ್ವಯಂ ಪ್ರೇರಿತವಾಗಿ ತಮ್ಮ ಅಂಗಡಿ–ಮುಂಗಟ್ಟುಗಳನ್ನು ಮುಚ್ಚಿದರು. ಒಂದು ದಿನದ ವಹಿವಾಟನ್ನು ತ್ಯಜಿಸಿ, ಆದಾಯವನ್ನು ಕಳೆದುಕೊಳ್ಳಲು ಇವರು ಹಿಂಜರಿಯದೆ ಇದ್ದದ್ದು ನಿಜಕ್ಕೂ ಪ್ರಶಂಸನೀಯ! ದಿನದ ದುಡಿಮೆಯನ್ನು ಆಶ್ರಯಿಸಿ ಬದುಕುವ ಅದೆಷ್ಟೋ ದಿನಗೂಲಿ ಕಾರ್ಮಿಕರು ಅಂದು ಕೆಲಸಗಳನ್ನು ತೊರೆದರು! ಬೀದಿಬದಿ ಚಹಾ–ತಿಂಡಿ ಮಾರುವವರೂ ಅಂದು ವ್ಯಾಪಾರ ಬಿಟ್ಟರು! ಲಾರಿ ಮಾಲೀಕರು ಮತ್ತು ಚಾಲಕರು ಒಂದೇ ಒಂದು ಲಾರಿಯನ್ನೂ ಅಂದು ಚಲಾಯಿಸಲಿಲ್ಲ!! ನಸುಕಿನಲ್ಲಿ ರಸ್ತೆಗುಡಿಸುತಿದ್ದ ಮಹಿಳಾ ಪೌರ ಕಾರ್ಮಿಕರೊಬ್ಬರು ಹೇಳಿದ್ದು, "ಸರ್ಕಾರಿ ಕಾಲೇಜಿನಲ್ಲಿ ಖಾಸಗಿ ಸೀಟು ಮಾಡಿರುವುದು ನಮ್ಮಂತ ಬಡವರಿಗೆ ಮಾಡಿರುವ ಅನ್ಯಾಯ! ನಮ್ಮ ಮಕ್ಕಳು ಮಾಡುತ್ತಿರುವ ಹೋರಾಟದೊಂದಿಗೆ ನಾನು ಕೂಡ ನಿಂತುಕೊಳ್ಳುತ್ತೇನೆ." ಬಸ್ ನಿಲ್ದಾಣದಲ್ಲಿ ಶೌಚಾಲಯ ಶುಚಿಗೊಳಿಸುವ ಕಾರ್ಮಿಕರೊಬ್ಬರಿಗೆ ಅಂದು ಕೆಲಸವೇ ಇರಲಿಲ್ಲ. ಏಕೆಂದರೆ ಪ್ರಯಾಣಿಕರೇ ಇರಲಿಲ್ಲ! ಆತ ಅತ್ಯಂತ ಆಕ್ರೋಶದಿಂದ ಹೇಳಿದ, "ದುಡ್ಡಿದ್ದವರಿಗೆ ಹಲವಾರು ಕಾಲೇಜುಗಳಿವೆ. ಆದರೆ ಬಡವರಿಗೆ ದಾವಣಗೆರೆಯಲ್ಲಿರುವುದು ಇದೊಂದೇ ಸರ್ಕಾರಿ ಕಾಲೇಜು! ಸರ್ಕಾರದ ಈ ಅನ್ಯಾಯದ ವಿರುದ್ಧ ನಡೆಯುತ್ತಿರುವ ಬಂದ್‌ಗೆ ನನ್ನ ಸಂಪೂರ್ಣ ಬೆಂಬಲವಿದೆ!". ಇನ್ನು ಬಂದ್‌ನ ಪ್ರಚಾರ ಮತ್ತು ಸರ್ಕಾರಿ ಕಾಲೇಜನ್ನು ಉಳಿಸಬೇಕೆಂಬ ಹೋರಾಟದ ಕೂಗು ಎಷ್ಟು ವ್ಯಾಪಕವಾಗಿತ್ತೆಂದರೆ, ಹಳ್ಳಿಗಳಿಂದ ಜನರು ಅಂದು ನಗರಕ್ಕೆ ಬರಲಿಲ್ಲ! ಇದು, ಖಾಸಗಿ ಬಸ್ ಮಾಲೀಕರನ್ನು ಅಚ್ಚರಿಗೊಳಿಸಿತು.

ಯು.ಬಿ.ಡಿ.ಟಿ ಕಾಲೇಜು ಸೇರಿದಂತೆ ಸರ್ಕಾರಿ ಮಹಿಳಾ ಪದವಿ ಕಾಲೇಜು, ಆರ್‌ಎಲ್ ಕಾನೂನು ಕಾಲೇಜು, ಡಿ.ಆರ್.ಆರ್.ಪಾಲಿಟೆಕ್ನಿಕ್ ಕಾಲೇಜು, ಸರ್ಕಾರಿ ಐಟಿಐ ಕಾಲೇಜು, ಸರ್ಕಾರಿ ಪ್ರಥಮದರ್ಜೆ ಪದವಿ ಕಾಲೇಜು, ಎ.ಜಿ.ಬಿ ಪದವಿ ಕಾಲೇಜು, ಎ.ವಿ.ಕೆ ಪದವಿ ಕಾಲೇಜು, ಎಮ್.ಎಸ್.ಬಿ. ಪದವಿ, ಎಸ್.ಪಿ.ಎಸ್.ಎಸ್ ಸೇರಿದಂತೆ ಅನೇಕ ಕಾಲೇಜುಗಳಿಗೆ ವಿದ್ಯಾರ್ಥಿಗಳೇ ಬರದ ಕಾರಣ ಈ ವಿದ್ಯಾ ಸಂಸ್ಥೆಗಳನ್ನು ಸಂಪೂರ್ಣವಾಗಿ ಬಂದ್ ಮಾಡಬೇಕಾಯಿತು! ಬೆಳಗ್ಗೆ 6ರಿಂದ ಸಂಜೆ 6ರ ವರೆಗೆ ಮಾತ್ರ ಬಂದ್ ಘೋಷಣೆ ಮಾಡಿದ್ದರೂ, ಎಷ್ಟೋ ಅಂಗಡಿಗಳು ಸಂಜೆ ಕೂಡ ಬಾಗಿಲು ತೆರೆಯಲಿಲ್ಲ! ಅನೇಕ ಕಡೆ ಕೇಳಿಬಂದ ಮಾತು "ಇದು, ನ ಭೂತೋ, ನಾ ಭವಿಷ್ಯತಿ ಬಂದ್", "ಇದು ನಿಜಕ್ಕೂ ಜನತೆಯ ಸ್ವಯಂಪ್ರೇರಿತ ಬಂದ್ "!

ವಿದ್ಯಾರ್ಥಿಗಳೊಂದಿಗೆ, ರೈತ–ಕಾರ್ಮಿಕ–ದಲಿತ ಸಂಘಟನೆಗಳು, ಕನ್ನಡ ಪರ ಸಂಘಟನೆಗಳು ಸೇರಿ ಬೆಳಗಿನ ಜಾವ 4 ಗಂಟೆಯಿಂದಲೇ ಸರ್ಕಾರಿ ಹಾಗೂ ಖಾಸಗಿ ಬಸ್ ನಿಲ್ದಾಣದ ಎದುರುಗಡೆ, ದಾವಣಗೆರೆ ಬಂದ್ ನ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನೆ ಆರಂಭಿಸಿದರು. ಜನರೇ ಬಾರದೆ ಬಿಕೋ ಎನ್ನುತ್ತಿದ್ದ ಬಸ್ ನಿಲ್ದಾಣಗಳು ಸ್ತಬ್ಧವಾಗಿ ಬಂದ್ ಗೆ ಬೆಂಬಲ ವ್ಯಕ್ತಪಡಿಸುತ್ತಿದ್ದವು! 10 ಗಂಟೆಯ ನಂತರ ಜಯದೇವ ವೃತ್ತದ ಬಳಿ ಸೇರಿ ಪ್ರತಿಭಟನೆ ಆರಂಭಿಸಲಾಯಿತು. ಸುರಿಯುವ ಮಳೆಯ ನಡುವೆಯೇ ಮಾನವ ಸರಪಳಿ ನಡೆಸಿ, ಅಲ್ಲಿಂದ ಮೆರವಣಿಗೆ ಮೂಲಕ ಪಿಬಿ ರಸ್ತೆಗೆ ಬಂದು ಮಹಾನ್ ಕ್ರಾಂತಿಕಾರಿ ಭಗತ್ ಸಿಂಗ್ ಅವರ ಪುತ್ಥಳಿ ಎದುರುಗಡೆ ಸಭೆ ಸೇರಲಾಯಿತು.

ಡಿ.ಆರ್.ಎಂ ಪದವಿ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಪ್ರೊ. ಕೆ. ಎಸ್. ಈಶ್ವರಪ್ಪ, ಭಗತ್ ಸಿಂಗ್‌ರ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಗೌರವ ಸಲ್ಲಿಸಿದರು. ನೆರೆದಿದ್ದ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಅವರು, "ಒಂದೆಡೆ ತಾನು ಬಡವರ ಪರ ಎಂದು ಹೇಳಿಕೊಳ್ಳುವ ಸರ್ಕಾರ, ಪಂಚ ಗ್ಯಾರಂಟಿಗಳನ್ನು ಜಾರಿಗೊಳಿಸಿದರೆ, ಇನ್ನೊಂದೆಡೆ ಶಿಕ್ಷಣವನ್ನು ಮಾರಾಟಕ್ಕಿಟ್ಟು ಬಡವರ ಮಕ್ಕಳಿಂದ ಅದನ್ನು ಕಸಿದುಕೊಳ್ಳುವ ದ್ವಂದ್ವ ನೀತಿ ಅನುಸರಿಸುತ್ತಿದೆ. ಬಡರೈತ–ಕಾರ್ಮಿಕರ, ಕೂಲಿಕಾರರ, ಮಕ್ಕಳನ್ನು ಉನ್ನತ ಶಿಕ್ಷಣದಿಂದ ದೂರ ತಳ್ಳುವ ಹುನ್ನಾರವನ್ನು ಸರ್ಕಾರ ನಡೆಸಿದೆ. ಅದನ್ನು ಕೈಬಿಟ್ಟು ಎಲ್ಲರಿಗೂ ಉಚಿತವಾಗಿ ಶಿಕ್ಷಣ ಖಾತ್ರಿಪಡಿಸಬೇಕು" ಎಂದು ಸರ್ಕಾರವನ್ನು ಆಗ್ರಹಿಸಿದರು. ಮುಂದುವರೆದು, ಸ್ವಾತಂತ್ರ್ಯ ಸಂಗ್ರಾಮದ ಮಹಾನ್ ಚೇತನ ಭಗತ್ ಸಿಂಗ್‌ರಿಂದ ನಾವು ಸ್ಫೂರ್ತಿ ಹೊಂದಬೇಕು. ಆಳ್ವಿಕರು ನಮ್ಮ ದೇಹಗಳನ್ನು ನಾಶಗೊಳಿಸಬಹುದು ಆದರೆ ಹೋರಾಟದ ಸ್ಫೂರ್ತಿಯನ್ನು ಅವರಿಂದ ಅಳಿಸಲು ಸಾಧ್ಯವಿಲ್ಲ. 'ಯುಬಿಡಿಟಿ ಉಳಿಸಿ' ಘೋಷಣೆಯೊಂದಿಗೆ ಆರಂಭವಾಗಿರುವ ಈ ಹೋರಾಟಕ್ಕೆ ನ್ಯಾಯ ದೊರೆಯುವವರೆಗೂ ನಾವು ಹೋರಾಟವನ್ನು ಮುಂದುವರಿಸಬೇಕು. ಅಲ್ಲದೇ, ದಾವಣಗೆರೆಯ ಜನರ ಸಹಿಗಳನ್ನು ತಿರಸ್ಕರಿಸಿದ ಶಿಕ್ಷಣ ಸಚಿವರ ವರ್ತನೆಯು ದಾವಣಗೆರೆಯ ಜನತೆಗೆ ಮಾಡಿದ ಅವಮಾನವಾಗಿದೆ. ಜನಪ್ರತಿನಿಧಿಗಳ ಈ ಧೋರಣೆಯು ಅತ್ಯಂತ ಖಂಡನೀಯ" ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎಐಡಿಎಸ್‌ಓ ರಾಜ್ಯ ಉಪಾಧ್ಯಕ್ಷರಾದ ಕಾಮ್ರೇಡ್ ಅಭಯಾ ದಿವಾಕರ್, "ವಿದ್ಯಾರ್ಥಿಗಳ ಕರೆಗೆ ಸ್ಪಂದಿಸಿ ಸಂಪೂರ್ಣವಾಗಿ ಬಂದ್‌ಅನ್ನು ಯಶಸ್ವಿಗೊಳಿಸಿದ ದಾವಣಗೆರೆ ಜನತೆಗೆ ಹೋರಾಟದ ಶುಭಾಶಯಗಳನ್ನು ತಿಳಿಸಿದರು. "ಸರ್ಕಾರವು ಉನ್ನತ ಶಿಕ್ಷಣದ ಮೇಲೆ ನಿರಂತರ ದಾಳಿ ನಡೆಸುತ್ತಿದೆ. ಸ್ವಾತಂತ್ರ್ಯಾ ನಂತರ ಅಧಿಕಾರ ನಡೆಸಿರುವ ಎಲ್ಲಾ ಸರ್ಕಾರಗಳು ಶಿಕ್ಷಣವನ್ನು ಖಾಸಗೀಕರಣ–ವ್ಯಾಪಾರೀಕರಣಗೊಳಿಸುತ್ತಾ ಬಂದಿವೆ. ಇದು ಕೇವಲ ಯುಬಿಡಿಟಿಗೆ ಸೀಮಿತವಲ್ಲ. ಮುಂದೊಂದು ದಿನ ಎಲ್ಲಾ ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ ಇದೇ ಪರಿಸ್ಥಿತಿ ಎದುರಾಗುವುದರಲ್ಲಿ ಸಂಶಯವಿಲ್ಲ. ಸರ್ಕಾರಗಳ ಕುಕೃತ್ಯಗಳು ಶಿಕ್ಷಣಕ್ಕಾಗಿ ಹೋರಾಟ ನಡೆಸಿದ ಎಲ್ಲಾ ಮಹಾನ್ ವ್ಯಕ್ತಿಗಳ ಆಶಯಕ್ಕೆ ವಿರುದ್ಧವಾಗಿವೆ. ಶಿಕ್ಷಣವು ಅನ್ಯಾಯದ ವಿರುದ್ಧದ ಹೋರಾಟಕ್ಕೆ ಆಯುಧವಿದ್ದಂತೆ. ಅದನ್ನು ಕಸಿಯಲು ಬಂದರೆ ಜೀವ ಕೊಟ್ಟಾದರೂ ಸಾರ್ವಜನಿಕ ಶಿಕ್ಷಣವನ್ನು ನಾವು ಉಳಿಸಿಕೊಳ್ಳಬೇಕು. ಶಿಕ್ಷಣವನ್ನು ಆಳ್ವಿಕ ಬಂಡವಾಳಶಾಹಿ ವರ್ಗದ ಹಿತಾಸಕ್ತಿಯಿಂದ ಮಾರುಕಟ್ಟೆಯ ಸರಕಾಗಿಸುವ ಸರ್ಕಾರಗಳ ಹುನ್ನಾರವನ್ನು ಸೋಲಿಸಲು ಎಲ್ಲ ವಿಭಾಗದ ಜನರು ಒಟ್ಟುಗೂಡಿ ನಡೆಸುವ ಸಂಘಟಿತ ಹೋರಾಟವೊಂದೇ ಜನರ ಮುಂದಿರುವ ಮಾರ್ಗವಾಗಿದೆ. ಯುಬಿಡಿಟಿ ಉಳಿಸಲು ದಾವಣಗೆರೆ ಜನತೆ ಮತ್ತು ಯುಬಿಡಿಟಿ ವಿದ್ಯಾರ್ಥಿಗಳು ನಡೆಸುತ್ತಿರುವ ಹೋರಾಟ ಇಡೀ ರಾಜ್ಯದ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಿದೆ" ಎಂದರು. 50% ಪೇಮೆಂಟ್ ಸೀಟುಗಳನ್ನು ರದ್ದುಗೊಳಿಸದಿದ್ದಲ್ಲಿ ಇಡೀ ರಾಜ್ಯದ ವಿದ್ಯಾರ್ಥಿಗಳ ಬೃಹತ್ ಚಳುವಳಿಯನ್ನು ಸರ್ಕಾರವು ಎದುರಿಸಬೇಕಾಗುತ್ತದೆ ಎಂದು ಅಭಯಾ ದಿವಾಕರ್‌ಎಚ್ಚರಿಕೆ ನೀಡಿದರು.

ಕೆನರಾ ಬ್ಯಾಂಕ್ ಎಂಪ್ಲಾಯಿಸ್ ಫೆಡರೇಷನ್ ಆಫ್ ಇಂಡಿಯಾದ ಮಾಜಿ ಅಧ್ಯಕ್ಷರಾದ ಶ್ರೀ. ಎಂ.ಆರ್. ಹಿರೇಮಠ ಮಾತನಾಡಿ, "ದಾವಣಗೆರೆ ಜನತೆ ಒಗ್ಗಟ್ಟಾಗಿ ನಿಂತು ಇಂದಿನ ಬಂದ್‌ನಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಯುಬಿಡಿಟಿ ಉಳಿಯುವವರೆಗೂ ಈ ಹೋರಾಟ ಮುಂದುವರೆಯುತ್ತದೆ ಹಾಗೂ 50% ಪೇಮೆಂಟ್ ಕೋಟಾ ರದ್ದಾಗುವವರೆಗೂ ಹೋರಾಟ ನಡೆಯುತ್ತದೆ" ಎಂದು ಗುಡುಗಿದರು. ವಿವಿಧರೈತ ಸಂಘಟನೆ, ಕಾರ್ಮಿಕ ಸಂಘಟನೆ ಹಾಗೂ ಕನ್ನಡಪರ ಸಂಘಟನೆಗಳ ಮುಖಂಡರು ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಎಐಡಿಎಸ್‌ಓನ ರಾಜ್ಯ ಕಚೇರಿ ಕಾರ್ಯದರ್ಶಿ ಕಾ. ಮಹಾಂತೇಶ ಬಿಳೂರ, "ಜನರ ತೆರಿಗೆಯ ಮೇಲೆ ಸ್ಥಾಪನೆಗೊಂಡಿರುವ 73 ವರ್ಷದ ಪ್ರತಿಷ್ಠಿತ ಯುಬಿಡಿಟಿ ಕಾಲೇಜಿನಲ್ಲಿ ಸೀಟು ಮಾರಾಟ ಮಾಡುವ ಸರ್ಕಾರದ ವ್ಯಾಪಾರಿ ಧೋರಣೆಯ ವಿರುದ್ಧ ದಾವಣಗೆರೆಯ ಜನರು ತಮ್ಮ ಆಕ್ರೋಶದ ಕೂಗನ್ನು ಮೊಳಗಿಸಿದ್ದಾರೆ. ಶಿಕ್ಷಣಕ್ಕೆ ಹೆಚ್ಚಿನ ಅನುದಾನ ನೀಡಿ ಎಲ್ಲರಿಗೂ ಶಿಕ್ಷಣವನ್ನು ಖಾತ್ರಿಪಡಿಸಬೇಕಿದ್ದ ಸರ್ಕಾರ, ಬೇಲಿಯೇ ಎದ್ದು ಹೊಲ ಮೇಯ್ದಂತೆ ಸರ್ಕಾರಿ ಸೀಟುಗಳನ್ನು ಹಣವಂತರಿಗೆ ಮಾರಾಟ ಮಾಡುತ್ತಿರುವುದು ಬಡವರಿಗೆ ಮಾಡಿದ ದ್ರೋಹವಾಗಿದೆ! ಸರ್ಕಾರದ ಈ ದ್ರೋಹ ಮತ್ತು ಅಪಮಾನಗಳನ್ನು ಸಹಿಸದ ಜನರು ಹೋರಾಟದ ಬೀದಿಗೆ ಧುಮುಕಿದರು. ಕೇವಲ ಯುಬಿಡಿಟಿಯಷ್ಟೇ ಅಲ್ಲದೇ ಯಾವ ಸರ್ಕಾರಿ ಶಾಲಾ–ಕಾಲೇಜುಗಳಲ್ಲೂ ಈ ರೀತಿಯ ಖಾಸಗೀಕರಣವನ್ನು ಜನ ಸಹಿಸುವುದಿಲ್ಲ. ರಾಜ್ಯ ಸರ್ಕಾರ ಜನಾಭಿಪ್ರಾಯಕ್ಕೆ ತಲೆಬಾಗದಿದ್ದರೆ ಮುಂಬರುವ ದಿನಗಳಲ್ಲಿ ಇನ್ನೂ ಉಗ್ರ ಆಂದೋಲನಗಳನ್ನು ಎದುರಿಸಬೇಕಾಗುತ್ತದೆ" ಎಂದು ಘರ್ಜಿಸಿದರು.

ಎಲ್ಲರಿಗೂ ಶಿಕ್ಷಣವು ಮುಕ್ತವಾಗಿ ದೊರಕಬೇಕು ಎಂಬ ರಾಜಾ ರಾಮ್ ಮೋಹನ್ ರಾಯ್, ಈಶ್ವರ್‌ಚಂದ್ರ ವಿದ್ಯಾಸಾಗರ್, ಜ್ಯೋತಿರಾವ್– ಸಾವಿತ್ರಿಬಾಯಿ ಫುಲೆ, ಭಗತ್ ಸಿಂಗ್–ನೇತಾಜಿ ಮುಂತಾದ ಮಹಾನ್ ವ್ಯಕ್ತಿಗಳ ಆಶಯಕ್ಕೆ ವಿರುದ್ಧವಾಗಿ ಸರ್ಕಾರಗಳು ಶಿಕ್ಷಣವನ್ನು ಉಳ್ಳವರ ಸ್ವತ್ತಾಗಿಸುತ್ತಿವೆ. ಜನಸಾಮಾನ್ಯರ ತೆರಿಗೆಯಿಂದ ಕಟ್ಟಲ್ಪಟ್ಟಿರುವ ಸರ್ಕಾರಿ ಸಂಸ್ಥೆಗಳಲ್ಲಿ ಕೂಡ ಮಿತಿಮೀರಿ ಶುಲ್ಕ ಹೆಚ್ಚಳ ನಡೆಸಲಾಗುತ್ತಿದೆ ಮತ್ತು ಜನವಿರೋಧಿ ಪೇಮೆಂಟ್ ಕೋಟಾ ಜಾರಿಗೊಳಿಸಲಾಗುತ್ತಿದೆ. ಕೇವಲ ಯುಬಿಡಿಟಿಯಲ್ಲದೇ ಅನೇಕ ಸರ್ಕಾರಿ ಕಾಲೇಜುಗಳು ಕೂಡ ಬಡವರಿಗೆ ಕೈಗೆಟುಕದಂತಿರುವ ಇಂದಿನ ಪರಿಸ್ಥಿತಿಯಲ್ಲಿ, ನಾಗರೀಕತೆಗೆ ಬೆಳಕಾಗಿರುವ ಶಿಕ್ಷಣವನ್ನು ಶೋಷಣೆಯ ಶೃಂಖಲೆಗಳಿಂದ ಬಿಡಿಸಿ ಎಲ್ಲರಿಗೂ ತಲುಪುವಂತೆ ಮಾಡಲು ಸಂಘಟಿತರಾಗಿ ಹೋರಾಡುವುದೇ ವಿದ್ಯಾರ್ಥಿಗಳು, ಯುವಜನರು ಹಾಗೂ ಎಲ್ಲ ಜನ ಸಾಮಾನ್ಯರ ಕರ್ತವ್ಯವೆಂಬುದನ್ನು ದಾವಣಗೆರೆಯ ಜನತೆ ಪುನರುಚ್ಚರಿಸಿದ್ದಾರೆ! ■




### ಹೋರಾಟಗಾರರ ಬಂಧನ!

ಜನಗಳು ಬರದಿದ್ದರೂ ಕೂಡ ಒತ್ತಾಯ ಪೂರ್ವಕವಾಗಿ ಬಸ್ ಓಡಿಸಲು ಯತ್ನಿಸಿದ ಪೊಲೀಸರ ನಡೆಯನ್ನು ಪ್ರಶ್ನಿಸಿ ಪ್ರತಿಭಟನೆ ಆರಂಭಿಸುತ್ತಿದ್ದಂತೆ ಶಶಿಕಲಾ, ಶಾಂತಿ, ಸುಮನ್, ರೋಹಿತ್, ಶಿವು, ದೇವಮ್ಮ, ಭಾರತಿ, ಅನಿಲ್, ಸುನಿಲ್, ಪರಶುರಾಮ್, ಅಭಿ?ೕಕ್ , ಅಖಿಲೇಶ್, ವೆಂಕಟೇಶ್, ಮಂಜುನಾಥ ಕುಕ್ಕುವಾಡ, ಪೀರ್ ಸಾಬ್, ಮೇಘನಾ, ಕಾವ್ಯ ಮತ್ತು ಮುಂತಾದ ಎಐಡಿಎಸ್‌ಓ ನಾಯಕರು, ಕಾರ್ಯಕರ್ತರು ಹಾಗೂ ಯುಬಿಡಿಟಿ ಹೋರಾಟ ಸಮಿತಿ ಸದಸ್ಯರನ್ನು ಪೋಲಿಸರು ಬಂಧಿಸಿದರು. ಈ ಹೋರಾಟಗಾರರನ್ನುಕೂಡಲೇ ಬಿಡುಗಡೆಗೊಳಿಸುವಂತೆ ಪ್ರತಿಭಟನೆ ನಡೆಸಿದ ನಂತರ ಎಲ್ಲರನ್ನು ಬಿಡುಗಡೆಗೊಳಿಸಲಾಯಿತು!!

# ಮಾವೋ ಜೆಡಾಂಗ್ ಜೀವನ ಸಂಘರ್ಷ



ಮಾರ್ಕ್ಸ್‌ವಾದ–ಲೆನಿನ್‌ವಾದದ ವಿರಾಟ್ ಚಿಂತಕ, ಚೀನಾ ಕ್ರಾಂತಿಯ ಮಹಾಶಿಲ್ಪಿ ಮಹಾನ್ ಮಾವೋ ಜೆಡಾಂಗ್ ಮೃತರಾಗಿ 48 ವರ್ಷಗಳು ಉರುಳಿವೆ. ಅವರ ನಿಧನದ ನಂತರ, ಪರಿಷ್ಕರಣಾವಾದಿಗಳು, ದಂಗೆಕೋರರು ಮತ್ತು ಬಂಡವಾಳಶಾಹಿ–ಪ್ರೇರಕರು ಅವರ ಕ್ರಾಂತಿಕಾರಿ ಬೋಧನೆಗಳಿಂದ ಚ್ಯುತರಾಗಿ ಕುತಂತ್ರದಿಂದ "ಚೀನಾ ಸಮಾಜವಾದದ ಮಾದರಿ" ಎಂಬ ಅತ್ಯಾಕರ್ಷಕ ಘೋಷಣೆಯನ್ನು ರೂಪಿಸಿ ಪ್ರತಿಕ್ರಾಂತಿಗೆ ನಾಂದಿ ಹಾಕಿದರು; ಪ್ರತಿಕ್ರಾಂತಿಯು 2004 ರಲ್ಲಿ ಪೂರ್ಣಗೊಂಡಿತು ಮತ್ತು ಮಾವೋ ಜೆಡಾಂಗ್ ನಾಯಕತ್ವದಲ್ಲಿ ದೀರ್ಘಾವಧಿಯ ಪ್ರಯಾಸಕರ ಹೋರಾಟದ ಮೂಲಕ ದಮನಕಾರಿ ವಾರ್‌ಲಾರ್ಡ್‌ಗಳು (ಯುದ್ಧಕೋರರು), ವಿದೇಶಿ ಸಾಮ್ರಾಜ್ಯಶಾಹಿಗಳು ಮತ್ತು ಊಳಿಗಮಾನ್ಯ ಶ್ರೀಮಂತರ ನೊಗದಿಂದ ಮುಕ್ತವಾಗಿ, ಸಮಾಜವಾದಿ ರಾಜ್ಯವಾಗಿ ಬದಲಾವಣೆ ಕಂಡ ದೇಶವು ಪರಿಷ್ಕರಣವಾದಿಗಳ ದೆಸೆಯಿಂದ ಹಿಮ್ಮುಖವಾಗಿ ತಿರುಗಿತು ಮತ್ತು ಅದು ಈಗ ಒಂದು ಸಾಮ್ರಾಜ್ಯಶಾಹಿ ಶಕ್ತಿಯಾಗಿ ಮಾರ್ಪಟ್ಟಿದೆ.

ಕ್ರಾಂತಿವಿರೋಧಿಗಳ ಎಲ್ಲಾ ಪ್ರಯತ್ನಗಳ ಹೊರತಾಗಿಯೂ, ಚೀನಾದ ಜನರು ಕಾಮ್ರೇಡ್ ಮಾವೋ ಅವರನ್ನು ಬಹಳ ಗೌರವಿಸುತ್ತಾರೆ ಮತ್ತು ಅವರನ್ನು ಅವಮಾನಿಸುವ ಯಾವುದೇ ಪ್ರಯತ್ನವನ್ನು ಸಹಿಸುವುದಿಲ್ಲ. ಅವರ ಮೌಸೋಲಿಯಂ ಅನ್ನು (ಮಾವೋರವರ ಮೃತ ದೇಹವನ್ನುಳ್ಳ ಪೆಟ್ಟಿಗೆ) ಇಂದಿಗೂ ಲಕ್ಷಾಂತರ ಜನರು ಆಳವಾದ ಗೌರವದಿಂದ ಭೇಟಿ ನೀಡುತ್ತಾರೆ, ಗಾಢ ಶ್ರದ್ಧೆಯಿಂದ ಅವರನ್ನು ನೆನಪಿಸಿಕೊಳ್ಳುತ್ತಾರೆ.

ಈ ಯುಗದ ಮಹೋನ್ನತ ಮಾರ್ಕ್ಸ್‌ವಾದಿ ಚಿಂತಕ ಮತ್ತು ಮಾರ್ಕ್ಸ್–ಎಂಗೆಲ್ಸ್–ಲೆನಿನ್–ಸ್ಟಾಲಿನ್–ಮಾವೋ ಜೆಡಾಂಗ್ ಅವರ ಯೋಗ್ಯ ಅನುಯಾಯಿಗಳಾದ ಕಾಮ್ರೇಡ್ ಶಿವದಾಸ್ ಘೋಷ್ ಅವರಿಂದ ಸ್ಥಾಪಿತವಾದ ನಮ್ಮ ಪಕ್ಷವನ್ನು ಒಳಗೊಂಡಂತೆ ಪ್ರಪಂಚದಾದ್ಯಂತದ ನಿಜವಾದ ಕ್ರಾಂತಿಕಾರಿಗಳು, ಮಾವೋ ಜೆಡಾಂಗ್ ಅವರ ಆದರ್ಶಪ್ರಾಯ ಜೀವನ ಹೋರಾಟ ಮತ್ತು ಅಮೂಲ್ಯವಾದ ಬೋಧನೆಗಳು, ಸಮಾಜದ ಕ್ರಾಂತಿಕಾರಿ ಪರಿವರ್ತನೆಯ ಸಂಘರ್ಷದಲ್ಲಿ ತೊಡಗಿಸಿಕೊಂಡಿರುವ ಸಮಸ್ತ ಜನತೆಗೆ ವಿಮುಕ್ತಿಯ ಮಾರ್ಗಸೂಚಿಗಳನ್ನು ಒದಗಿಸುತ್ತವೆ ಮತ್ತು ಹೆಚ್ಚು ಅಸಹನೀಯವಾಗುತ್ತಿರುವ ನಿರ್ದಯ ಸಾಮ್ರಾಜ್ಯಶಾಹಿ–ಬಂಡವಾಳಶಾಹಿ ದಬ್ಬಾಳಿಕೆಯಿಂದ ಜನಸಾಮಾನ್ಯರನ್ನು ಮುಕ್ತಗೊಳಿಸುತ್ತವೆ ಎಂಬ ಗಾಢ ವಿಶ್ವಾಸವನ್ನು ಹೊಂದಿದ್ದಾರೆ.

ಮಾವೋ ಜೆಡಾಂಗ್ ಅವರು 26 ಡಿಸೆಂಬರ್ 1893 ರಂದು ಮಧ್ಯ ಚೀನಾದ ಹುನಾನ್ ಪ್ರಾಂತ್ಯದ ಅನುಕೂಲಸ್ಥ ರೈತ ಕುಟುಂಬದಲ್ಲಿ ಜನಿಸಿದರು. ಹದಿಹರೆಯದಿಂದಲೇ, ಅನ್ಯಾಯದ ವಿರುದ್ಧ ಧೈರ್ಯದಿಂದ ಎದ್ದು ನಿಲ್ಲುವ ಗಮನಾರ್ಹ ಲಕ್ಷಣವು ಅವರಲ್ಲಿ ಕಂಡಿತು. ಅವರಲ್ಲಿ ಕ್ರಮೇಣ ರಾಜಕೀಯ ಪ್ರಬುದ್ಧತೆ ಬೆಳೆದು ಅವರು ಓರ್ವ ಮಾನವತಾವಾದಿಯಾಗಿ ಮತ್ತು ರಾಷ್ಟ್ರೀಯತಾವಾದಿಯಾಗಿ ಬೆಳೆದರು.

## ಸಿಪಿಸಿ ರಚನೆ

1917 ರ ರಷ್ಯಾದ ಕ್ರಾಂತಿಯ ನಂತರ, ಚೀನಾದ ವಿದ್ಯಾವಂತರು, ಬುದ್ಧಿಜೀವಿಗಳು ಮಾರ್ಕ್ಸ್‌ವಾದ–ಲೆನಿನ್‌ವಾದದ ಉದಾತ್ತತೆಗೆ ಆಕರ್ಷಿತರಾಗಿ ಅನೇಕ ಸ್ಥಳಗಳಲ್ಲಿ, ಕಮ್ಯುನಿಸ್ಟ್ ಪಕ್ಷಗಳನ್ನು ರಚಿಸಲು ಕ್ರಮ ತೆಗೆದುಕೊಂಡರು. ಅಂತಹ ಅನೇಕ ಗುಂಪುಗಳಿದ್ದವು. ಮಾವೋ ಅಂತಹ ಒಂದು ಗುಂಪಿನ ಸಂಪರ್ಕದಲ್ಲಿದ್ದರು. ಈ ಗುಂಪುಗಳು ಕಮ್ಯುನಿಸ್ಟ್ ಪಾರ್ಟಿ ಆಫ್ ಚೀನಾ (ಸಿಪಿಸಿ) ರಚಿಸಲು ಕೈಜೋಡಿಸಿದವು. ಜುಲೈ 1, 1921 ರಂದು, ಕಮ್ಯುನಿಸ್ಟ್ ಗುಂಪುಗಳಿಂದ ಚುನಾಯಿತರಾದ ಹನ್ನೆರಡು ಪ್ರತಿನಿಧಿಗಳು ಶಾಂಘೈನಲ್ಲಿ ಪಕ್ಷದ ಮೊದಲ ಕಾಂಗ್ರೆಸ್‌ಅನ್ನು ನಡೆಸಿದರು ಮತ್ತು ಸಿಪಿಸಿಯನ್ನು ಅಧಿಕೃತವಾಗಿ ಸ್ಥಾಪನೆ ಮಾಡಿದರು; ಅದರ ಮೊದಲ ಸಂವಿಧಾನವನ್ನು ಅಳವಡಿಸಿಕೊಂಡರು ಮತ್ತು ಅದರ ಕೇಂದ್ರ ಅಂಗಗಳ ಬಗ್ಗೆ ನಿರ್ಧರಿಸಿದರು. ಆ ಹನ್ನೆರಡು ಪ್ರತಿನಿಧಿಗಳಲ್ಲಿ ಮಾವೋ ಜೆಡಾಂಗ್ ಒಬ್ಬರಾಗಿದ್ದರು.

1923 ರಲ್ಲಿ ನಡೆದ ಪಕ್ಷದ ಮೂರನೇ ಕಾಂಗ್ರೆಸ್‌ನಲ್ಲಿ, ಮಾವೋ, ಬಂಡವಾಳಶಾಹಿ ಪಕ್ಷವಾದ ಕೌಮಿಂಟಾಂಗ್‌ನ ಸಂಸ್ಥಾಪಕರೂ, ಚೀನಾದ ರಾಷ್ಟ್ರೀಯತೆ ಮತ್ತು ಪ್ರಜಾಪ್ರಭುತ್ವದ ಪ್ರತಿಪಾದಕರೂ ಆಗಿದ್ದ, ಡಾ. ಸಾನ್‌ಯಾತ್–ಸೆನ್ ಅವರ ನಿಲುವಿನ ಬಗ್ಗೆ ಪಕ್ಷ ಮಾಡಿದ ಮೌಲ್ಯಮಾಪನದ ಕೆಲವು ತಪ್ಪುಗಳನ್ನು ಟೀಕಿಸಿದರು ಮತ್ತು ಸರಿಯಾದ ದೃಷ್ಟಿಕೋನವನ್ನು ದೃಢವಾಗಿ ಎತ್ತಿಹಿಡಿದರು. ಆ ಕಾಂಗ್ರೆಸ್‌ನಲ್ಲಿ ಅವರು ಪಕ್ಷದ ಕೇಂದ್ರ ಸಮಿತಿಗೆ ಆಯ್ಕೆಯಾದರು.

ಆದರೆ ಪಕ್ಷವು ಇನ್ನೂ ಏಕರೂಪವಾಗಿರಲಿಲ್ಲ. ಬಲಪಂಥೀಯ ಮತ್ತು ಎಡಪಂಥೀಯ ಎರಡೂ ಮಾರ್ಗಚ್ಯುತಿಗಳಿದ್ದವು. ಮಾವೋ, ಈ ಎರಡೂ ಮಾರ್ಗಚ್ಯುತಿಗಳ ವಿರುದ್ಧ ನಿರಂತರ ಸೈದ್ಧಾಂತಿಕ ಹೋರಾಟವನ್ನು ನಡೆಸಬೇಕಾಗಿತ್ತು. ಅವರು ಮಾರ್ಕ್ಸ್‌ವಾದ–ಲೆನಿನ್‌ವಾದದ ಸರಿಯಾದ ತಿಳುವಳಿಕೆಯ ಆಧಾರದ ಮೇಲೆ ವರ್ಗ ಸಂಯೋಜನೆ ಮತ್ತು ವರ್ಗ ಸಂಬಂಧಗಳನ್ನು ಸರಿಯಾಗಿ ವಿಶ್ಲೇಷಿಸಿದರು. 1926 ರಲ್ಲಿ 'ಚೀನಾ ಸಮಾಜದ ವರ್ಗಗಳ ವಿಶ್ಲೇಷಣೆ' ಎಂಬ ಶೀರ್ಷಿಕೆಯ ಪ್ರಮುಖ ಕರಪತ್ರವನ್ನು ಅವರು ಪ್ರಕಟಿಸಿ, ಮಿತ್ರರು ಮತ್ತು ವೈರಿಗಳನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಿದರು. "ನಮ್ಮ ಶತ್ರುಗಳೆಲ್ಲರೂ ಸಾಮ್ರಾಜ್ಯಶಾಹಿಯೊಂದಿಗೆ ಕೈ ಬೆಸೆದಿರುವವರು, ವಾರ್‌ಲಾರ್ಡ್‌ಗಳು, ಅಧಿಕಾರಶಾಹಿಗಳು, ದಲ್ಲಾಳಿ ವರ್ಗ, ದೊಡ್ಡ ಜಮೀನ್ದಾರಿ ವರ್ಗ ಮತ್ತು ಅವರಿಗೆ ಅಂಟಿಕೊಂಡಿರುವ ಬುದ್ಧಿಜೀವಿಗಳ ಪ್ರಗತಿ ವಿರೋಧಿ ವರ್ಗ. ಹಾಗೆಯೇ ಕ್ರಾಂತಿಯ ಸ್ನೇಹಿತರು: ಕೈಗಾರಿಕಾ ಶ್ರಮಜೀವಿಗಳು. ಅರೆ ಶ್ರಮಿಕಜೀವಿಗಳು ಮತ್ತು ಪೆಟಿ ಬೂರ್ಜ್ವಾಗಳು...." ಎಂದು ಅವರು ವಿಶ್ಲೇಷಿಸಿದರು.

## ಚಿಯಾಂಗ್ ಕೈ–ಶೇಕ್‌ರ ತಥಾಕಥಿತ ರಾಷ್ಟ್ರೀಯ ಸರ್ಕಾರದ ಸ್ಥಾಪನೆ

1923 ರಲ್ಲಿ, ಕೌಮಿಂಟಾಂಗ್, ಕಮ್ಯುನಿಸ್ಟ್ 3ನೇ ಅಂತರರಾಷ್ಟ್ರೀಯದ ಮುಂದೊಡಗಿನಲ್ಲಿ ಸಿಪಿಸಿಯೊಂದಿಗೆ ಕೈಜೋಡಿಸಿ ಕುಖ್ಯಾತ ವಾರ್‌ಲಾರ್ಡ್‌ಗಳನ್ನು ಎದುರಿಸಲು ಯುನೈಟೆಡ್ ಫ್ರಂಟ್‌ಅನ್ನು ರಚಿಸಿತು. ಮಾವೋ ಅವರು ಆಗ ಸಿಪಿಸಿಯ ಹುನಾನ್ ಶಾಖೆಯ ಕಾರ್ಯದರ್ಶಿಯಾಗಿದ್ದರು. 1925ರಲ್ಲಿ ಪ್ರಸಿದ್ಧ ಉತ್ತರ ದಂಡಯಾತ್ರೆಯನ್ನು ಪ್ರಾರಂಭಿಸಲಾಯಿತು, ಇದರಲ್ಲಿ ಅನೇಕ ಉತ್ತರ ಪ್ರಾಂತ್ಯಗಳು ವಾರ್‌ಲಾರ್ಡ್‌ಗಳ ಆಳ್ವಿಕೆಯಿಂದ ವಿಮೋಚನೆಗೊಂಡವು. ದಂಡಯಾತ್ರೆಯು 1927ರಲ್ಲಿ ಕೊನೆಗೊಂಡಿತು. ಆ ಹೊತ್ತಿಗೆ, ಡಾ. ಸುನ್‌ಯಾತ್–ಸೆನ್ ನಿಧನರಾದರು ಮತ್ತು ಕೌಮಿಂಟಾಂಗ್‌ನ ನಾಯಕತ್ವವನ್ನು ವಂಚಕ ಚಿಯಾಂಗ್–ಕೈ–ಶೆಕ್ ವಹಿಸಿಕೊಂಡ. ಏಪ್ರಿಲ್ 1927ರಲ್ಲಿ, ಕಾರ್ಮಿಕರ ಬಲಿದಾನದಿಂದ ವಿಮೋಚನೆಗೊಂಡ ಉತ್ತರದ ಪ್ರಾಂತ್ಯಗಳಲ್ಲಿ ಏಕಪಕ್ಷೀಯವಾಗಿ ತಥಾಕಥಿತ ರಾಷ್ಟ್ರೀಯ ಸರ್ಕಾರವನ್ನು ರಚಿಸಿದ.

ಅದೇ ದಿನಗಳಲ್ಲಿ, ಕಮ್ಯುನಿಸ್ಟರು ರೈತ ಕ್ರಾಂತಿಯ ಮುಂಚೂಣಿಯಲ್ಲಿರಬೇಕು, ರೈತರನ್ನು ಕ್ರಾಂತಿಕಾರಿ ಸಂಘಗಳು ಮತ್ತು ಸಮಿತಿಗಳಲ್ಲಿ ಸಂಘಟಿಸಬೇಕು ಎಂಬ ಮಹಾನ್ ಸ್ಟಾಲಿನ್‌ರ ಸಲಹೆಯನ್ನು ಅನುಸರಿಸಿ ಮಾವೋ ಅವರು ರೈತರ ಸಶಸ್ತ್ರ ಪಡೆ ರಚಿಸಿದರು. 1928 ಮತ್ತು 1930ರ ನಡುವೆ ಅವರು ರೈತರನ್ನು ಸಂಘಟಿಸಿದರು ಮತ್ತು ದಕ್ಷಿಣ ಚೀನಾದ ವಿಶಾಲ ಪ್ರದೇಶವನ್ನು ಸ್ವತಂತ್ರಗೊಳಿಸಿದರು.

ಈ ಸಂಸ್ಥೆಗಳು ವಾಸ್ತವಿಕವಾಗಿ ಗ್ರಾಮೀಣ ಚೀನಾದಲ್ಲಿ ರೈತರ ಪರ್ಯಾಯ ರಾಜಕೀಯ ಶಕ್ತಿಯಾಗಿ ಮಾರ್ಪಟ್ಟವು. ಆದರೆ ಇದು ಪಕ್ಷದ ನಾಯಕತ್ವಕ್ಕೆ ಒಪ್ಪಿಗೆಯಾಗಲಿಲ್ಲ ಮತ್ತು ಅನುಮತಿಯಿಲ್ಲದೆ ರೈತರ ಚಳವಳಿಯನ್ನು ಆಯೋಜಿಸಿದ್ದಕ್ಕಾಗಿ ಮಾವೋ ಅವರನ್ನು ಕೇಂದ್ರ ಸಮಿತಿ ಮತ್ತು ರಾಜಕೀಯ ಮಂಡಳಿಗಳಿಂದ ಹೊರಹಾಕಿದರು. ಮೂಲಭೂತ ಪ್ರಶ್ನೆಗಳ ವಿರುದ್ಧ ಸೈದ್ಧಾಂತಿಕ ಹೋರಾಟಕ್ಕಾಗಿ ಮಾವೋ ಅವರನ್ನು ಮೂರು ಬಾರಿ ಹೊರಹಾಕಲಾಯಿತು ಮತ್ತು ಕೇಂದ್ರ ಸಮಿತಿಯಿಂದ ಮೂರು ಬಾರಿ ಅಮಾನತುಗೊಳಿಸಲಾಯಿತು. ಪ್ರತಿ ಬಾರಿಯೂ ಮಾವೋ ಅವರು ಮಾರ್ಕ್ಸ್‌ವಾದಿ ವಿಜ್ಞಾನದ ಸರಿಯಾದ ತಿಳುವಳಿಕೆಯ ಆಧಾರದ ಮೇಲೆ ಸತ್ಯವನ್ನು ಸ್ಥಾಪಿಸಲು ಪಕ್ಷದ ನಾಯಕತ್ವದೊಂದಿಗಿನ ಸೈದ್ಧಾಂತಿಕ ಹೋರಾಟವನ್ನು ಮುಂದುವರಿಸಿದರು. ಅನೇಕ ಹೋರಾಟಗಳ ನಂತರ, 1935ರಲ್ಲಿ ಸೈದ್ಧಾಂತಿಕ ಮತ್ತು ಸಂಘಟನಾತ್ಮಕ ಕ್ಷೇತ್ರಗಳೆರಡರ ಮೇಲೂ ಮಾವೋ ಅವರ ಶ್ರೇಷ್ಠತೆಯನ್ನು ಅಂಗೀಕರಿಸಲಾಯಿತು ಮತ್ತು ಅವರು ಪಕ್ಷದ ಅತ್ಯುನ್ನತ ನಾಯಕರಾಗಿ ಆಯ್ಕೆಯಾದರು. ಅಂದಿನಿಂದ, ಸಿಪಿಸಿ ಒಂದು ನೈಜ ಕಮ್ಯುನಿಸ್ಟ್ ಪಕ್ಷವಾಗಿ ಬೆಳೆಯಿತು.

> ಚೀನಾದ ನೆಲಕ್ಕೆ ಅನುಗುಣವಾಗುವಂತೆ ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಅಳವಡಿಸಿಕೊಂಡು, ಮಾವೋ ಜೆಡಾಂಗ್ ಅಲ್ಲಿ ಸಮಾಜವಾದವನ್ನು ಸ್ಥಾಪಿಸಿದರು, ಅಲ್ಲಿ ಉಳಿದಿದ್ದ ಊಳಿಗಮಾನ್ಯ ಮತ್ತು ಬಂಡವಾಳಶಾಹಿ ಮೌಲ್ಯಗಳು-ಸಂಸ್ಕೃತಿಯ ಬದಲಿಗೆ ಕಾರ್ಮಿಕವರ್ಗದ ಸಂಸ್ಕೃತಿ ಸ್ಥಾಪಿಸಲು ಸಾಂಸ್ಕೃತಿಕ ಕ್ರಾಂತಿಯನ್ನು ಕೈಗೊಂಡರು



ಏತನ್ಮಧ್ಯೆ, ಮಾವೋ, ಚಳುವಳಿಗಳ ನಡುವೆಯೂ ಸಹ, ಚೀನಾದ ಕ್ರಾಂತಿಕಾರಿ ಹೋರಾಟದ ಅನೇಕ ಪ್ರಶ್ನೆಗಳಿಗೆ ಲೇಖನಗಳ ಮೂಲಕ ಉತ್ತರಿಸುತ್ತಾ, ಮಾರ್ಕ್ಸ್‌ವಾದ–ಲೆನಿನ್‌ವಾದ ಭಂಡಾರಕ್ಕೆ ಸ್ಪಷ್ಟವಾದ ಕೊಡುಗೆಗಳನ್ನು ನೀಡಿದರು.

## ಐತಿಹಾಸಿಕ ದೀರ್ಘಯಾನ

ಕಾಮ್ರೇಡ್ ಮಾವೋ ಜೆಡಾಂಗ್ ಅವರ ನೇತೃತ್ವದಲ್ಲಿ ನಡೆದ ದೀರ್ಘಯಾನ (ಲಾಂಗ್ ಮಾರ್ಚ್) ಇತಿಹಾಸದಲ್ಲಿ ಸಾಟಿಯಿಲ್ಲದ್ದು ಮತ್ತು ಕ್ರಾಂತಿಕಾರಿ ಚಳುವಳಿಯಲ್ಲಿ ಒಂದು ಮೈಲಿಗಲ್ಲು. 16 ಅಕ್ಟೋಬರ್ 1934 ರಂದು, ಕೆಂಪು ಸೈನ್ಯವು ಪ್ರತಿಗಾಮಿ ಶತ್ರುಗಳನ್ನು ಎದುರಿಸಿ ಮಹಾನ್ ಪಯಣವನ್ನು ಪ್ರಾರಂಭಿಸಿತು. 368 ದಿನಗಳ ಕಾಲ ನಡೆದ ಈ ಪಯಣದಲ್ಲಿ, ದಕ್ಷಿಣ ಚೀನಾದ ಕಿಯಾಂಗ್ಸಿಯಿಂದ ಉತ್ತರ ಚೀನಾದ ಕಡಿದಾದ ಪರ್ವತ ಪ್ರದೇಶದ ಶೆನ್ಸಿವರೆಗೆ 8,000 ಮೈಲುಗಳನ್ನು (12,500 ಕಿ.ಮೀ) ಕಾಲ್ನಡಿಗೆಯಲ್ಲಿ ಕ್ರಮಿಸಲಾಯಿತು. ಅವರು 24 ನದಿಗಳು ಮತ್ತು 18 ಪರ್ವತ ಶ್ರೇಣಿಗಳನ್ನು ದಾಟಿದರು. ಹೆಚ್ಚಾಗಿ ಹಿಮಾವೃತವಾದ ಜಾಗದಲ್ಲಿ ನಡೆದ ಈ ಪಯಣದಲ್ಲಿ, ಶಸ್ತ್ರಾಸ್ತ್ರಗಳು ಮತ್ತು ಸಾಮಾನು–ಸರಂಜಾಮುಗಳನ್ನು ಬೆನ್ನಿನ ಮೇಲೆ ಅಥವಾ ಕುದುರೆ ಬಂಡಿಗಳ ಮೇಲೆ ಸಾಗಿಸಲಾಯಿತು ಮತ್ತು ಯಾನದಲ್ಲಿ ಹೊರಟವರ ಸಾಲು 50 ಮೈಲುಗಳಷ್ಟು ಉದ್ದವಿತ್ತು. ದಾರಿಯಲ್ಲಿ ಕೌಮಿಂಟಾಂಗ್ ಸೈನ್ಯವನ್ನು ಹಾಗೂ ವಾರ್‌ಲಾರ್ಡ್‌ಗಳ ಸೈನ್ಯವನ್ನು ಸೋಲಿಸಿದರು ಹಾಗೂ 62 ಪಟ್ಟಣಗಳು ಮತ್ತು ಹಲವಾರು ಹಳ್ಳಿಗಳನ್ನು ಸ್ವತಂತ್ರಗೊಳಿಸಿದರು. ಈ ಹೋರಾಟದಲ್ಲಿ, 50,000 ಕ್ಕೂ ಹೆಚ್ಚು ಸಂಗಾತಿಗಳು ಮೃತರಾದರು. ಹಸಿವು, ವೈಮಾನಿಕ ಬಾಂಬ್ ದಾಳಿ ಮತ್ತು ಪ್ರತಿಗಾಮಿ ಶಕ್ತಿಗಳನ್ನು ಎದುರಿಸಿ, ನಂತರ ಚೀನಾದ ಮಹಾಗೋಡೆಯ ತಳದಲ್ಲಿ ಅಕ್ಟೋಬರ್ 20, 1935 ರಂದು ಈ ಪಯಣ ಕೊನೆಗೊಂಡಿತು.

ಅಪಾರ ಸಾವುನೋವುಗಳು ಮತ್ತು ಅಮೂಲ್ಯ ಒಡನಾಡಿಗಳ ಮೃತ್ಯುವಿನ ಹೊರತಾಗಿಯೂ, ಈ ಮಹಾಯಾನ ಸಿಪಿಸಿಯನ್ನು ಬಲಪಡಿಸಿತು, ದೇಶದ ಉದ್ದಗಲಕ್ಕೂ ಕ್ರಾಂತಿಯ ಸಂದೇಶವನ್ನು ಹರಡಿತು, ಶತ್ರುಗಳನ್ನು ದುರ್ಬಲಗೊಳಿಸಿತು ಮತ್ತು ಮಾವೋ ಜೆಡಾಂಗ್ ಅವರು ನಿಸ್ಸಂದಿಗ್ಧವಾಗಿ ನಾಯಕರ ನಾಯಕ ಎಂಬುದನ್ನು ದೃಢಪಡಿಸಿತು.

## ಜಪಾನೀಯರ ಆಕ್ರಮಣ

ಚಿಯಾಂಗ್ ಕೈ ಶೇಕ್‌ನ ತಥಾಕಥಿತ ರಾಷ್ಟ್ರೀಯ ಸರ್ಕಾರವು ಕೆಂಪು ಸೈನ್ಯದ ವಿರುದ್ಧ ಅಂತರ್ಯುದ್ಧವನ್ನು ಮುಂದುವರೆಸಲು ಸಹಾಯ ಕೋರಿ ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಸಂಪೂರ್ಣವಾಗಿ ಶರಣಾಯಿತು. ಹಾಗಾಗಿ, ಜಪಾನ್ ಸಾಮ್ರಾಜ್ಯಶಾಹಿ ಈಶಾನ್ಯ ಚೀನಾದ ಮೇಲೆ ಆಕ್ರಮಣ ಮಾಡಿದಾಗ, ಈ ಸರ್ಕಾರ ಅದನ್ನು ಪ್ರತಿರೋಧಿಸಲಿಲ್ಲ. ಇದರಿಂದ ಜಪಾನ್ ಈಶಾನ್ಯ ಚೀನಾ ಮತ್ತು ಉತ್ತರ ಚೀನಾ ಪ್ರಾಂತ್ಯಗಳ ಕೆಲವು ಭಾಗಗಳನ್ನು ವಶಪಡಿಸಿಕೊಂಡಿತು.

ಜಪಾನ್ ಆಕ್ರಮಣವು ಚೀನಾದ ರಾಜಕೀಯದಲ್ಲಿ ಸಂಪೂರ್ಣ ಬದಲಾವಣೆಯನ್ನು ತಂದಿತು. 1935ರಲ್ಲಿ ಮಾವೋ, 'ಜಪಾನ್ ಸಾಮ್ರಾಜ್ಯಶಾಹಿಯನ್ನು ಎದುರಿಸುವ ತಂತ್ರಗಳು' ಎಂಬ ಲೇಖನದಲ್ಲಿ ಈ ಪರಿಸ್ಥಿತಿಯನ್ನು ಎದುರಿಸುವ ಮಾರ್ಗಸೂಚಿಯನ್ನು ಒದಗಿಸಿದರು. ಜಪಾನ್ ಆಕ್ರಮಣ, ವಿವಿಧ ವರ್ಗಗಳ ನಡುವಿನ ಸಂಬಂಧವನ್ನು ಬದಲಾಯಿಸಿತು, ಇದು ರಾಷ್ಟ್ರೀಯ ಕ್ರಾಂತಿಯ ಶಿಬಿರವನ್ನು ಬಲಪಡಿಸಿತು ಮತ್ತು ಪ್ರತಿ–ಕ್ರಾಂತಿಯ ಶಿಬಿರವನ್ನು ದುರ್ಬಲಗೊಳಿಸಿತು. ಆಗ ಒತ್ತಡಕ್ಕೆ ಒಳಗಾದ ಚಿಯಾಂಗ್ ಕೈ ಶೇಕ್ ಕೆಂಪು ಸೈನ್ಯದೊಂದಿಗೆ ಕೈಜೋಡಿಸಲೇ ಬೇಕಾಗಿ ಬಂದು, ಮಾವೋರವರ ನೇತೃತ್ವದಲ್ಲಿ ಜಪಾನ್ ವಿರುದ್ಧ ಚೀನಾ ಜನತೆಯ 8 ವರ್ಷ ಸುದೀರ್ಘ ಕಾಲದ ಧೀರೋದಾತ್ತ ಹೋರಾಟ ನಡೆಯಿತು.

ತದನಂತರ, ವಿವಿಧ ಗೊಂದಲಗಳ ವಿರುದ್ಧ ಹೋರಾಡುತ್ತಾ, 1940ರಲ್ಲಿ ಮಾವೋ, ಸಂಕ್ರಮಣ ಕಾಲದಲ್ಲಿ ಒಂದು ಐಕ್ಯರಂಗದ ಅವಶ್ಯಕತೆ, ಮತ್ತದರ ಕಾರ್ಯಾಚರಣೆಯ ಬಗ್ಗೆ ಸರಿಯಾದ ತಿಳುವಳಿಕೆ ನೀಡಿದರು.

## ಚೀನಾದ ಸಾಮಾಜಿಕ–ಆರ್ಥಿಕ–ರಾಜಕೀಯ ಪರಿಸ್ಥಿತಿಯ ಸರಿಯಾದ ವಿಶ್ಲೇಷಣೆ

ಚೀನಾ, ಸ್ವತಂತ್ರ ಪ್ರಜಾಪ್ರಭುತ್ವವಲ್ಲ, ಬದಲಿಗೆ, ಅದೊಂದು ಅರೆ–ವಸಾಹತುಶಾಹಿ ಮತ್ತು ಅರೆ–ಊಳಿಗಮಾನ್ಯ ದೇಶ ಹಾಗೂ ಅದು ಸಾಮ್ರಾಜ್ಯಶಾಹಿಗಳ ತುಳಿತಕ್ಕೊಳಗಾಗಿದೆ ಎಂದು ಚೀನಾದ ನಿರ್ದಿಷ್ಟ ಪರಿಸ್ಥಿತಿಯನ್ನು ಮಾವೋ, ಮಾರ್ಕ್ಸ್‌ವಾದ–ಲೆನಿನ್‌ವಾದದ ಬೆಳಕಿನಲ್ಲಿ ಸರಿಯಾಗಿಯೇ ವಿಶ್ಲೇಷಿಸಿದರು. ಹಾಗಾಗಿ,

6ನೇ ಪುಟಕ್ಕೆ....

...5ನೇ ಪುಟದಿಂದ

ಅವರು ತಮ್ಮ ನೆಲಕ್ಕೆ ಅನುಗುಣವಾದ ಕ್ರಾಂತಿಯ ರಣನೀತಿ ಮತ್ತು ರಣಕೌಶಲ್ಯವನ್ನು ರೂಪಿಸಿದರು. ಸಾಮ್ರಾಜ್ಯವಾದದ ಕಾಲಘಟ್ಟದಲ್ಲಿ, ಬಂಡವಾಳವಾದ ತನ್ನ ಪ್ರಗತಿಪರ ಪಾತ್ರವನ್ನು ಕಳೆದುಕೊಂಡು ಪ್ರತಿಗಾಮಿಯಾಗಿರುವಾಗ, ಬಂಡವಾಳಶಾಹಿ ನೇತೃತ್ವದ ಯಾವುದೇ ಕ್ರಾಂತಿಯು ಜನರಿಗೆ ನೈಜ ವಿಮುಕ್ತಿಯನ್ನು ತರಲು ಸಾಧ್ಯವಿಲ್ಲ ಎಂಬ ಲೆನಿನ್‌ರವರ ವಿಶ್ಲೇಷಣೆಯನ್ನು ಅರ್ಥೈಸಿಕೊಂಡ ಮಾವೋ, ಚೀನಾದಲ್ಲಿ ಕ್ರಾಂತಿಯ ನೇತೃತ್ವವನ್ನು ಕಾರ್ಮಿಕವರ್ಗವೇ ವಹಿಸಿಕೊಳ್ಳಬೇಕು ಎಂದು ಈ ನಿಟ್ಟಿನಲ್ಲಿ ಶ್ರಮಿಸಿದರು. ಹಾಗಾಗಿ, ಚೀನಾದಲ್ಲಿ ಜನತಾ ಪ್ರಜಾತಾಂತ್ರಿಕ ಕ್ರಾಂತಿಯು 1949ರಲ್ಲಿ ಯಶಸ್ವಿಯಾಗಿ ನೆರವೇರಿ ಕಾರ್ಮಿಕವರ್ಗದ ನೇತೃತ್ವದ ಸರ್ಕಾರದಲ್ಲಿ ಬಂಡವಾಳಶಾಹಿಗಳು ಪಾಲ್ಗೊಂಡಿರುವಂತಹ ಚೀನಾದ ಜನತಾಂತ್ರಿಕ ರಿಪಬ್ಲಿಕ್ (ಪೀಪಲ್ಸ್ ಡೆಮಾಕ್ರೆಟಿಕ್ ರಿಪಬ್ಲಿಕ್ ಆಫ್ ಚೈನಾ) ಸರ್ಕಾರ ಅಸ್ತಿತ್ವಕ್ಕೆ ಬಂತು. ನಂತರ, 1956ರಲ್ಲಿ ಮಾವೋ ನೇತೃತ್ವದಲ್ಲಿ ಚೀನಾ, ಸಂಪೂರ್ಣವಾಗಿ ಕಾರ್ಮಿಕವರ್ಗವೇ ಸರ್ಕಾರದಲ್ಲಿ ಇರುವಂತಹ ಸಮಾಜವಾದಿ ವ್ಯವಸ್ಥೆಯಾಗಿ ಬದಲಾಯಿತು.

### ಐತಿಹಾಸಿಕ ಸಾಂಸ್ಕೃತಿಕ ಕ್ರಾಂತಿ

ಸೋವಿಯತ್ ಒಕ್ಕೂಟದ ಮಹಾದಂಡನಾಯಕರಾದ ಮಹಾನ್ ಸ್ಟಾಲಿನ್‌ರವರು, ಸಮಾಜವಾದಿ ರಾಷ್ಟ್ರದಲ್ಲೂ ಇರುವ ಕೊಳೆತ ಬಂಡವಾಳಶಾಹಿ ಚಿಂತನೆಗಳನ್ನು ಕೊನೆಗಾಣಿಸಲು, ಪಕ್ಷದಲ್ಲಿನ ಕಾಮ್ರೇಡರ ಪ್ರಜ್ಞಾಮಟ್ಟವನ್ನು ಉನ್ನತೀಕರಿಸಲು, ಇಡೀ ಪಕ್ಷವನ್ನು ಒಳಗೊಂಡಂತಹ ವೈಚಾರಿಕಾ ಸಂಘರ್ಷವನ್ನು ಹರಿಬಿಡುವ ಯೋಜನೆ ಹಾಕಿಕೊಂಡಿದ್ದರು. ಆದರೆ, ಅಷ್ಟರಲ್ಲೇ ಅವರು ಮರಣ ಹೊಂದಿದ್ದರಿಂದ ಅದು ಸಾಕಾರವಾಗಲಿಲ್ಲ. ಬದಲಿಗೆ, ನಂತರ ಬಂದ ಕ್ರುಶ್ಚೇವ್, ಸ್ಟಾಲಿನ್‌ರವರ ಬಗ್ಗೆ ಅಪಪ್ರಚಾರ ನಡೆಸಿ, ಅವರನ್ನು ಕಡೆಗಣಿಸಿ ಪಕ್ಷದಲ್ಲಿ ಆಧುನಿಕ ಪರಿಷ್ಕರಣವಾದವನ್ನು ನೆಲೆಗೊಳಿಸಿದರು, ದೇಶದಲ್ಲಿ ಸಮಾಜವಾದವನ್ನು ಬುಡಮೇಲು ಮಾಡುವ ಪ್ರಯತ್ನದಲ್ಲಿ ತೊಡಗಿಕೊಂಡರು. ಇದನ್ನು ಪಕ್ಷದಲ್ಲಿ ಯಾರೂ ವಿರೋಧಿಸದೆ ಇದ್ದದ್ದಕ್ಕೆ ಪ್ರಮುಖ ಕಾರಣ, ಅವರಲ್ಲಿನ ಕೆಳಮಟ್ಟದ ಪ್ರಜ್ಞೆಯೇ ಎಂದು ಕಾ. ಶಿವದಾಸ್ ಘೋಷ್‌ರವರು ತೋರಿಸಿಕೊಟ್ಟಿದ್ದಾರೆ.

ಅದೇ ಕಾಲಕ್ಕೆ, ಸಿಪಿಸಿಯ ಕೆಲವು ಮುಂಚೂಣಿ ನಾಯಕರಲ್ಲಿಯೂ ಆಧುನಿಕ ಪರಿಷ್ಕರಣವಾದ ನುಸುಳುತ್ತಿದೆ ಎಂದು ಮಾವೋ ಸರಿಯಾಗಿಯೇ ಗ್ರಹಿಸಿದರು; ಹಾಗಾಗಿಯೇ, ಪಾರ್ಕಿನ್ಸನ್ ಕಾಯಿಲೆಯಿಂದ ಬಳಲುತ್ತಿದ್ದರೂ, ಸ್ಪಷ್ಟವಾಗಿ ಮಾತನಾಡುವ ಶಕ್ತಿಯನ್ನು ಸಹ ಕಳೆದುಕೊಂಡಿದ್ದರೂ, ಅವರು ಒಂದು ಬೃಹತ್ ಮಟ್ಟದಲ್ಲಿ ಸರ್ಕಾರದಲ್ಲಿನ, ನಾಯಕರಲ್ಲಿನ ತಪ್ಪುಗಳನ್ನು ಸರಿಪಡಿಸುವ ಸಂಘರ್ಷದೊಂದಿಗೆ ಒಂದು ವೈಚಾರಿಕಾ–ಸಾಂಸ್ಕೃತಿಕ ಹೋರಾಟದ ಮಹಾನ್ ಕಾರ್ಮಿಕವರ್ಗದ ಸಾಂಸ್ಕೃತಿಕ ಕ್ರಾಂತಿಯನ್ನು ಹರಿಬಿಡುವ ನಿರ್ಧಾರವನ್ನು ಕೈಗೊಂಡರು. ಇದು ಕೇವಲ ಸಿಪಿಸಿ ಮಾತ್ರವಲ್ಲದೆ ಸಮಸ್ತ ಜನರನ್ನು ಒಳಗೊಂಡಿದ್ದಂತಹ ಒಂದು ಅಭೂತಪೂರ್ವ ಕ್ರಾಂತಿಯಾಗಿತ್ತು, ಒಂದು ಹೊಸ ವೈಚಾರಿಕತೆ ಮತ್ತು ಸಂಸ್ಕೃತಿ–ಮೌಲ್ಯಗಳನ್ನು ಇಡೀ ದೇಶದ ಜನರಲ್ಲಿ ನೆಲೆಗೊಳಿಸುವ ಕ್ರಾಂತಿಯಾಗಿತ್ತು. ಅದು ಬಹಳ ಮಟ್ಟಿಗೆ ಯಶಸ್ವಿಯಾಗಿ ಪರಿಷ್ಕರಣವಾದಿ ನಾಯಕರನ್ನು ಮೂಲೆಗುಂಪು ಮಾಡಿತು. ಮಾವೋ ಅವರ ಈ ಸಾಹಸವನ್ನು ವಿಶ್ವದ ಬಹುತೇಕರು ಅನುಮೋದಿಸದಿದ್ದಾಗ, ಅದನ್ನು ಅತ್ಯದ್ಭುತ ಎಂದು ಶ್ಲಾಘಿಸಿದ್ದು ಕೇವಲ ಕಾಮ್ರೇಡ್ ಶಿವದಾಸ್ ಘೋಷ್ ಮಾತ್ರವೇ!

ಆದರೂ, ದುರಂತವೆಂದರೆ, ಮಾವೋ ಜೆ ಡಾಂಗ್ ಮರಣದ ನಂತರ, ಸಾಂಸ್ಕೃತಿಕ ಕ್ರಾಂತಿಯನ್ನು ವಿರೋಧಿಸಿದ ಪರಿಷ್ಕರಣವಾದಿಗಳು ಚೀನಾದಲ್ಲಿ ಅಧಿಕಾರವನ್ನು ಕಬಳಿಸಿದರು, ಪ್ರತಿಕ್ರಾಂತಿಕಾರಿ ಪ್ರಕ್ರಿಯೆಯ ಮೂಲಕ ಸಮಾಜವಾದವನ್ನು ನಾಶಮಾಡಿ ಸಾಮ್ರಾಜ್ಯವಾದವನ್ನು ಸ್ಥಾಪಿಸಿದರು.

ಹಾಗಾಗಿ, ಒಂದು ಸ್ಥಿತ್ಯಂತರ ವ್ಯವಸ್ಥೆಯಾದ ಸಮಾಜವಾದವನ್ನು ಕಾಪಾಡಿಕೊಳ್ಳಬೇಕಾದರೆ, ಬಂಡವಾಳಶಾಹಿ ಚಿಂತನೆಗಳನ್ನು ಆ ಸಮಾಜದಿಂದ ಕಿತ್ತೊಗೆದು, ಅಲ್ಲಿ ಉನ್ನತ ಕಾರ್ಮಿಕವರ್ಗ ವೈಚಾರಿಕತೆ, ಮೌಲ್ಯಪ್ರಜ್ಞೆ ಮತ್ತು ಸಂಸ್ಕೃತಿಗಳನ್ನು ನೆಲೆಗೊಳಿಸುವ ಮಹತ್ತರ ಕಾರ್ಯ ನಡೆಯಬೇಕು ಎಂಬ ಪಾಠವನ್ನು, ನಾವು ಹಿಂದೆ ಸಮಾಜವಾದಿಯಾಗಿದ್ದು ಈಗ ಪ್ರತಿಕ್ರಾಂತಿಗೆ ಬಲಿಯಾಗಿ ಸಾಮ್ರಾಜ್ಯಶಾಹಿಗಳಾಗಿರುವ ರಷ್ಯಾ ಮತ್ತು ಚೀನಾ ದೇಶಗಳಿಂದ ಕಲಿಯುವುದು ಅವಶ್ಯಕ. ■

# ದಾವಣಗೆರೆ: ಬೀದಿಗಿಳಿದ ಬಗರ್‌ಹುಕುಂ ಸಾಗುವಳಿದಾರರಿಂದ ಹಕ್ಕುಪತ್ರಕ್ಕಾಗಿ ಆಗ್ರಹ




ರಾಜ್ಯದಾದ್ಯಂತ ಭೂಹೀನ ಬಡ ರೈತರು ಸರಿಯಾದ ಕೆಲಸ ಸಿಗದ ಕಾರಣಕ್ಕೆ ಬದುಕಲು ಬೇರೆ ದಾರಿ ಕಾಣದೆ ಜೀವನ ನಿರ್ವಹಣೆಗೆ ಅನಿವಾರ್ಯವಾಗಿ ಹಲವು ದಶಕಗಳಿಂದಲೂ ಕಂದಾಯ ಹಾಗೂ ಅರಣ್ಯದಂಚಿನ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಪಕ್ಷದ ಸರ್ಕಾರದ ಆಳ್ವಿಕೆಯಿರಲಿ ಈ ರೀತಿಯ ಸಾಗುವಳಿಗೆ ಅವಕಾಶ ಮಾಡಿ ಕೊಟ್ಟಿದ್ದರೂ, ಸಾಗುವಳಿ ಮಾಡುತ್ತಿರುವ ಬಡ ರೈತ ಹಾಗೂ ಕೃಷಿ ಕಾರ್ಮಿಕರಿಗೆ ಹಕ್ಕುಪತ್ರವನ್ನು ನೀಡಲು ಅವಶ್ಯಕ ಕ್ರಮಕೈಗೊಂಡಿಲ್ಲ. ಶಾಸನಬದ್ಧವಾಗಿ ಭೂಮಿಯ ಹಕ್ಕು ದೊರೆಯದೆ ಇರುವುದರಿಂದ ಬಗರ್ ಹುಕುಂ ಸಾಗುವಳಿದಾರರು ಸಮಾಜದಲ್ಲಿನ ಇತರೆ ಜನರಂತೆ ನಿಶ್ಚಿತ ಬದುಕು ರೂಪಿಸಿಕೊಳ್ಳಲಾಗದೆ ದಶಕಗಳಿಂದ ತೀವ್ರ ಮಾನಸಿಕ ತೊಳಲಾಟದಲ್ಲಿದ್ದು ಜರ್ಜರಿತರಾಗಿದ್ದಾರೆ. ಅಲ್ಲದೆ ಅವರ ಕುಟುಂಬ ಹಾಗೂ ಮಕ್ಕಳ ಭವಿಷ್ಯವು ತೀವ್ರ ಅಭದ್ರತೆಯಿಂದ ಕೂಡಿದೆ. ಬಹುತೇಕ ಸಾಗುವಳಿದಾರರು ಅನಕ್ಷರಸ್ಥರಾಗಿದ್ದು ಕೃಷಿಯ ಮೇಲೆಯೇ ಸಂಪೂರ್ಣವಾಗಿ ಅವಲಂಬಿತರಾಗಿದ್ದಾರೆ. ಇವರಿಗೆ ಸರ್ಕಾರ ಹಕ್ಕುಪತ್ರ ಕೊಡದೆ ಇರುವುದರಿಂದ ಕೃಷಿ ಬೆಳೆ ಸಾಲ, ಕೃಷಿ ಪರಿಕರಗಳ ಮೇಲಿನ ಸಾಲ, ಹಾಗೂ ಇನ್ನಿತರ ಜೀವನೋಪಾಯಕ್ಕಾಗಿ ಸಹಕಾರಿ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಯಾವುದೇ ರೀತಿಯ ಅಲ್ಪಾವಧಿ ಕೃಷಿ ಸಾಲವು ದೊರೆಯದ ಕಾರಣ ಬಹುತೇಕ ಬಡ ರೈತ ಕೃಷಿ ಕಾರ್ಮಿಕರು ಬೇರೆ ದಾರಿಯಿಲ್ಲದೆ ಖಾಸಗಿ ವ್ಯಕ್ತಿಗಳ ಬಳಿ ಹೆಚ್ಚಿನ ಬಡ್ಡಿ ದರದ ಸಾಲಕ್ಕೆ ಮೊರೆ ಹೋಗಿ ತೀವ್ರ ಸಂಕಟಕ್ಕೆ ಸಿಲುಕಿದ್ದಾರೆ. ಹಲವರು ಈ ಬಡ್ಡಿಯ ಜಾಲಕ್ಕೆ ಸಿಲುಕಿ ಸಾಲ ತೀರಿಸಲಾಗದೆ ಆತ್ಮಹತ್ಯೆಯಂತಹ ದಾರುಣ ಕೃತ್ಯಕ್ಕೆ ಮೊರೆ ಹೋಗುವಂತಹ ಘಟನೆಗಳು ಪದೇ ಪದೇ ವರದಿಯಾಗುವುದನ್ನು ಕಾಣುತ್ತಿದ್ದೇವೆ.

ಒಂದೆಡೆ ಹಲವಾರು ವರ್ಷಗಳಿಂದ ಸಣ್ಣಪುಟ್ಟ ಹಿಡುವಳಿಗಳನ್ನು ಮಾಡಿಕೊಂಡು ಜೀವನ ಸಾಗಿಸುತ್ತಿರುವ ಬಗರ್ ಹುಕುಂ ಸಾಗುವಳಿದಾರರು ಅರಣ್ಯ ಪ್ರದೇಶಕ್ಕೆ ಯಾವುದೇ ಹಾನಿ ಮಾಡುತ್ತಿಲ್ಲ, ಬದಲಾಗಿ ಅವರು ದೇಶ ಹಾಗೂ ರಾಜ್ಯದ ಆಹಾರ ಭದ್ರತೆಗೆ ತಮ್ಮದೇ ಆದ ಮಹತ್ತರ ಕೊಡುಗೆ ನೀಡುತ್ತಿದ್ದಾರೆ. ಜನಗಳ ಹಸಿವನ್ನು ಇಂಗಿಸುತ್ತಿದ್ದಾರೆ. ಆದರೆ ಅವರ ಬಗ್ಗೆ ನಿರ್ಲಕ್ಷ್ಯ ತಾಳಲಾಗುತ್ತಿದೆ. ಇನ್ನೊಂದೆಡೆ ಅಧಿಕಾರಕ್ಕೆ ಬಂದ ಯಾವುದೇ ಸರ್ಕಾರವಿರಲಿ, ಶ್ರೀಮಂತ ಉದ್ಯಮಿಗಳಿಗೆ ರೆಸಾರ್ಟ್, ಹೋಂಸ್ಟೇ, ಹೆರಿಟೇಜ್‌ಹೋಮ್ಸ್, ಪ್ಲಾಂಟೇಷನ್ ಗಾರ್ಡನ್, ಮುಂತಾದವುಗಳಿಗೆ ರತ್ನಕಂಬಳಿ ಹಾಸಿ, ಅವರಿಗೆ ಸಾವಿರಾರು ಎಕರೆ ಭೂಮಿಯನ್ನು ವಶಪಡಿಸಿಕೊಳ್ಳಲು ಬೇಕಾಬಿಟ್ಟಿ ಪರವಾನಿಗೆ ನೀಡುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ದೇಶಕ್ಕೆ ಅನ್ನ ಹಾಕುವ. ಜನಗಳ ಹಸಿವನ್ನು ನೀಗಿಸುವ ದುಡಿಯುವ ಭೂ ಹೀನ ಹಾಗೂ ಬಡ ರೈತ, ಕೃಷಿ ಕಾರ್ಮಿಕರ ಬಗ್ಗೆ ಆಳುತ್ತಿರುವ ಸರ್ಕಾರಗಳ ಹೃದಯ ಮಿಡಿಯುತ್ತಿಲ್ಲ ಏಕೆ? ಇದು ಸ್ಪಷ್ಟವಾಗಿ, ನಮ್ಮನಾಳುವ ಸರ್ಕಾರಗಳು ಬಾಯಲ್ಲಿ ರೈತಪರ– ಬಡ ಜನರಪರ ಘೋಷಣೆ ಕೂಗುತ್ತಾ ಕೃತಿಯಲ್ಲಿ ಜನವಿರೋಧಿ ನೀತಿಗಳನ್ನೇ ಜಾರಿ ಮಾಡುತ್ತಿರುವುದು ಎನ್ನುವುದನ್ನು ಸ್ಪಷ್ಟವಾಗಿ ತೋರಿಸುತ್ತಿದೆ.


ದಾವಣಗೆರೆ ಜಿಲ್ಲೆಯಾದ್ಯಂತ ಸರಿಸುಮಾರು 15 ಸಾವಿರಕ್ಕೂ ಹೆಚ್ಚು ಸಾಗುವಳಿದಾರರು ಇದ್ದು ಕಂದಾಯ ಹಾಗೂ ಅರಣ್ಯದ ಅಂಚಿನಲ್ಲಿ ಸತತ 60–70 ವರ್ಷಗಳಿಂದಲೂ ಉಳುಮೆ ಮಾಡುವುದರ ಜೊತೆಗೆ ಹಲವಾರು ಕಿರುಕುಳಗಳನ್ನು ಸಹ ಅನುಭವಿಸಿರುತ್ತಾರೆ. ಬಹುಪಾಲು ರೈತರಿಗೆ ಇದರಿಂದ ಬರುವ ಅಲ್ಪ ಸ್ವಲ್ಪ ವರಮಾನವೇ ಜೀವನಾಧಾರವಾಗಿದೆ. ಆದರೆ ಇಲ್ಲಿಯವರೆಗೆ ಬಗರ್ ಹುಕುಂ ಸಾಗುವಳಿದಾರರ ಸಾವಿರಾರು ಅರ್ಜಿಗಳು ಸರ್ಕಾರದ ಮುಂದೆ ಇದ್ದರೂ ಅವರುಗಳಿಗೆ ಹಕ್ಕುಪತ್ರ ಕೊಟ್ಟಿಲ್ಲ. ಇನ್ನೂ ಭೂ ಹೀನ ಹಾಗೂ ಬಡ ರೈತ ಕೃಷಿ–ಕಾರ್ಮಿಕರು ಹಕ್ಕುಪತ್ರ ಪಡೆಯಲು ಅರ್ಜಿ ಹಾಕಬೇಕೆಂದು ಕಾಯುತ್ತಿದ್ದರೂ ಜಿಲ್ಲಾಡಳಿತ ಸೂಕ್ತ ತೀರ್ಮಾನ ತೆಗೆದುಕೊಳ್ಳದ ಪರಿಣಾಮವಾಗಿ ಬಗರ್ ಹುಕುಂ ಸಾಗುವಳಿದಾರರು ಆತಂಕದಿಂದಲೇ ದಿನ ದೂಡುತ್ತಿದ್ದಾರೆ.

ಈ ಎಲ್ಲಾ ಅಹವಾಲುಗಳೊಂದಿಗೆ ದಾವಣಗೆರೆಯ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ರೈತರು ಆಕ್ಟೋಬರ್ 14ರಿಂದ ಅನಿರ್ದಿಷ್ಟ ಮುಷ್ಕರ ಆರಂಭಿಸಿದರು. ಜಿಲ್ಲೆಯ ಹರಿಹರ, ಚನ್ನಗಿರಿ, ಹೊನ್ನಾಳಿ ಮತ್ತು ಜಗಳೂರು ತಾಲ್ಲೂಕುಗಳಿಂದಲೂ ಸೇರಿ ನೂರಾರು ರೈತರು ಭಾಗವಹಿಸಿದ್ದರು. ಹಲವು ಬೇಡಿಕೆಗಳ ಮನವಿ ಪತ್ರ ಸಲ್ಲಿಸುವುದರ ಜೊತೆಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಎಲ್ಲಾ ತಾಲ್ಲೂಕಿನ ತಹಶೀಲ್ದಾರ್‌ಗಳೊಂದಿಗೆ ಹಾಗೂ ರೈತ ಪ್ರತಿನಿಧಿಗಳೊಂದಿಗೆ ಸುದೀರ್ಘ ಸಭೆ ನಡೆಸಿ ರೈತರ ಅಹವಾಲುಗಳನ್ನು ಸ್ವೀಕರಿಸಿ ಬಗರ್‌ಹುಕುಂ ರೈತರಿಗೆ ಹಕ್ಕುಪತ್ರ ನೀಡಬೇಕೆಂದು ಜಿಲ್ಲಾಡಳಿತವನ್ನು ಆಗ್ರಹಿಸಲಾಯಿತು. ಸರ್ಕಾರ ಬಗರ್‌ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ಕೊಡುವುದೆಂದರೆ ದೊಡ್ಡಕರುಣೆ ಅಥವಾ ಭಿಕ್ಷೆಯಲ್ಲ. ಅದು ನ್ಯಾಯಬದ್ಧವಾಗಿ ಕೊಡಬೇಕಾಗಿರುವ ಹಕ್ಕು. ಬಗರ್ ಹುಕುಂ ಸಾಗುವಳಿ ಮಾಡುತ್ತಿರುವವರನ್ನು ಅತ್ಯಂತ ಮಾನವೀಯತೆಯ ದೃಷ್ಟಿಯಿಂದ ನೋಡಿ ಅವರ ಬೇಡಿಕೆಗಳನ್ನು ಈಡೇರಿಸಬೇಕು. ಈ ನೊಂದ ಸಾಗುವಳಿದಾರರ ಪರವಾಗಿ ಜಿಲ್ಲಾಡಳಿತ ನೆರವಿಗೆ ಧಾವಿಸಬೇಕಾಗಿರುವುದು ಈ ಗಳಿಗೆಯ ಅವಶ್ಯಕತೆಯಾಗಿದೆ.

ಅಂದು ಬಗರ್ ಹುಕುಂ ಸಾಗುವಳಿದಾರರ ಅನಿರ್ದಿಷ್ಟಾವಧಿ ಧರಣಿಯನ್ನು ತಾತ್ಕಾಲಿಕವಾಗಿ ಹಿಂಪಡೆಯಲಾಯಿತು. ಅಪರ ಜಿಲ್ಲಾಧಿಕಾರಿಗಳಾದ ಲೋಕೇಶ್‌ರವರು ಧರಣಿ ನಿರತ ರೈತರೊಂದಿಗೆ ಅಂದು ರಾತ್ರಿ 8 ಗಂಟೆಗೆ ಒಂದು ಸಭೆ ನಡೆಸಿದರು. ಅಲ್ಲಿ ಅವರು ಮಾಯಕೊಂಡ ತಾಲೂಕು ಹೊರತುಪಡಿಸಿ ಉಳಿದ ತಾಲೂಕುಗಳಲ್ಲಿ ಮುಂದಿನ ವಾರದಿಂದಲೇ ಭೂ ಮಂಜೂರಾತಿ ಸಮಿತಿ ಕಾರ್ಯನಿರ್ವಹಿಸುತ್ತವೆ ಹಾಗೂ ಎಐಕೆಕೆಎಂಎಸ್‌ನ ಮುಖ್ಯ ಬೇಡಿಕೆಯಾದ ಬಗರ್ ಹುಕುಂ ವಿಷಯ ಸುತ್ತುವರೆದಂತೆ ಸುದೀರ್ಘ ಚರ್ಚೆ ಮಾಡಲು ರೈತ ಸಂಘಟನೆಗಳ ಹಾಗೂ ಗ್ರಾಮವಾರು ಪ್ರತಿನಿಧಿಗಳನ್ನು ಸೇರಿಸಿ ಸಭೆ ಕರೆಯುವುದಾಗಿ ಆಶ್ವಾಸನೆ ಕೊಟ್ಟರು. ಅವರ ಖಚಿತ ಭರವಸೆಯೊಂದಿಗೆ ಎಲ್ಲಾ ಹೋರಾಟ ನಿರತ ಸಾಗುವಳಿದಾರರ ಅಭಿಪ್ರಾಯ ಪಡೆದು ಧರಣಿಯನ್ನು ತಾತ್ಕಾಲಿಕವಾಗಿ ಹಿಂಪಡೆಯಲಾಯಿತು. ■







# ತೆಂಗು ಬೆಳೆಗಾರರ ರಾಷ್ಟ್ರೀಯ ಸಮಾವೇಶ

ಕಲ್ಪತರು ನಾಡಿನ ತೆಂಗು ಬೆಳೆಗಾರರು ಅತ್ಯಂತ ಅಸಹಾಯಕ ಸ್ಥಿತಿಯಲ್ಲಿದ್ದಾರೆ. ಕ್ವಿಂಟಾಲ್‌ಗೆ ಸುಮಾರು ರೂ. 13,000 ದಿಂದ 18,000 ಸಾವಿರದವರೆಗೂ ಬರುವ ಕೊಬ್ಬರಿ ಬೆಲೆಯು ಕಳೆದ ಒಂದು ವರ್ಷದಿಂದ ರೂ. 8,000 ಕ್ಕೆ ಕುಸಿದಿದೆ. ರೈತರು ಹಾಕುವ ಶ್ರಮವಿರಲಿ, ಮಾಡುವ ಖರ್ಚು ಸಹ ಸಿಗದೆ ತೀವ್ರ ನಷ್ಟ ಅನುಭವಿಸುತ್ತಿದ್ದಾರೆ. ದೇಶಕ್ಕೆ ಸಾವಿರಾರು ಕೋಟಿ ರೂ. ವಿದೇಶಿ ವಿನಿಮಯ ನೀಡುವ ತೆಂಗು ಬೆಳೆಯುವ ರೈತರು ಆರ್ಥಿಕ ನಷ್ಟದಲ್ಲಿ ಮುಳುಗಬೇಕಾಗಿದೆ. ಕೊಬ್ಬರಿ ಬೆಲೆಯು ತೀವ್ರವಾಗಿ ಕುಸಿದಾಗ ಕೇಂದ್ರ ಸರ್ಕಾರ ಖರೀದಿ ಕೇಂದ್ರಗಳನ್ನು ತೆರೆದು ಕನಿಷ್ಠ ಬೆಂಬಲ ಬೆಲೆಯಡಿ ಕೊಬ್ಬರಿ ಖರೀದಿಸುತ್ತದೆ. ಕನಿಷ್ಟ ಬೆಂಬಲ ಬೆಲೆಯೂ ಅತ್ಯಂತ ಕನಿಷ್ಠವಾಗಿದೆ, ಕೇಂದ್ರ ಸರ್ಕಾರ ಈ ವರ್ಷ ಕೊಬ್ಬರಿಗೆ ರೂ.12,500 ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಿದೆ. ಕಳೆದ ಹಲವಾರು ವರ್ಷಗಳಿಂದ ಕೊಬ್ಬರಿಗೆ ಸ್ವಾಮಿನಾಥನ್ ವರದಿಯ ಪ್ರಕಾರ ಸಿ2+50% ಸೂತ್ರದಡಿ ಕನಿಷ್ಠ ಬೆಂಬಲ ನಿಗದಿಪಡಿಸಬೇಕು ಎಂದು ಹೋರಾಟಗಳು ನಡೆದಿವೆ. ದುರಂತವೆಂದರೆ, ಸರ್ಕಾರದ ತೋಟಗಾರಿಕೆ ಇಲಾಖೆಯೇ ರೂ.16,700 ಬೆಲೆಯನ್ನು ಶಿಫಾರಸ್ಸು ಮಾಡಿದೆ. ಆದರೂ ಸರ್ಕಾರ ಅದನ್ನು ಕಸದ ಬುಟ್ಟಿಗೆ ಹಾಕಿ ಬೆಂಬಲ ಬೆಲೆಯನ್ನು ಹೆಚ್ಚಿಸಲಿಲ್ಲ. ಜೊತೆಗೆ, ಕನಿಷ್ಠ ಬೆಂಬಲ ಬೆಲೆಯಡಿ ಖರೀದಿಸಿದ ಕೊಬ್ಬರಿಗೆ ಸೂಕ್ತ ಸಮಯದಲ್ಲಿ ಹಣ ಪಾವತಿ ಮಾಡದಿರುವುದರಿಂದ ರೈತರು ಮಧ್ಯವರ್ತಿಗಳ ಸುಳಿಗೆ ಸಿಲುಕಬೇಕಾಗಿದೆ.

ಕೊಬ್ಬರಿ ಬೆಲೆ ತೀವ್ರವಾಗಿ ಕುಸಿಯಲು ಕೇಂದ್ರ ಸರ್ಕಾರ ಮುಕ್ತ ಮಾರುಕಟ್ಟೆಯಡಿ ಮಲೇಷಿಯಾ, ಶ್ರೀಲಂಕಾ, ಇಂಡೋನೇಷಿಯಾ, ಥೈಲ್ಯಾಂಡ್, ಮುಂತಾದ ದೇಶಗಳಿಂದ ತೆಂಗಿನ ಉತ್ಪನ್ನಗಳನ್ನು ಮತ್ತು ತೆಂಗಿನೆಣ್ಣೆಗೆ ಪರ್ಯಾಯವಾದ ಅಗ್ಗದ ತಾಳೆ ಎಣ್ಣೆ, ಸೋಯಾ ಎಣ್ಣೆಗಳನ್ನು ಆಮದು ಮಾಡಿಕೊಳ್ಳುವುದೇ ಮುಖ್ಯ ಕಾರಣ. ದೇಶದಲ್ಲಿ, ಸರ್ಕಾರಿ ಕಾರ್ಖಾನೆಗಳಲ್ಲೂ ತೆಂಗಿನೆಣ್ಣೆಗೆ ಬದಲಾಗಿ ಅಗ್ಗದ ತಾಳೆ ಎಣ್ಣೆಯನ್ನು ಉಪಯೋಗಿಸಲಾಗುತ್ತಿದೆ. ಇದೆಲ್ಲವೂ ಸೇರಿ ಕೊಬ್ಬರಿ ಬೆಲೆ ತೀವ್ರವಾಗಿ ಕುಸಿದಿದೆ. ರೈತರ ನೆರವಿಗೆ ಬರಬೇಕಾದ ಕೇಂದ್ರ ಸರ್ಕಾರ ಆಮದು ಮತ್ತು ರಫ್ತು ವ್ಯವಹಾರಗಳಲ್ಲಿ, ಕೊಬ್ಬರಿ ಖರೀದಿಯಲ್ಲಿ ತೊಡಗಿರುವ ಕಾರ್ಪೊರೇಟ್ ಕಂಪೆನಿಗಳ ಹಾಗೂ ಶ್ರೀಮಂತ ವರ್ತಕರ ನೆರವಿಗೆ ನಿಂತು ಕೊಬ್ಬರಿಗೆ ನ್ಯಾಯಯುತವಾದ ಬೆಲೆ ನಿಗದಿ ಮಾಡುತ್ತಿಲ್ಲ ಮತ್ತು ರೈತ ಸಮುದಾಯದ ಹಿತವನ್ನು ಕಾಪಾಡುವಂತಹ ಆಮದು, ರಫ್ತು ನೀತಿಗಳನ್ನೂ ರೂಪಿಸುತ್ತಿಲ್ಲ.

ತೆಂಗು ಬೆಳೆಗಾರರು ಬದುಕನ್ನು ಕಟ್ಟಿಕೊಳ್ಳಬೇಕೆಂದರೆ ಸರ್ಕಾರ ಸಮಗ್ರವಾದ ನೀತಿಯನ್ನು ರೂಪಿಸಬೇಕು. ತೆಂಗು ಬೆಳೆಗಾರರ ಪರವಾದ ಕ್ರಮಗಳಿಗೆ ಒತ್ತಾಯಿಸಿ ರಾಜ್ಯದಲ್ಲಿ ಹಾಗೂ ಬೇರೆಡೆ ಹಲವಾರು ಹೋರಾಟಗಳು ನಡೆದಿವೆ. ಇದರ ಮುಂದುವರಿಕೆಯಾಗಿ ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆಗೆ (ಎಐಕೆಕೆಎಂಎಸ್) ಸಂಯೋಜಿತಗೊಂಡ 'ತೆಂಗು ಬೆಳೆಗಾರರ ಹೋರಾಟ ಸಮಿತಿ'ಯು ನವದೆಹಲಿಯಲ್ಲಿ 2024 ರ ಸೆಪ್ಟೆಂಬರ್ 24 ರಂದು 'ತೆಂಗು ಬೆಳೆಗಾರರ ರಾಷ್ಟ್ರೀಯ ಸಮಾವೇಶ' ಹಮ್ಮಿಕೊಂಡಿತ್ತು. ಕೊಬ್ಬರಿಗೆ ಕನಿಷ್ಠ ಬೆಂಬಲ ಬೆಲೆಯನ್ನು ರೂ.25,000 ಕ್ಕೆ ನಿಗದಿಪಡಿಸಬೇಕು; ತೆಂಗಿನ ಉತ್ಪನ್ನಗಳ ಮತ್ತು ತಾಳೆ, ಸೋಯಾ ಎಣ್ಣೆಯ ಆಮದನ್ನು ನಿಲ್ಲಿಸಬೇಕು; ತೆಂಗಿನ ಉಪಉತ್ಪನ್ನಗಳನ್ನು ಮೌಲ್ಯವರ್ಧನೆಗೊಳಿಸುವ ರೀತಿಯಲ್ಲಿ ಅಭಿವೃದ್ಧಿಪಡಿಸಬೇಕು; ವರ್ಷವಿಡೀ ಕೊಬ್ಬರಿ, ತೆಂಗಿನಕಾಯಿ ಖರೀದಿಯನ್ನು ಮಾಡಬೇಕು, ಮುಂತಾದ ಹಕ್ಕೊತ್ತಾಯಗಳನ್ನು ಈಡೇರಿಸಬೇಕೆಂದು ಸಮಾವೇಶದಲ್ಲಿ ಒತ್ತಾಯಿಸಲಾಯಿತು.

ರಾಷ್ಟ್ರೀಯ ಸಮಾವೇಶವನ್ನು ಉದ್ದೇಶಿಸಿ ಎಐಕೆಕೆಎಂಎಸ್ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಶಂಕರ್ ಘೋಷ್ ಮಾತನಾಡಿದರು: ವಿವಿಧ ಬೆಳೆಗಳನ್ನು ಬೆಳೆಯುವ ರೈತರಿದ್ದರೂ ಒಟ್ಟಾರೆಯಾಗಿ ರೈತರ ಸಮಸ್ಯೆಗಳಲ್ಲೆವೂ ಒಂದೇ. ಕೊಬ್ಬರಿ ಬೆಳೆಗಾರರ ಸಮಸ್ಯೆ ಹೊಸದೇನಲ್ಲ. ಕೃಷಿಯಲ್ಲಿ ಕಾರ್ಪೊರೇಟ್ ಕಂಪೆನಿಗಳು ದಾಳಿ ಮಾಡಿವೆ. ಅವುಗಳು ಎಲ್ಲಾ ಬಗೆಯ ರೈತರನ್ನು ತುಳಿಯುತ್ತಿವೆ ಮತ್ತು ಶೋಷಿಸುತ್ತಿವೆ. ಪಶ್ಚಿಮ ಬಂಗಾಳದಲ್ಲಿ ಸೆಣಬು, ಕೇರಳದಲ್ಲಿ ಭತ್ತ ಬೆಳೆಯುವ ರೈತರು, ಆಂಧ್ರಪ್ರದೇಶ ಪಶು ಸಂಗೋಪಕರು ತಮ್ಮದೇ ಸಂಘಟನೆಗಳನ್ನು ಕಟ್ಟಿಕೊಂಡು ಎಐಕೆಕೆಎಂಎಸ್ ನಾಯಕತ್ವದಲ್ಲಿ




ಸಮಾವೇಶವನ್ನು ಉದ್ದೇಶಿಸಿ ಮಾತನಾಡುತ್ತಿರುವ ಎಐಕೆಕೆಎಂಎಸ್‌ನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಕಾ. ಶಂಕರ್ ಘೋಷ್

ಹೋರಾಟದಲ್ಲಿದ್ದಾರೆ. ಜೊತೆಗೆ ಕೊಬ್ಬರಿ ಬೆಳೆಗಾರರ ಸಮಸ್ಯೆಯು ಆಮದು, ರಫ್ತು ನೀತಿಗೂ ಸಂಬಂಧಿಸಿದೆ. ಆದ್ದರಿಂದ ಕೊಬ್ಬರಿ ಬೆಳೆಗಾರರು ಪ್ರತ್ಯೇಕವಾಗಿ ಹೋರಾಟ ನಡೆಸಿದರೆ ಸಾಲದು. ಅವರು ಒಟ್ಟಾರೆ ರೈತರ ಹೋರಾಟದ ಜೊತೆಗೆ ತಮ್ಮ ಹೋರಾಟವನ್ನು ನಡೆಸಬೇಕು. ಆದ್ದರಿಂದ ತೆಂಗು ಬೆಳೆಗಾರರ ಹೋರಾಟ ತೆಂಗಿನ ಸೀಮೆಗಷ್ಟೇ ಸೀಮಿತವಾಗಿಲ್ಲ. ಅದೊಂದು ಅಂತರರಾಷ್ಟ್ರೀಯ ಹೋರಾಟ. ಆದ್ದರಿಂದ ನಿಮ್ಮ ರಾಷ್ಟ್ರೀಯ ಸಮಾವೇಶವು ಅತ್ಯಂತ ಮಹತ್ವಪೂರ್ಣವಾದದ್ದು. ಇದು ಮುಂದೆ ಬೃಹದಾಕಾರವಾಗಿ ಬೆಳೆಯಬೇಕು. ಮುಂದಿನ ವರ್ಷದಲ್ಲೇ ಸಹಸ್ರಾರು ಸಂಖ್ಯೆಯಲ್ಲಿ ತೆಂಗು ಬೆಳಗಾರರನ್ನು ಸಂಘಟಿಸಿ ಹೋರಾಟ ಕಟ್ಟಿ. ಮಹಾನ್ ಮಾರ್ಕ್ಸ್‌ವಾದಿ ಚಿಂತಕರೂ ಮತ್ತು ಎಐಕೆಕೆಎಂಎಸ್ ಸಂಸ್ಥಾಪಕರೂ ಆದ ಕಾಮ್ರೇಡ್ ಶಿವದಾಸ್ ಘೋಷ್, ಪದೇ ಪದೇ ಹಳ್ಳಿ, ಹಳ್ಳಿಗಳಲ್ಲಿ ರೈತರನ್ನು ಸಂಘಟಿಸಿ. ಅವರಿಗೆ ರಾಜಕೀಯ ತಿಳುವಳಿಕೆ ನೀಡಿ, ತಳಮಟ್ಟದಿಂದ ಸಂಘಟನೆ ಕಟ್ಟಿ ಎಂದು ಮಾರ್ಗದರ್ಶನ ನೀಡಿದ್ದಾರೆ. ಅವರ ವಿಚಾರಧಾರೆಯ ಆಧಾರದ ಮೇಲೆ ರಾಷ್ಟ್ರ ಮಟ್ಟದವರೆಗೂ ಬಲಿಷ್ಠ ಸಂಘಟನೆ ಕಟ್ಟಬೇಕು ಎಂದು ಕರೆ ನೀಡಿದರು.

ಎಐಕೆಕೆಎಂಎಸ್, ಕೇರಳ ನಾಯಕರಾದ ಕಾಮ್ರೇಡ್ ಅಬ್ದುಲ್ ಅಜೀಜ್, ಕೇರಳದಲ್ಲಿ ಸರ್ಕಾರಿ ಏಜೆನ್ಸಿಗಳ ಮೂಲಕ ರಾಜ್ಯ ಸರ್ಕಾರ ಕೊಬ್ಬರಿ ಖರೀದಿಸಿದರೂ ಸಹ ಸಮಯಕ್ಕೆ ಸರಿಯಾಗಿ ಖರೀದಿಸುವುದಿಲ್ಲ. ಜೊತೆಗೆ ಗುಣಮಟ್ಟದ ಹೆಸರಿನಲ್ಲಿ ಕೊಬ್ಬರಿಯನ್ನು ಖರೀದಿಸುವುದಿಲ್ಲ. ಕೊಬ್ಬರಿ ಬೆಲೆ ಬಿದ್ದಾಗ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಧ್ಯ ಪ್ರವೇಶಿಸಬೇಕು. ರೈತರ ಸಹಕಾರಿ ಸಂಘವಾದ ಕೆರಾಫೆಡ್ ಸಂಸ್ಥೆಯನ್ನು ಸಿಪಿಎಂ ನೇತೃತ್ವದ ಕೇರಳ ಎಲ್‌ಡಿಎಫ್ ಸರ್ಕಾರ ರಿಲಯನ್ಸ್ ಮಡಿಲಿಗೆ ಹಾಕುತ್ತಿದೆ. ಆದ್ದರಿಂದ ಖಾಸಗೀಕರಣದ ವಿರುದ್ಧ ಸಂಘಟಿತ ಹೋರಾಟದ ಅವಶ್ಯಕತೆಯಿದೆ ಎಂದು ಅಭಿಪ್ರಾಯಪಟ್ಟರು.

ರಾಷ್ಟ್ರೀಯ ಸಮಾವೇಶದ ಅಧ್ಯಕ್ಷತೆಯನ್ನು ವಹಿಸಿದ್ದ ತೆಂಗು ಬೆಳೆಗಾರರ ಹೋರಾಟ ಸಮಿತಿಯ ನಾಯಕರಾದ ಕಾಮ್ರೇಡ್ ಎಸ್.ಎನ್.ಸ್ವಾಮಿ, ಜಾಗತೀಕರಣದ ನೀತಿಗಳನ್ನು ಅನುಸರಿಸುತ್ತಾ, ಭಾರತದ ಕೃಷಿ ಮಾರುಕಟ್ಟೆಯನ್ನು ವಿಶ್ವದ ಸಾಮ್ರಾಜ್ಯಶಾಹಿ ರಾಷ್ಟ್ರಗಳಿಗೆ ತೆರೆಯಲಾಗಿದೆ. ನಮ್ಮ ದೇಶದ ಕಾರ್ಪೊರೇಟ್ ಕಂಪೆನಿಗಳಿಗೂ ಆಮದು ಮತ್ತು ರಫ್ತುಗಳಿಂದ ಅತ್ಯಧಿಕ ಲಾಭ ದೊರೆಯುತ್ತದೆ. ಹಾಗಾಗಿ ದೇಶೀಯ ಕೃಷಿ ಕ್ಷೇತ್ರಕ್ಕೆ ಯಾವುದೇ ಭದ್ರತೆಯಿಲ್ಲದೆ ಅದನ್ನು ಅವಲಂಬಿಸಿರುವ ರೈತರು ಕಾರ್ಪೊರೇಟ್ ಕಂಪೆನಿಗಳ ಶೋಷಣೆಗೆ ಒಳಗಾಗಿದ್ದಾರೆ. ಆದ್ದರಿಂದ ಕೇಂದ್ರ ಸರ್ಕಾರ ನಮ್ಮ ದೇಶದಲ್ಲಿ ಬೆಳೆಯುವ ಕೃಷಿ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳಬಾರದು. ತೆಂಗು ಬೆಳೆಗಾರರ ಸಮಸ್ಯೆ ಬಗೆಹರಿಯಬೇಕಾದರೆ ತೆಂಗಿನ ಉತ್ಪನ್ನಗಳನ್ನು ಮತ್ತು ತೆಂಗಿನೆಣ್ಣೆಗೆ ಪರ್ಯಾಯ ಎಣ್ಣೆಗಳನ್ನು ಆಮದು ಮಾಡಿಕೊಳ್ಳಬಾರದು. ಕೊಬ್ಬರಿಗೆ ವೈಜ್ಞಾನಿಕವಾಗಿ ಬೆಲೆ ನಿಗದಿಪಡಿಸಬೇಕು. ಸಂಪೂರ್ಣ ಸರ್ಕಾರಿ ವ್ಯಾಪಾರ ಜಾರಿಯಾಗಬೇಕು. ತೆಂಗಿನ ಉಪಉತ್ಪನ್ನಗಳಿಗೆ ಪ್ರೋತ್ಸಾಹ ನೀಡಬೇಕು ಎಂದು ಆಗ್ರಹಿಸಿದರು.

ತೆಂಗು ಬೆಳೆಗಾರರ ಹೋರಾಟ ಸಮಿತಿಯ ಮತ್ತೊಬ್ಬ ನಾಯಕರಾದ ಕಾಮ್ರೇಡ್ ಲೋಕೇಶ್ ಬಿ. ಪ್ರಾಸ್ತಾವಿಕವಾಗಿ ಮಾತನಾಡಿದರು. ಇನ್ನಿತರ ನಾಯಕರುಗಳಾದ ಭದ್ರನ್, ಮಂಜುನಾಥ್ ರೆಡ್ಡಿ, ಕುಮಾರ್, ಪ್ರಸನ್ನ ಕುಮಾರ್, ಉಮೇಶ್, ಮಲ್ಲಿಕಾರ್ಜುನ, ಶಶಿಕುಮಾರ್ ತೆಂಗನ್ನು ಬಾಧಿಸುವ ರೋಗಗಳು, ನೀರಾವರಿ ಯೋಜನೆಯ ವೈಫಲ್ಯದಿಂದ ನೀರಿನ ಬರ, ಇಳುವರಿ ಇಳಿಕೆ, ಅತಿವೃಷ್ಟಿ ಹಾಗೂ ಅನಾವೃಷ್ಟಿಗಳಿಂದಾಗುವ ನಷ್ಟಗಳ ಕುರಿತು ಮಾತನಾಡಿದರು.

ರಾಷ್ಟ್ರಮಟ್ಟದಲ್ಲಿ ತೆಂಗು ಬೆಳೆಗಾರರ ಹೋರಾಟ ಸಮಿತಿಯನ್ನು ಸಂಘಟಿಸಬೇಕು ಮತ್ತು ಸತತವಾದ ಹೋರಾಟವನ್ನು ಕಟ್ಟಬೇಕೆಂದು ಸಮಾವೇಶದಲ್ಲಿ ತೆಂಗು ಬೆಳೆಗಾರರು ಗೊತ್ತುವಳಿಯನ್ನು ಅಂಗೀಕರಿಸಿದರು. ■



ಸಮಾವೇಶದಲ್ಲಿ ಭಾಗವಹಿಸಿದ ತೆಂಗು ಬೆಳೆಗಾರರು

## ಬೆಂಗಳೂರು: ಅಕ್ಟೋಬರ್ 15: ಪ್ಯಾಲೆಸ್ಟೀನ್–ಲೆಬನಾನ್ ಮೇಲೆ ಇಸ್ರೇಲ್ ದಾಳಿ: ಎಡ ಪಕ್ಷಗಳ ಪ್ರತಿಭಟನೆ




**ಪ್ಯಾಲೆಸ್ಟೀನ್–ಲೆಬನಾನ್ ಮೇಲೆ ಅಮೆರಿಕಾ ಸಾಮ್ರಾಜ್ಯಶಾಹಿಯ ಬೆಂಬಲದಿಂದ ದಾಳಿ ಮಾಡುತ್ತಿರುವ ಯುದ್ಧಪಿಪಾಸು ಇಸ್ರೇಲ್ ನಡೆಯನ್ನು ಖಂಡಿಸಿ, ಯುದ್ಧಗ್ರಸ್ತ ದೇಶಗಳ ಜನತೆಗೆ ಸೌಹಾರ್ದಯುತ ಬೆಂಬಲ ವ್ಯಕ್ತ ಪಡಿಸಿ ಎಡಪಕ್ಷಗಳಾದ ಎಸ್‌ಯುಸಿಐ(ಸಿ), ಸಿಪಿಐ, ಸಿಪಿಐ(ಎಂ), ಸಿಪಿಐ(ಎಂಎಲ್), ಎಐಎಫ್‌ಬಿ ಗಳಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಪ್ರತಿಭಟನಾ ಪ್ರದರ್ಶನವನ್ನು ಸಂಘಟಿಸಲಾಗಿತ್ತು.**

## ಆರ್‌ಜಿ ಕರ್ ವಿಚಾರಣೆ ಕುರಿತು ಹೇಳಿಕೆ

ಎಸ್‌ಯುಸಿಐ (ಸಿ) ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಪ್ರವಾಶ್ ಘೋಷ್ ಅವರು ಈ ಕೆಳಗಿನ ಹೇಳಿಕೆಯನ್ನು ನೀಡಿದ್ದಾರೆಃ "ಸುಪ್ರೀಂ ಕೋರ್ಟಿನಲ್ಲಿ ನಿನ್ನೆ ನಡೆದ ಆರ್. ಜಿ. ಕರ್ ಪ್ರಕರಣದ ಆರನೇ ವಿಚಾರಣೆಯ ಫಲಿತಾಂಶವು ಅತ್ಯಂತ ನಿರಾಶಾದಾಯಕವಾಗಿದೆ ಎಂದು ನಾವು ಅನಿವಾರ್ಯವಾಗಿ ಹೇಳಬೇಕಾಗಿದೆ. ಮಾನ್ಯ ಸುಪ್ರೀಂ ಕೋರ್ಟ್ ಈ ಘಟನೆಯ ಗಂಭೀರತೆಯನ್ನು ಅರಿತು ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿರುವುದು ನಿಜ. ಆದರೆ ಜನರು, ಸುಪ್ರೀಂ ಕೋರ್ಟ್ ವಿಚಾರಣೆಯನ್ನು ತ್ವರಿತವಾಗಿ ಪೂರ್ಣಗೊಳಿಸಿ ಬಲಿಪಶುವಾದ ಪಿಜಿಟಿ ವೈದ್ಯೆಯ ಮೃತ ದೇಹದ ವೈದ್ಯಕೀಯ ಪರಿಶೀಲನೆಯ ಪ್ರಕಾರ ಒಂದಕ್ಕಿಂತ ಹೆಚ್ಚು ಸಂಖ್ಯೆಯಲ್ಲಿರುವ ಅಪರಾಧಿಗಳನ್ನು ಬಂಧಿಸಲು ಕ್ರಮಕೈಗೊಳ್ಳಬೇಕೆಂದು ನಿರೀಕ್ಷಿಸಿದ್ದರು. ಆದರೆ ಸುಮಾರು ಎರಡು ತಿಂಗಳ ಅವಧಿಯೊಳಗೆ ತನಿಖೆಯನ್ನು ಪೂರ್ಣಗೊಳಿಸಲು ವಿಫಲವಾದ ಮತ್ತು ತನ್ನ ಆರಂಭಿಕ ವರದಿಯಲ್ಲಿ ಕೇವಲ ಒಬ್ಬ ನಾಗರಿಕ ಸ್ವಯಂಸೇವಕ (ಸಿವಿಕ್ ವಾಲೆಂಟಿಯರ್) ಮಾತ್ರ ಅಪರಾಧಿ ಎಂಬ ಕೋಲ್ಕತ್ತಾ ಪೊಲೀಸರ ತೀರ್ಮಾನಗಳಿಗೆ ಅಕ್ಷರಶಃ ಮುದ್ರೆ ಒತ್ತಿದ ಸಿಬಿಐಗೆ, 'ಗಣನೀಯ ಪ್ರಗತಿ' ಸಾಧಿಸಿದ್ದಕ್ಕಾಗಿ ಸುಪ್ರೀಂ ಕೋರ್ಟ್ ಮೆಚ್ಚುಗೆ ತೋರಿಸಿದೆ ಮತ್ತು ತನಿಖೆಯನ್ನು ಪೂರ್ಣಗೊಳಿಸಲು ಹೆಚ್ಚಿನ ಸಮಯವನ್ನು ನೀಡಿದೆ, ಇದು ನ್ಯಾಯ ವಿತರಣಾ ವ್ಯವಸ್ಥೆಯಲ್ಲಿ ಮತ್ತಷ್ಟು ವಿಳಂಬವನ್ನು ಅನುಮೋದಿಸುತ್ತದೆ.

ನಾಗರಿಕ ಸ್ವಯಂಸೇವಕರನ್ನು ನೇಮಿಸಿಕೊಳ್ಳುವ ಮಾನದಂಡಗಳನ್ನು ನಿರ್ಧರಿಸಲು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಗಣನೀಯ ಸಮಯವನ್ನು ವ್ಯಯಿಸಿದ್ದು ದುರದೃಷ್ಟಕರ. ದೀಪಾವಳಿ ರಜಾದಿನಗಳ ನಂತರ ಮುಂದಿನ ವಿಚಾರಣೆಯ ದಿನಾಂಕವನ್ನು ನಿಗದಿಪಡಿಸುವುದು ನ್ಯಾಯಾಂಗ ಪ್ರಕ್ರಿಯೆಯನ್ನು ಮತ್ತಷ್ಟು ಮುಂದೂಡುವುದಕ್ಕೆ ಸಮಾನವಾಗಿದೆ. ■

16.10.2024

# ತಿರುಪತಿಯ 'ಲಡ್ಡು' ವಿವಾದ: ರಾಜಕೀಯದ ಮೇಲಾಟ!

ತಿರುಪತಿ ತಿರುಮಲ ದೇವಸ್ಥಾನವು ಭಾರತದ ಅತ್ಯಂತ ಶ್ರೀಮಂತ ಧಾರ್ಮಿಕ ಕ್ಷೇತ್ರ. ಲಕ್ಷಾಂತರ ಭಕ್ತರು ವರ್ಷವಿಡೀ ಈ ದೇಗುಲಕ್ಕೆ ಭೇಟಿ ನೀಡುತ್ತಾರೆ. ಪೂಜೆ ಸಲ್ಲಿಸುವವರಿಗೆ ಪ್ರಸಾದವಾಗಿ ಸಿಹಿ ಪದಾರ್ಥ 'ಲಡ್ಡು' ಅನ್ನು ನೀಡಲಾಗುತ್ತದೆ. ಇದರ ಹೊರತಾಗಿಯೂ ಲಡ್ಡುವನ್ನು ಹೊರಗಡೆ ಅತಿ ಹೆಚ್ಚಿನ ಬೆಲೆಗೆ ಖರೀದಿಸಬಹುದು. ಇಲ್ಲಿ ಪ್ರತಿದಿನ ಸುಮಾರು 12 ರಿಂದ 13 ಲಕ್ಷ ಲಡ್ಡುಗಳು ಮಾರಾಟವಾಗುತ್ತವೆ. ಈ ಲಡ್ಡಿಗೆ ಪೇಟೆಂಟ್ ಹಕ್ಕು ಕೂಡ ದೊರೆತಿದೆ. ಇದನ್ನು ವಿಶೇಷ ರೀತಿಯಲ್ಲಿ ತುಪ್ಪದಿಂದ ತಯಾರಿಸುತ್ತಿದ್ದು ಈ ದೇವಾಲಯವನ್ನು ಆಂಧ್ರಪ್ರದೇಶ ಸರ್ಕಾರ ನಿರ್ವಹಿಸುತ್ತಿದೆ. ಆದರೆ ಈ ಲಡ್ಡು ರಾಜ್ಯ ರಾಜಕೀಯ ವೇದಿಕೆಯನ್ನು ಆಕ್ರಮಿಸಿ ವಾದ ವಿವಾದಗಳ ಜಿದ್ದಾಜಿದ್ದಿಗೆ ಕಾರಣವಾಗುತ್ತದೆಯೆಂಬುದು ಯಾರಿಗೆ ಗೊತ್ತಿತ್ತು!

ಇದೀಗ ಆಂಧ್ರಪ್ರದೇಶದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದಲ್ಲಿರುವ ತೆಲುಗು ದೇಶಂ ಪಕ್ಷ (ಟಿಡಿಪಿ) ಆಡಳಿತದಲ್ಲಿದೆ. ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು, ಈ ಹಿಂದೆ ಅಧಿಕಾರದಲ್ಲಿದ್ದ ರಾಜ್ಯದ ಮತ್ತೊಂದು ಪ್ರಾದೇಶಿಕ ಪಕ್ಷ ವೈಎಸ್‌ಆರ್ ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ತಿರುಪತಿ ಲಡ್ಡಿಗೆ ಬಳಸಿದ ಕಲಬೆರಕೆ ತುಪ್ಪದಲ್ಲಿ ಪ್ರಾಣಿಗಳ ಕೊಬ್ಬಿನ ಅಂಶ (ಗೋಮಾಂಸ ಮತ್ತು ಪ್ರಾಣಿಜನ್ಯ ಕೊಬ್ಬು) ಇತ್ತು ಎಂದು ಆರೋಪಿಸಿದ್ದಾರೆ. ಇದನ್ನು ಗುಜರಾತಿನ ಪ್ರಯೋಗಾಲಯವೊಂದು ಸಾಬೀತು ಪಡಿಸಿದೆ ಎಂದು ಟಿಡಿಪಿ ವಕ್ತಾರರು ಹೇಳಿದ್ದಾರೆ. ಆದರೆ ಈ ಲಡ್ಡುವನ್ನು ಈಗಾಗಲೇ ಪ್ರಧಾನಿ ಮೋದಿ ಸೇರಿದಂತೆ ಹಲವರು ಸೇವಿಸಿದ್ದಾರೆ.

ಇಂತಹ ಪ್ರಾಣಿಗಳ ಕೊಬ್ಬಿನಾಂಶದ ತುಪ್ಪದ ಸೇವನೆಗೆ ಹಿಂದೂ ಧರ್ಮದಲ್ಲಿ ನಿಷೇಧವಿದೆ ಎಂದು ನಂಬಲಾಗಿರುವುದರಿಂದ ಇದು ನಿಸ್ಸಂಶಯವಾಗಿ ಗದ್ದಲವನ್ನು ಸೃಷ್ಟಿಸಿದೆ. ಆದರೆ ಟಿಡಿಪಿ ಮತ್ತು ವೈಎಸ್‌ಆರ್ ಕಾಂಗ್ರೆಸ್ ಪಕ್ಷಗಳ ನಡುವೆ ಇಂತಹ ಆರೋಪ ಮತ್ತು ರಾಜಕೀಯ ಕೆಸರೆರಚಾಟದ ಹೊರತಾಗಿಯೂ, ಲಡ್ಡು ಮಾರಾಟ ಅಥವಾ ಸೇವನೆಯ ಮೇಲೆ ಯಾವ ಪರಿಣಾಮಗಳೂ ಉಂಟಾಗಿಲ್ಲ. ಬದಲಿಗೆ ತಿರುಪತಿ ದೇವಸ್ಥಾನದ ಅಧಿಕಾರಿಗಳು ಪ್ರಸಾದ ಲಡ್ಡುಗಳನ್ನು ಶುದ್ಧೀಕರಣ ಪ್ರಕ್ರಿಯೆಗೆ ಒಳಪಡಿಸಿ ಬಳಸಲಾಗುತ್ತಿದೆ ಎಂದು ಭರವಸೆ ನೀಡಿದ್ದಾರೆ. ಆ ಮೂಲಕ ಕೊಬ್ಬಿನಾಂಶ ಇರುವ ಆರೋಪವನ್ನು ಒಪ್ಪಿಕೊಂಡಂತಾಗಿದೆ.

ಈ ಮೊದಲು ಲಡ್ಡುವನ್ನು ಕರ್ನಾಟಕದ ನಂದಿನಿ ತುಪ್ಪದಿಂದ ತಯಾರಿಸಲಾಗುತ್ತಿತ್ತು ಎಂದು ಹೇಳಲಾಗಿದೆ. ಆದರೆ, ನಂತರ ಟೆಂಡರ್ ಕರೆದಾಗ, ನಂದಿನಿಗಿಂತ ಇತರ ಕಂಪನಿಗಳ ತುಪ್ಪ ಕಡಿಮೆ ಬೆಲೆಯದ್ದಾಗಿರುವುದರಿಂದ ಅಲ್ಲಿಂದ ತುಪ್ಪವನ್ನು ಖರೀದಿಸಲಾಯಿತಂತೆ. ಈಗ, ವಿವಾದದ ಬಳಿಕ ಮತ್ತೆ ನಂದಿನಿಗೇ ಮೊರೆ ಹೋಗಲಾಗಿದೆ ಎಂದು ವರದಿ ಇದೆ. ಗುಣಮಟ್ಟವಿಲ್ಲದ ತುಪ್ಪ ಸರಬರಾಜು ಮಾಡಿದ ಆರೋಪದ ಮೇಲೆ ಆಂಧ್ರ ಸರ್ಕಾರವು, ತಮಿಳುನಾಡು ಮೂಲದ ಎ.ಆರ್. ಡೈರಿ ಫುಡ್ ಪ್ರೈವೇಟ್ ಲಿಮಿಟೆಡ್‌ಗೆ ಶೋಕಾಸ್ ನೋಟಿಸ್ ಜಾರಿ ಮಾಡಿದೆ. ಆದರೆ ಇಷ್ಟು ದೀರ್ಘ ಅವಧಿಯವರೆಗೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ಬಾರದೆ ಹೇಗೆ ಇಂತಹ ಕಲಬೆರಕೆ ಮಾಡಲಾಗುತ್ತಿತ್ತು ಎಂಬುದು ಯಕ್ಷಪ್ರಶ್ನೆಯಾಗಿದೆ. ಇದರ ಹಿಂದೆ ಪಟ್ಟಭದ್ರ ಹಿತಾಸಕ್ತಿಗಳ ಕೈವಾಡವಿತ್ತೇ? ಹಾಗಿದ್ದಲ್ಲಿ, ಧರ್ಮದ ವ್ಯಾಪಾರೀಕರಣಕ್ಕೆ ಯಾವುದೇ ನಿಷೇಧವಿಲ್ಲ ಎಂದು ನಂಬಬೇಕು. ಈಗಾಗಲೇ ಕೆಲವು ಹಿಂದುತ್ವದ ನಾಯಕರು ಇದರ ಹಿಂದೆ ಷಡ್ಯಂತ್ರವನ್ನು ಗ್ರಹಿಸಿದ್ದಾರೆ. ಈ ಪ್ರಕರಣಕ್ಕೆ 'ಲಡ್ಡು ಜಿಹಾದ್' ಎಂದು ಹೆಸರಿಟ್ಟಿದ್ದಾರೆ, ತನ್ಮೂಲಕ ಕೆಲವೊಂದು ಮುಸ್ಲಿಂ ಭಯೋತ್ಪಾದಕ ಸಂಘಟನೆಗಳು ಇದರಲ್ಲಿ ತೊಡಗಿಕೊಂಡಿವೆ ಎಂದು ಸೂಚಿಸುತ್ತಿದ್ದಾರೆ. ಆದರೆ 'ಹೇಗೆ ಮತ್ತು ಯಾವ ರೀತಿಯಲ್ಲಿ' ಎಂಬುದಕ್ಕೆ ಯಾವುದೇ ಉತ್ತರವಿಲ್ಲ!

ವಾಸ್ತವವೆಂದರೆ, ಧಾರ್ಮಿಕ ದೇಗುಲಗಳು ಕೂಡ ಭ್ರಷ್ಟಾಚಾರ ಅಥವಾ ವಾಣಿಜ್ಯ ಉದ್ದೇಶದಿಂದ ಮುಕ್ತವಾಗಿಲ್ಲ ಎಂಬುದು. ತಿರುಪತಿಗೆ ಭೇಟಿ ನೀಡುವ ಭಕ್ತರು ಧಾರ್ಮಿಕ ವಿಧಿಯಂತೆ, ದೇವರಿಗೆ ಮುಡಿಪಾಗಿ ಬೋಳಿಸಿಕೊಳ್ಳುವ ತಲೆಗೂದಲನ್ನು ದೇವಾಲಯದ ಅಧಿಕಾರಿಗಳು ಸಂಗ್ರಹಿಸಿ ಸಂಸ್ಕರಣೆ ಮಾಡಿ ನಂತರ ವಿಗ್‌ಗಳನ್ನು ತಯಾರಿಸಲು ಮಾರಾಟ ಮಾಡುತ್ತಾರೆ! ಅಂತೆಯೇ, ಭಕ್ತರಿಗೆ ಒದಗಿಸುವ ದೇವರ ದರ್ಶನ ಹಾಗೂ ಪೂಜೆಗಳಲ್ಲೂ ತಾರತಮ್ಯವಿದೆ. ಕಡಿಮೆ ದುಡ್ಡು ಪಾವತಿಸುವವರು ದೇವರ 'ದರ್ಶನ' ಪಡೆಯಲು ಪಂಜರದಂತಹ ಪ್ರವೇಶದ್ವಾರದಲ್ಲಿ ಹೆಚ್ಚು ಸಮಯ ಕಾಯಬೇಕಾಗುತ್ತದೆ. ಆದರೆ ವಿಐಪಿಗಳಿಗೆ ಮತ್ತು ಹೆಚ್ಚು ದುಡ್ಡು ಪಾವತಿಸುವವರಿಗೆ ನೇರ ದರ್ಶನದ ಪ್ರತ್ಯೇಕ ವ್ಯವಸ್ಥೆ ಇದೆ. ಈ ತಾರತಮ್ಯವು ಇತರ ಅನೇಕ ಧಾರ್ಮಿಕ ದೇವಾಲಯಗಳಲ್ಲಿಯೂ ಆಚರಣೆಯಲ್ಲಿದೆ.

ಹೀಗೆ ಧರ್ಮವನ್ನು ವಾಣಿಜ್ಯಕ್ಕಾಗಿ ಬಳಸುವ ಪ್ರವೃತ್ತಿ ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿದ್ದು, 'ಲಡ್ಡು ವಿವಾದ' ಇದರ ಇನ್ನೊಂದು ಸ್ವರೂಪವಾಗಿ ರಾಜಕೀಯಕ್ಕಾಗಿ ಬಳಕೆಯಾಗುತ್ತಿದೆ. ■

## ಬೆಳಗಾವಿ ಜಿಲ್ಲಾಸ್ಪತ್ರೆಯಲ್ಲಿ ಹೆಚ್ಚುತ್ತಿರುವ ಶಿಶುಮರಣವನ್ನು ತಡೆಗಟ್ಟಿ! ಎಐಎಂಎಸ್‌ಎಸ್–ಎಐಡಿವೈಓ ಆಗ್ರಹ



ಬೆಳಗಾವಿ ಜಿಲ್ಲಾಸ್ಪತ್ರೆಯಲ್ಲಿ ಸಮರ್ಪಕ ವ್ಯವಸ್ಥೆಯಿಲ್ಲದೆ ಕಳೆದ ಆರು ತಿಂಗಳುಗಳಲ್ಲಿ 111 ನವಜಾತ ಶಿಶುಗಳು ಮರಣ ಹೊಂದಿವೆ. ಮಾಧ್ಯಮಗಳಲ್ಲಿ ವರದಿಯಾಗಿರುವಂತೆ, ಜಿಲ್ಲಾಸ್ಪತ್ರೆಯ ಶಿಶುಗಳ ಆರೈಕೆ ವಿಭಾಗಕ್ಕೆ ಆಮ್ಲಜನಕ ಸರಿಯಾಗಿ ಪೂರೈಕೆಯಾಗದಿರುವುದೇ ಮಕ್ಕಳ ಸಾವುಗಳಿಗೆ ಕಾರಣವಾಗಿದೆ. ಹೆರಿಗೆ ವಾರ್ಡುಗಳಿಗೆ ಆಮ್ಲಜನಕ ಪೂರೈಸುವ ಮೂರು ಮೆಡಿಕಲ್ ಏರ್ ಕಂಪ್ರೆಸರ್‌ಗಳಲ್ಲಿ ಒಂದು ಕೆಟ್ಟಿದೆ ಎಂದು ತಿಳಿದು ಬಂದಿದೆ. ಆದರೆ ಇದನ್ನು ಅಲ್ಲಗಳೆಯುವ ಬಿಮ್ಸ್ ನಿರ್ದೇಶಕರು ಅವಧಿಗೆ ಮುಂಚೆ ಜನಿಸಿದ ಶಿಶುಗಳು, ಸರಿಯಾಗಿ ಬೆಳವಣಿಗೆ ಹೊಂದದ ಶಿಶುಗಳು ಸಾವನ್ನಪ್ಪಿವೆ ಎಂದು ಹೇಳಿಕೆ ನೀಡಿದ್ದಾರೆ. ಅಂತಹ ಶಿಶುಗಳಿಗೇ ಆಮ್ಲಜನಕ ಹಾಗೂ ತುರ್ತು ಚಿಕಿತ್ಸೆಯ ಅವಶ್ಯಕತೆ ಇರುವುದು ಅಲ್ಲವೇ? ಸರ್ಕಾರ ಈ ಬಗ್ಗೆ ಸೂಕ್ತ ತನಿಖೆ ಮಾಡಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು, ಬಾಣಂತಿ ಹಾಗೂ ಶಿಶುಮರಣವನ್ನು ತಡೆಯಲು ಅಗತ್ಯ ಕ್ರಮ ವಹಿಸಬೇಕು,ಆಸ್ಪತ್ರೆಗಳಿಗೆ ಅವಶ್ಯಕವಾದ ವೈದ್ಯರು, ಸಿಬ್ಬಂದಿ ಹಾಗೂ ಆಮ್ಲಜನಕ, ವೆಂಟಿಲೇಟರ್, ಡಯಾಲಿಸಿಸ್ ಯಂತ್ರ, ಐಸಿಯು ಸೇರಿದಂತೆ ಅವಶ್ಯಕ ಮೂಲ ಸೌಕರ್ಯಗಳನ್ನು ವಿಳಂಬವಿಲ್ಲದೇ ಒದಗಿಸಬೇಕು, ಸಾರ್ವಜನಿಕರಿಗೆ ರೋಗ ತಪಾಸಣೆ, ಚಿಕಿತ್ಸೆ ಹಾಗೂ ಔಷಧಿಗಳು ಸಕಾಲಕ್ಕೆ ಉಚಿತವಾಗಿ ದೊರೆಯುವಂತೆ ಕ್ರಮ ವಹಿಸಬೇಕು,ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಕಾರ್ಯಾರಂಭ ಮಾಡಬೇಕು ಮುಂತಾದ ಜನಪರ ಬೇಡಿಕೆಗಳನ್ನು ಮುಂದಿಟ್ಟುಕೊಂಡು, ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಶೇಷನ್ (ಎಐಡಿವೈಓ) ಹಾಗೂ ಆಲ್ ಇಂಡಿಯಾ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ಗಳು ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದವು. ■

## ಕಾಮ್ರೇಡ್ ಸೀತಾರಾಮ್ ಯೆಚೂರಿಯವರ ಮರಣಕ್ಕೆ ಕಾಮ್ರೇಡ್ ಪ್ರವಾಶ್ ಘೋಷ್ ಸಂತಾಪ

**ಪ್ರಿಯ ಕಾಮ್ರೇಡರೇ,**

ನಾನು ನನ್ನ ಪಕ್ಷ ಸೋಷಲಿಸ್ಟ್ ಯೂನಿಟಿ ಆಫ್ ಇಂಡಿಯಾ(ಕಮ್ಯುನಿಸ್ಟ್) ಪರವಾಗಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ(ಎಂ)ದ ಪ್ರಧಾನ ಕಾಯದರ್ಶಿಗಳಾದ ಕಾಮ್ರೇಡ್ ಸೀತಾರಾಮ್ ಯೆಚೂರಿಯವರ ಅಕಾಲಿಕ ಮರಣಕ್ಕೆ ತೀವ್ರ ಶೋಕವನ್ನು ವ್ಯಕ್ತ ಪಡಿಸುತ್ತೇನೆ. ಅವರ ಮರಣ, ಸಿಪಿಐ(ಎಂ) ಜೊತೆಗೆ, ಎಡಪಂಥೀಯ–ಪ್ರಜಾತಾಂತ್ರಿಕ ಚಳುವಳಿಗೆ ಸಹ ಅತಿ ದೊಡ್ಡ ನಷ್ಟವನ್ನುಂಟು ಮಾಡಿದೆ.

ಅವರ ಶೋಕಗ್ರಸ್ತ ಕುಟುಂಬದವರಿಗೂ, ಸಿಪಿಐ(ಎಂ)ನ ನಾಯಕರು ಮತ್ತು ಕಾರ್ಯಕರ್ತರಿಗೂ ನನ್ನ ಹೃದಯಪೂರ್ವಕ ಸಂತಾಪಗಳು.

ಕಾರ್ಮಿಕ ದೃಷ್ಟಿಕೋನ ಚಂದಾದಾರರಾಗಿ ವಾರ್ಷಿಕ ರೂ 90/–

# ಭಾರತ ವಿರೋಧಿ ಘೋಷಣೆಗಳ ಕುರಿತು ಬಾಂಗ್ಲಾದೇಶದ ಬಾಸದ್ (ಮಾರ್ಕ್ಸ್‌ವಾದಿ)ನ ಸಂಗಾತಿಗಳಿಂದ ಸ್ಪಷ್ಟನೆ

ಬಾಂಗ್ಲಾದೇಶದಲ್ಲಿ ಇತ್ತೀಚೆಗೆ ನಡೆದ ಜನಾಂದೋಲನದ ಸಂದರ್ಭದಲ್ಲಿ ಕೆಲವು ಭಾರತ ವಿರೋಧಿ ಘೋಷಣೆಗಳನ್ನು ಎತ್ತಲಾಯಿತು. ಬಾಂಗ್ಲಾದೇಶದ ಜನಾಂದೋಲನವನ್ನು ಹೃದಯಾಂತರಾಳದಿಂದ ಬೆಂಬಲಿಸಿದ ಭಾರತದ ಶ್ರಮಜೀವಿಗಳು ಇದರ ಕುರಿತು ಸ್ವಲ್ಪ ನಿರಾಶೆಗೊಂಡಿದ್ದಾರೆ ಮತ್ತು ಈ ಬಗ್ಗೆ ಚಿಂತಿತರೂ ಆಗಿದ್ದಾರೆ. ಮೊದಲನೆಯದಾಗಿ, ಭಾರತದ ಆಳುವ ವರ್ಗದ ಹಿತಾಸಕ್ತಿ ಮತ್ತು ತುಳಿತಕ್ಕೊಳಗಾದ ಭಾರತೀಯರ ಹಿತಾಸಕ್ತಿ ಒಂದೇ ಅಲ್ಲ ಎಂಬುದನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕ. ಬದಲಿಗೆ, ಅವು ಸಂಪೂರ್ಣವಾಗಿ ತದ್ವಿರುದ್ಧವಾಗಿವೆ. ಜನಾಂದೋಲನದ ಸಮಯದಲ್ಲಿ ಎತ್ತಿದ ಘೋಷಣೆಗಳು ಸಾಮ್ರಾಜ್ಯಶಾಹಿ ಭಾರತದ ವಿರುದ್ಧವಾಗಿದ್ದವೇ ಹೊರತು ಭಾರತದ ಶ್ರಮಜೀವಿಗಳ ವಿರುದ್ಧ ಅಲ್ಲ. ಭಾರತದ ಶ್ರಮಜೀವಿಗಳು ನಮ್ಮ ಸ್ನೇಹಿತರು ಎಂದು ನಾವು ನಂಬುತ್ತೇವೆ. ಅವರು ನಮ್ಮ ಈ ಹೋರಾಟದ ಪಾಲುದಾರರು–ಸಹೋದರರು. ವಾಸ್ತವದಲ್ಲಿ, ಭಾರತದ ಪ್ರಗತಿಪರ ಜನರು ಪ್ರಜಾಪ್ರಭುತ್ವದ ಪರವಾಗಿ ಸಕ್ರಿಯವಾಗಿ ಮತ್ತು ಧೈರ್ಯದಿಂದ ಈ ಜನಾಂದೋಲನದ ಪರವಾಗಿ ನಿಂತಿದ್ದಾರೆ. ಅವರ ಬೆಂಬಲಕ್ಕಾಗಿ ನಾವು ಅವರಿಗೆ ಧನ್ಯವಾದ ಹೇಳಲು ಬಯಸುತ್ತೇವೆ ಮತ್ತು ಅವರ ಈ ಐತಿಹಾಸಿಕ ಪಾತ್ರವನ್ನು ನೆನಪಿಸಿಕೊಳ್ಳುತ್ತೇವೆ.

> **ಭಾರತದ ಆಳುವ ವರ್ಗದ ಹಿತಾಸಕ್ತಿ ಮತ್ತು ತುಳಿತಕ್ಕೊಳಗಾದ ಭಾರತೀಯರ ಹಿತಾಸಕ್ತಿ ಒಂದೇ ಅಲ್ಲ**

ಭಾರತೀಯ ಸಾಮ್ರಾಜ್ಯಶಾಹಿ ರಾಜ್ಯವು ತನ್ನ ಸಾಮ್ರಾಜ್ಯಶಾಹಿ ಹಿತಾಸಕ್ತಿಗಳನ್ನು ಅನುಸರಿಸಲು ಭಾರತ ಉಪಖಂಡದಲ್ಲಿ ತನ್ನ ನೆರೆಹೊರೆಯವರೊಂದಿಗೆ 'ಅಧೀನ ಮೈತ್ರಿ ನೀತಿ'ಯನ್ನು ಸ್ಥಾಪಿಸಲು ಪ್ರಯತ್ನಿಸುವ ದಾರಿಯಲ್ಲಿದೆ. ಅದಕ್ಕೆ ನಮ್ಮ ಆಕ್ಷೇಪಣೆ ಇದೆ. ಬಾಂಗ್ಲಾದೇಶದ ಸಂಪತ್ತನ್ನು ಭಾರತೀಯ ಏಕಸ್ವಾಮ್ಯಾಧಿಪತಿಗಳು ಲೂಟಿ ಮಾಡುವುದು, ಬಾಂಗ್ಲಾದೇಶದ ಆಂತರಿಕ ರಾಜಕೀಯ ವ್ಯವಹಾರಗಳಲ್ಲಿ ಭಾರತ ಹಸ್ತಕ್ಷೇಪ ಮಾಡುವುದು ಇತ್ಯಾದಿಗಳನ್ನು ನಮ್ಮ ದೇಶದ ದೇಶಭಕ್ತರು ಮತ್ತು ಕಾರ್ಮಿಕ ವರ್ಗದ ಜನರು ಎಂದಿಗೂ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಉದಾಹರಣೆಗೆ, ಭಾರತದ ದೇಶಪ್ರೇಮಿ ಜನರು ಇತರ ದೇಶಗಳಲ್ಲಿ ಸಾಮ್ರಾಜ್ಯಶಾಹಿ ಹಸ್ತಕ್ಷೇಪವನ್ನು ಎಂದಿಗೂ ಒಪ್ಪಿಕೊಂಡಿಲ್ಲ. (ಅದೇ ರೀತಿ ಬಾಂಗ್ಲಾದೇಶದ ದೇಶಪ್ರೇಮಿಗಳು ಕೂಡ ಭಾರತದ ಸಾಮ್ರಾಜ್ಯಶಾಹಿಗಳನ್ನು ವಿರೋಧಿಸುತ್ತಿದ್ದಾರೆ.)

ಈ ಕ್ಷಿಪ್ರಕ್ರಾಂತಿಯ ನಂತರ 'ಎಲ್ಲವೂ ಕಳೆದು ಹೋಗುತ್ತಿದೆ' ಎಂಬ ಒಂದು ಕೂಗು ಕೇಳಿ ಬರುತ್ತಿದೆ. ಸ್ವಾರ್ಥಿಗಳ ಒಂದು ಗುಂಪು ಉದ್ದೇಶಪೂರ್ವಕವಾಗಿ ಈ ಘೋಷಣೆಯನ್ನು ಎತ್ತುತ್ತಿದೆ. ಆದರೆ ಪ್ರಾಮಾಣಿಕವಾಗಿರುವ ಇನ್ನೊಂದು ವರ್ಗ ಈ ಅಪಪ್ರಚಾರಕ್ಕೆ ಬಲಿಯಾಗಿ ದಾರಿ ತಪ್ಪುತ್ತಿದೆ. ಅಲ್ಪಸಂಖ್ಯಾತರ ಮೇಲೆ ದಾಳಿ, ಶಿಲ್ಪಗಳ ಧ್ವಂಸ, ಗ್ರಂಥಾಲಯಗಳ ಲೂಟಿ, ಧಾರ್ಮಿಕ ಸ್ಥಳಗಳ ಮೇಲೆ ದಾಳಿ, ಇತ್ಯಾದಿಯೆಲ್ಲವೂ ಈ ಸಾಮೂಹಿಕ ಆಂದೋಲನದ ಬೆಂಬಲಿಗರಲ್ಲಿ ಗಾಢ ದುಃಖವನ್ನುಂಟು ಮಾಡಿದೆ.

ಸಾಮೂಹಿಕ ದಂಗೆ ನಡೆದಾಗ ದೇಶದಾದ್ಯಂತ ಪೊಲೀಸ್ ಆಡಳಿತ ತಕ್ಷಣ ಸುತರಾಂ ಕೆಲಸ ಮಾಡಲಿಲ್ಲ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಶೇಖ್ ಹಸೀನಾ ದೇಶ ಬಿಟ್ಟು ಓಡಿ ಹೋಗಿದ್ದರೂ, ಅವಾಮಿ ಲೀಗ್ ಸಂಸ್ಥೆ, ಕಟ್ಟಕಡೆಯವರೆಗೂ ಕೆಳ ಮಟ್ಟದ ಸಂಘಟನೆಗಳಿಂದ ಹಿಡಿದು ರಾಜ್ಯ ಮಟ್ಟದವರೆಗೆ ತನ್ನ ಸಂಘಟನೆಯ ಮೂಲಕ ಈ ಜನರ ದಂಗೆಗೆ ಮಸಿ ಬಳಿಯಲು ಪ್ರಯತ್ನ ಮಾಡಿತು. ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ಮೇಲಿನ ದಾಳಿಗಳು ಹೊಸದೇನಲ್ಲ, ಏಕೆಂದರೆ ಭಾರತ ಹಾಗೂ ಇಡೀ ದಕ್ಷಿಣ ಏಷ್ಯಾದಲ್ಲೇ ಕೋಮುವಾದ ಮತ್ತು ಕೋಮುವಾದಿ ರಾಜಕೀಯವು ಒಂದು ದೊಡ್ಡ ಶಾಪವಾಗಿದೆ. ನಮ್ಮ ದೇಶದಲ್ಲಿ ಅಲ್ಲಲ್ಲಿ ಧಿಢೀರ್ ಕೋಮು ಘರ್ಷಣೆಗಳು ನಡೆಯುತ್ತಿರುವುದೂ ನಿಜ. ಆದರೆ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳು ಮತ್ತು ಮದರಸಾಗಳ ವಿದ್ಯಾರ್ಥಿಗಳೂ ಸಹ ಅಲ್ಪಸಂಖ್ಯಾತರ ಪ್ರದೇಶಗಳನ್ನು, ಧಾರ್ಮಿಕ ಸ್ಥಳಗಳನ್ನು ರಕ್ಷಿಸಲು ಒಗ್ಗಟ್ಟಾಗಿ ನಿಂತಿರುವುದು ಈ ಸಾಮೂಹಿಕ ದಂಗೆಯ ಸಾಧನೆಯಾಗಿದೆ. ಇದು ಬಾಂಗ್ಲಾದೇಶದಲ್ಲಿ ಒಂದು ಹೊಸ ಬೆಳವಣಿಗೆ.

ಜನರ ದಂಗೆಗೆ ಮಸಿ ಬಳಿಯಲು ಪಟ್ಟಭದ್ರ ಹಿತಾಸಕ್ತಿಗಳು ಶಿಲ್ಪಗಳನ್ನು ಧ್ವಂಸ ಮಾಡಿದ್ದಾರೆ, ಆದರೆ ಅದೇ ಸಮಯಕ್ಕೆ ಹೋರಾಟಗಾರರು ಮತ್ತು ಕಲಾವಿದರು ಶಿಲ್ಪಗಳ ದುರಸ್ತಿಗೆ ಸಕ್ರಿಯವಾಗಿ ಮುಂದಾಗಿದ್ದಾರೆ. ಇಂತಹ ಅನೇಕ ಘಟನೆಗಳನ್ನು ನಾವು ನೋಡಿದ್ದೇವೆ. ■

> **ಭಾರತ ವಿರೋಧಿ ಘೋಷಣೆ ಕೂಗುತ್ತಿರುವ ಬಾಂಗ್ಲಾದೇಶ ಜನತೆಗೆ ಭಾರತದ ಸಾಮಾನ್ಯ ಜನರ ಬಗ್ಗೆ ದ್ವೇಷವಿಲ್ಲ. ಭಾರತದ ಆಳುವ ವರ್ಗದ ಸಾಮ್ರಾಜ್ಯ ಶಾಹಿ ಧೋರಣೆಯನ್ನು ಅವರು ಪ್ರತಿರೋಧಿಸುತ್ತಿದ್ದಾರೆ)**

# ನವೆಂಬರ್ ಮಹಾಕ್ರಾಂತಿಯ ಬೋಧನೆಗಳು

**(ರಷ್ಯಾದ ಮಹಾನ್ ನವೆಂಬರ್ ಸಮಾಜವಾದಿ ಕ್ರಾಂತಿಗೆ ಈಗ 107 ವರ್ಷ. ಈ ಸಂದರ್ಭದಲ್ಲಿ ನಮ್ಮ ಪಕ್ಷದ ಇಂಗ್ಲಿಷ್ ಪತ್ರಿಕೆ ಪ್ರೊಲೆಟೇರಿಯನ್ ಎರಾದಲ್ಲಿ 1971ರ ನವೆಂಬರ್ 1ರ ಸಂಚಿಕೆಯಲ್ಲಿ ಪ್ರಕಟವಾದ ಲೇಖನದ ಭಾವಾನುವಾದವನ್ನು ನಮ್ಮ ಓದುಗರಿಗಾಗಿ ಮರುಮುದ್ರಣ ಮಾಡಿದ್ದೇವೆ.)**

ಜಗತ್ತಿನ ವಿವಿಧ ದೇಶಗಳ ದುಡಿಯುವ ಜನತೆ ನವೆಂಬರ್ 7 ರಂದು ಮಹಾನ್ ನವೆಂಬರ್ ಕ್ರಾಂತಿಯ 54ನೇ ವಾರ್ಷಿಕೋತ್ಸವವನ್ನು ಆಚರಿಸಲಿದ್ದಾರೆ. ಹಾಗೆಯೇ ನಮ್ಮ ಜನರೂ ಸಹ ನಮ್ಮ ದೇಶದ ಶೋಷಕ ಬಂಡವಾಳಶಾಹಿ ವ್ಯವಸ್ಥೆಯ ಬದಲಾಗಿ ಮಾನವನಿಂದ ಮಾನವನ ಆರ್ಥಿಕ, ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಶೋಷಣೆಯಿಂದ ಮುಕ್ತವಾದ, ಅನಿರ್ಬಂಧಿತ ಸಾಮಾಜಿಕ ಪ್ರಗತಿ ಮತ್ತು ಜನರ ಸರ್ವತೋಮುಖ ಅಭಿವೃದ್ಧಿಗೆ ಮುಕ್ತಾವಕಾಶವಿರುವ ಸಮಾಜವಾದಿ ವ್ಯವಸ್ಥೆಯನ್ನು ಸ್ಥಾಪಿಸಲು ಮರು ಪ್ರತಿಜ್ಞೆ ತೆಗೆದುಕೊಳ್ಳಲು ಮತ್ತು ತಮ್ಮ ಬದ್ಧತೆಯನ್ನು ಮತ್ತಷ್ಟು ಗಟ್ಟಿಗೊಳಿಸಲು ಈ ವಾರ್ಷಿಕೋತ್ಸವವನ್ನು ಆಚರಿಸಲಿದ್ದಾರೆ. ಈ ಗುರಿಯನ್ನು ಸಾಧಿಸುವ ನಮ್ಮ ಜನರ ಸಂಘರ್ಷದಲ್ಲಿ ನವೆಂಬರ್ ಮಹಾಕ್ರಾಂತಿಯು ಇಂದಿಗೂ ದಾರಿದೀಪವಾಗಿದೆ.

ನವೆಂಬರ್ ಮಹಾಕ್ರಾಂತಿಯು ಮಾನವ ಸಮಾಜದ ಇತಿಹಾಸದಲ್ಲಿ ಮೊದಲ ಕ್ರಾಂತಿಯೇನಲ್ಲ. ಕ್ರಾಂತಿಗಳು ಸಮಾಜದ ಚಲನಶಕ್ತಿಗಳು ಎಂದು ಮಾರ್ಕ್ಸ್ ಹೇಳಿದ್ದಾರೆ. ಪ್ರಾಚೀನ ಕಮ್ಯುನಿಸ್ಟ್ ಸಮಾಜದಿಂದ ಇಲ್ಲಿಯವರೆಗೆ ಒಂದರ ನಂತರ ಒಂದರಂತೆ ಕ್ರಾಂತಿಗಳು ನಡೆದಿವೆ. ಅವುಗಳ ಮೂಲಕ ಮಾನವ ಸಮಾಜದಲ್ಲಿ ಹಲವು ಬಗೆಯ ಸಾಮಾಜಿಕ ವ್ಯವಸ್ಥೆಗಳು ಸ್ಥಾಪನೆಯಾಗಿವೆ. ಆದರೆ ಅವುಗಳಲ್ಲಿ ನವೆಂಬರ್ ಮಹಾಕ್ರಾಂತಿಗೆ ವಿಶೇಷವಾದ ಸ್ಥಾನವಿದೆ. ಪ್ಯಾರಿಸ್ ಕಮ್ಯೂನ್ ಅನ್ನು ಹೊರತುಪಡಿಸಿದರೆ, ಇದಕ್ಕೆ ಮುಂಚಿನ ಎಲ್ಲಾ ಕ್ರಾಂತಿಗಳೂ ಒಂದು ಶೋಷಕ ವರ್ಗದ ಬದಲಾಗಿ ಇನ್ನೊಂದು ಶೋಷಕ ವರ್ಗದ ಹುಟ್ಟಿಗೆ ಕಾರಣವಾಗಿ, ಒಂದಲ್ಲಾ ಒಂದು ರೀತಿ ಶೋಷಣೆಯನ್ನು ಅಸ್ತಿತ್ವದಲ್ಲಿ ಇರಿಸಲು ಕಾರಣವಾಗಿವೆ. ಪ್ಯಾರಿಸ್ ಕಮ್ಯೂನ್ ಕ್ರಾಂತಿಯಾದ ಮೇಲೆ ಕಾರ್ಮಿಕವರ್ಗವು ಬಂಡವಾಳಶಾಹಿಗಳನ್ನು ಅಧಿಕಾರದಿಂದ ಕಿತ್ತೊಗೆಯಲು ವಿಫಲವಾಯಿತು.

ನವೆಂಬರ್ ಮಹಾಕ್ರಾಂತಿಯು ಮಾನವಕುಲದ ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ ಯಶಸ್ವಿಯಾಗಿ ಬಂಡವಾಳಶಾಹಿಗಳನ್ನು ಅಧಿಕಾರದಿಂದ ಕಿತ್ತೊಗೆಯಿತು, ಹಳೆಯ ಬಂಡವಾಳಶಾಹಿ ಪ್ರಭುತ್ವವನ್ನು ನಾಶ ಮಾಡಿತು, ಹೊಸ ಪ್ರಭುತ್ವವನ್ನು, ಹೊಸ ರೀತಿಯ ಪ್ರಭುತ್ವವನ್ನು – ಕಾರ್ಮಿಕ ಪ್ರಭುತ್ವವನ್ನು ಸ್ಥಾಪಿಸಿತು ಹಾಗೂ ಶೋಷಣೆಯಿಂದ ಜನರ ಸಂಪೂರ್ಣ ವಿಮುಕ್ತಿಗೆ ಮತ್ತು ವರ್ಗರಹಿತ ಕಮ್ಯುನಿಸ್ಟ್ ಸಮಾಜದ ಅಸ್ತಿತ್ವಕ್ಕೆ ಭದ್ರ ಬುನಾದಿ ಹಾಕಿತು.

ನವೆಂಬರ್ ಮಹಾಕ್ರಾಂತಿಯು ರಷ್ಯಾದಲ್ಲಿ ನಡೆಯಿತು ಮತ್ತು ಬಂಡವಾಳಶಾಹಿ ಮತ್ತು ಪೆಟಿ-ಬೂರ್ಜ್ವಾ ಬುದ್ಧಿಜೀವಿಗಳು ಸದಾಕಾಲ 'ಇದು ರಷ್ಯಾದ ಪ್ರಕರಣವಷ್ಟೇ' ಎಂದು ಹೇಳಲು ಸದಾ ಪ್ರಯತ್ನಿಸುತ್ತಾ, ಅದರ ಅಂತರರಾಷ್ಟ್ರೀಯ ಮಹತ್ವವನ್ನು ಹಿಂಬದಿಗೆ ಸರಿಸಿದ್ದೂ ನಿಜ. ನವೆಂಬರ್ ಮಹಾಕ್ರಾಂತಿಯು ರಷ್ಯಾದಂತಹ ಒಂದೇ ದೇಶಕ್ಕೆ ಸೀಮಿತವಾದ ಕ್ರಾಂತಿಯಲ್ಲ, ಬದಲಾಗಿ ಅದು ಅಂತರರಾಷ್ಟ್ರೀಯ ಮಟ್ಟದ ಕ್ರಾಂತಿಯ ಭಾಗವೂ ಹೌದು. ಮೊದಲ ಬಾರಿಗೆ ಸಾಮ್ರಾಜ್ಯಶಾಹಿ ಸರಪಣಿಯ ಅತ್ಯಂತ ದುರ್ಬಲ ಕೊಂಡಿಯನ್ನು ಯಶಸ್ವಿಯಾಗಿ ಮುರಿಯುವ ಮೂಲಕ ಹಾಗೂ ಮೊದಲ ಸಮಾಜವಾದಿ ಕ್ರಾಂತಿಯನ್ನು ಜಯಶಾಲಿ ಮಾಡುವ ಮೂಲಕ, ಅದು ಹೊಸ ಯುಗದ – ಕಾರ್ಮಿಕ ವರ್ಗದ ಕ್ರಾಂತಿಯ ಯುಗದ ಹೊಸ ಮುಂಜಾವಿಗೆ ಕಾರಣವಾಗಿದೆ. ಇದರಿಂದ ಸ್ಫೂರ್ತಿಗೊಂಡು ಮತ್ತು ಅದರ ಬೋಧನೆಗಳಿಂದ ಮಾರ್ಗದರ್ಶನ ಪಡೆದು, ಹಲವಾರು ದೇಶಗಳ ಕಾರ್ಮಿಕರು ಅಧಿಕಾರವನ್ನು ಕೈವಶ ಮಾಡಿಕೊಂಡರು ಹಾಗೂ ತಮ್ಮತಮ್ಮ ದೇಶಗಳಲ್ಲಿ ಸಮಾಜವಾದವನ್ನು ಸ್ಥಾಪಿಸಿದರು.

ಮಾರ್ಕ್ಸ್‌ವಾದವು ಮಾರ್ಕ್ಸ್ ಮತ್ತು ಎಂಗೆಲ್ಸ್ ಬರೆದ ಪದಗಳನ್ನು ಮೀರಿ ಹೋಗುವುದಿಲ್ಲ ಎಂದು ನಂಬಿಕೊಂಡಿದ್ದ ತತ್ವಾಧರ ತಿಳುವಳಿಕೆಯು ತಪ್ಪೆಂದು ಕಾಮ್ರೇಡ್ ಲೆನಿನ್ ನಾಯಕತ್ವದಲ್ಲಿ ಜಯಶಾಲಿಯಾದ ನವೆಂಬರ್ ಮಹಾಕ್ರಾಂತಿಯು ಸಾಬೀತು ಮಾಡಿತು. ಮಾರ್ಕ್ಸ್‌ವಾದವು ಸಾಧಾರಣ ಮಾರ್ಗದರ್ಶಿ ಸೂತ್ರಗಳನ್ನು ಮಾತ್ರ ನೀಡುತ್ತದೆ ಹಾಗೂ ಪ್ರತಿಯೊಂದು ದೇಶದ ನಿರ್ದಿಷ್ಟ ಪರಿಸ್ಥಿತಿಗೆ ತಕ್ಕಂತೆ ಬೇರೆಬೇರೆ ದೇಶಗಳಲ್ಲಿ ಬೇರೆಬೇರೆ ರೀತಿಯಲ್ಲಿ ಮಾರ್ಕ್ಸ್‌ವಾದವನ್ನು ಅನ್ವಯಿಸಬೇಕು ಎಂದು ಲೆನಿನ್ ತೋರಿಸಿದರು. ನಮ್ಮ ನಾಯಕರು, ಶಿಕ್ಷಕರು ಹಾಗೂ ಅತ್ಯಂತ ಶ್ರೇಷ್ಠ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಚಿಂತಕರಲ್ಲಿ ಒಬ್ಬರಾದ ಶಿವದಾಸ್ ಘೋಷ್‌ರವರ ಪದಗಳಲ್ಲಿ ಹೇಳುವುದಾದರೆ, "ಕಮ್ಯುನಿಸ್ಟರು ಕ್ರಾಂತಿಯನ್ನು ಯಶಸ್ವಿ ಮಾಡಬೇಕಾದರೆ, ಅವರು ನಿಂತಿರುವ ನೆಲದ ನಿರ್ದಿಷ್ಟ ಪರಿಸ್ಥಿತಿಗೆ ಮಾರ್ಕ್ಸ್‌ವಾದ–ಲೆನಿನ್‌ವಾದವನ್ನು ಅನ್ವಯಿಸಬೇಕು." ನಮ್ಮ ದೇಶದಲ್ಲಿ ಕಮ್ಯುನಿಸ್ಟ್ ಪಕ್ಷಗಳು ಎಂದು ಕರೆಸಿಕೊಳ್ಳುವ ಪಕ್ಷಗಳು ವಿದೇಶದ ಯಾವುದಾದರೊಂದು ಕಮ್ಯುನಿಸ್ಟ್ ಪಕ್ಷದ ವಿಧಾನ ಹಾಗೂ ರಣತಂತ್ರಗಳನ್ನು ನಕಲು ಮಾಡಿದರು; ಅದನ್ನು ನಮ್ಮ ದೇಶದಲ್ಲಿ ನಿರ್ದಿಷ್ಟ ಪರಿಸ್ಥಿತಿಯನ್ನು ಪರಿಶೀಲಿಸದೇ, ಅವರ ಯೋಜನೆಗಳನ್ನು ನಮ್ಮ ದೇಶಕ್ಕೆ ಅನ್ವಯಿಸುತ್ತವೆಯೋ ಅಥವಾ ಇಲ್ಲವೋ ಎಂದು ಯೋಚಿಸದೇ ನಕಲು ಮಾಡಿದರು; ಇಂದಿನ ಪರಿಸ್ಥಿತಿಯಲ್ಲಿ ನಮ್ಮ ದೇಶದ ನಿರ್ದಿಷ್ಟ ಪರಿಸ್ಥಿತಿಗೆ ಮಾರ್ಕ್ಸ್‌ವಾದ–ಲೆನಿನ್‌ವಾದವನ್ನು ಅನ್ವಯಿಸಿ ನೋಡುವುದು ಬಹಳ ಮುಖ್ಯ. ಈ ಕಮ್ಯುನಿಸ್ಟ್ ಎಂದು ಕರೆದುಕೊಳ್ಳುವವರು ಅಧಿನಾಯಕತ್ವ (ಅಥಾರಿಟಿ) ಬಗ್ಗೆ ಮಾತನಾಡುತ್ತಾರೆ. ಆದರೆ ಮಾರ್ಕ್ಸ್‌ವಾದ–ಲೆನಿನ್‌ವಾದದ ಪ್ರಕಾರ ಅಧಿನಾಯಕತ್ವ ಎಂದರೆ ಅಧಿನಾಯಕತ್ವದ ಅಂಧಾನುಕರಣೆಯೂ ಅಲ್ಲ ಅಥವಾ 'ಗುರುವಾದ'ವೂ ಅಲ್ಲ. ಈ ನಿಟ್ಟಿನಲ್ಲಿ ನಮ್ಮ ಶಿಕ್ಷಕರಾದ ಕಾಮ್ರೇಡ್ ಶಿವದಾಸ್ ಘೋಷರು ಒಂದು ಮಹತ್ವದ ಒಳನೋಟವನ್ನು ನೀಡಿ, ಮಾರ್ಕ್ಸ್‌ವಾದ–ಲೆನಿನ್‌ವಾದವನ್ನು ಶ್ರೀಮಂತಗೊಳಿಸಿದ್ದಾರೆ. ಅವರು ಹೇಳಿದ ಪ್ರಕಾರ, ಅಧಿನಾಯಕತ್ವದ ಅಂಧಾನುಕರಣೆಯು "ಅಧಿನಾಯಕತ್ವದ ಜೊತೆಗಿನ ಸಂಘರ್ಷಕ್ಕೆ ತಡೆ ಹಾಕುತ್ತದೆ, ಅಧಿನಾಯಕತ್ವವನ್ನು ಅಂಧವಾಗಿ ಅಂಗೀಕರಿಸುವುದರ ಮೇಲೆ ನಿಂತಿದೆ, ಅಧಿನಾಯಕತ್ವವನ್ನು ದೋಷಾತೀತರನ್ನಾಗಿ, ವಿಮರ್ಶಾತೀತರನ್ನಾಗಿ ಮಾಡುತ್ತದೆ ಮತ್ತು ಅಂತಿಮವಾಗಿ ಅದಕ್ಕೆ ದೈವತ್ವವನ್ನು ನೀಡುತ್ತದೆ. ಅಂತಹ ಅಧಿನಾಯಕತ್ವದ ಅಂಧಾನುಕರಣೆಯ ಪರಿಪ್ರಜ್ಞೆಯು ದ್ವಂದ್ವಾತ್ಮಕ ವಸ್ತುವಾದದ ಮೇಲೆ ಆಧಾರಿತವಾದ ಅಧಿನಾಯಕತ್ವದ ಪರಿಪ್ರಜ್ಞೆಗೆ ಸರಿಹೊಂದುವುದಿಲ್ಲ, ಸರಿಯಾದ ಪರಿಪ್ರಜ್ಞೆಯು ಅಧಿನಾಯಕತ್ವದೊಂದಿಗಿನ ಸಂಘರ್ಷಕ್ಕೆ ತಡೆಯೊಡ್ಡುವ ಬದಲಿಗೆ ಅದು ಈ ಸಂಘರ್ಷಗಳು ಮಿಲನಾತ್ಮಕವಾದವುಗಳೆಂದು ಗ್ರಹಿಸಿಕೊಂಡು ನಿಖರವಾಗಿ ಅಧಿನಾಯಕತ್ವದೊಂದಿಗೆ ಜೊತೆಗೂಡುವ ಅದನ್ನು ಬಲಪಡಿಸುವ ಧ್ಯೇಯ ಹೊಂದಿರುತ್ತದೆ.

ಕಾಮ್ರೇಡ್ ಲೆನಿನ್, ಕಾಮ್ರೇಡ್ ಸ್ಟಾಲಿನ್ ಅಥವಾ ಮಾವೋ ಜೆಡಾಂಗ್ ಅವರ ಅನುಯಾಯಿ ಆಗುವುದೆಂದರೆ ಅವರನ್ನು ಕುರುಡಾಗಿ ಅನುಸರಿಸುವುದು, ಅವರು ಹೇಳಿದ್ದನ್ನು ಅಥವಾ ತಮ್ಮ ಪುಸ್ತಕಗಳಲ್ಲಿ ಬರೆದಿದ್ದನ್ನು ಬಾಯಿಪಾಠ ಮಾಡುವುದು, ತಮ್ಮ ಕ್ರಾಂತಿಗಳಲ್ಲಿ ಅವರು ತಯಾರಿಸಿದ ಯೋಜನೆಗಳನ್ನು ಯಾಂತ್ರಿಕವಾಗಿ ನಕಲು ಮಾಡುವುದು ಹಾಗೂ ಭಕ್ತರು ಜಪಮಣಿ ಹಿಡಿದು ಜಪಿಸುವಂತೆ ಅವರ ಹೆಸರುಗಳನ್ನು ಪಠಿಸುವುದು ಅಲ್ಲ. ಬದಲಾಗಿ, ತಮ್ಮ ಕ್ರಾಂತಿಗಳನ್ನು ಯಶಸ್ವಿಗೊಳಿಸಲು ಅವರು ಬಳಸಿದ ದ್ವಂದ್ವಾತ್ಮಕ ವಸ್ತುವಾದದ ವಿಧಾನಗಳನ್ನು ಅನುಸರಿಸುವುದು, ಭಾರತೀಯ ಪರಿಸ್ಥಿತಿಯನ್ನು ಸ್ಥೂಲವಾಗಿ ಮತ್ತು ಸ್ವತಂತ್ರವಾಗಿ ಪರಿಶೀಲಿಸುವುದು, ದೇಶದ ನಿರ್ದಿಷ್ಟ ಪರಿಸ್ಥಿತಿಗೆ ಅನುಗುಣವಾಗಿ ಮಾರ್ಕ್ಸ್‌ವಾದ–ಲೆನಿನ್‌ವಾದದ ಮಾರ್ಗದರ್ಶಿ ಸೂತ್ರಗಳನ್ನು ಸೃಜನಶೀಲವಾಗಿ ಅನ್ವಯಿಸುವುದು ಹಾಗೂ ಭಾರತೀಯ ಪರಿಸ್ಥಿತಿಗೆ ಸರಿಹೊಂದುವ ವಿಧಾನಗಳನ್ನು ನಿರ್ಧರಿಸುವುದು ಮತ್ತು ಪರಿಸ್ಥಿತಿ ಬದಲಾದ ಹಾಗೆಲ್ಲಾ ವಿಧಾನಗಳನ್ನು ಬದಲಾಯಿಸುವುದು. ಇದು ಮಾತ್ರವೇ ಮಾರ್ಕ್ಸ್‌ವಾದದ ಮೇಲಿನ ಅಂಧವಿಶ್ವಾಸದಿಂದ ಕಾಪಾಡಬಲ್ಲುದು.



**"......ಎಲ್ಲಾ ದೇಶಗಳ ಬಂಡವಾಳಿಗರ ಮತ್ತು ಅವರ ಬಂಟರ ಸುಳ್ಳು, ಅಪಪ್ರಚಾರಗಳು ಏನೇ ಇದ್ದರೂ, ನಮ್ಮ ದೇಶದಲ್ಲಿ ಕಾರ್ಮಿಕ ವರ್ಗದ ಸರ್ವಾಧಿಕಾರದ ಮೂಲಭೂತ ಆರ್ಥಿಕ ಸಮಸ್ಯೆಗೆ ಸಂಬಂಧಿಸಿದಂತೆ ಬಂಡವಾಳವಾದದ ಮೇಲೆ ಕಮ್ಯುನಿಸಂನ ವಿಜಯ ಖಾತ್ರಿಯಾಗಿದೆ. ಪ್ರಪಂಚದಾದ್ಯಂತ ಬಂಡವಾಳಶಾಹಿಗಳು ಬೋಲ್ಶೆವಿಸಂ ವಿರುದ್ಧ ಕೋಪದಿಂದ ಕುದಿಯುತ್ತಿದ್ದಾರೆ ಮತ್ತು ಮಿಲಿಟರಿ ಆಕ್ರಮಣಗಳನ್ನು, ಸಂಚುಗಳನ್ನು ರೂಪಿಸುತ್ತಿದ್ದಾರೆ, ಏಕೆಂದರೆ ಮಿಲಿಟರಿ ಬಲದ ಮೂಲಕ ಹೊಸಕಿ ಹಾಕದೆ ಹೋದರೆ ಸಮಾಜವಾದಿ ಆರ್ಥಿಕತೆಯನ್ನು ಮರುರಚಿಸುವಲ್ಲಿ ನಮ್ಮ ಯಶಸ್ಸು ಶತಃಸಿದ್ಧ ಎಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ...."**

**ಮೂಲ: ಲೆನಿನ್ 1919 ರಲ್ಲಿ ಬರೆದ ಲೇಖನ**

ತತ್ವಾಂಧತೆ ಒಂದು ಅಪಾಯವೇ ಆದರೂ, ಅದು ವಿಶ್ವದ ಕಮ್ಯುನಿಸ್ಟ್ ಚಳುವಳಿಯ ಮುಂದೆ ಈಗ ಇರುವ ಬಹುದೊಡ್ಡ ಅಪಾಯವಲ್ಲ. ವಿಶ್ವದ ಕಮ್ಯುನಿಸ್ಟ್ ಚಳುವಳಿಯ ಮುಂದೆ ಈಗಿರುವ ಬಹುದೊಡ್ಡ ಅಪಾಯವೆಂದರೆ ಪರಿಷ್ಕರಣವಾದ. ಮಾರ್ಕ್ಸ್‌ವಾದವು ತತ್ವಾಂಧತೆಯಲ್ಲ, ಅದೊಂದು ಕ್ರಿಯೆಗೆ ಮಾರ್ಗಸೂಚಿ ಎನ್ನುವ ನೆಪದಲ್ಲಿ, ಪರಿಷ್ಕರಣವಾದಿಗಳು ಅದರ ಕ್ರಾಂತಿಕಾರಿ ಸತ್ವವನ್ನು ಕಸಿದುಕೊಂಡು, ಅದನ್ನು ಬಂಡವಾಳಶಾಹಿಗಳಿಗೆ ಒಪ್ಪಿಗೆಯಾಗುವ ಅವಕಾಶವಾದ, ವ್ಯವಹಾರಿಕತೆ ಮತ್ತಿತರ ಅಪ್ರಯೋಜಕ ತತ್ವಗಳಾಗಿ ಪರಿವರ್ತಿಸುವುದಕ್ಕೆ ಪ್ರಯತ್ನಿಸುತ್ತಿದ್ದಾರೆ. ವಿವಿಧ ದೇಶಗಳ ನಿರ್ದಿಷ್ಟ ಪರಿಸ್ಥಿತಿಗಳಲ್ಲಿ ವ್ಯತ್ಯಾಸವಿರುವುದರಿಂದ ಮಾರ್ಕ್ಸ್‌ವಾದ–ಲೆನಿನ್‌ವಾದದ ಸಾರ್ವತ್ರಿಕ ಮಾರ್ಗದರ್ಶಿ ಸೂತ್ರಗಳನ್ನು ಅಳವಡಿಸುವುದರಲ್ಲಿ ವ್ಯತ್ಯಾಸವಿರುತ್ತದೆ. ಇದರಿಂದಾಗಿ ಸಹ, ಬಂಡವಾಳವಾದದಿಂದ ಸಮಾಜವಾದದ ಪರಿವರ್ತನೆಗಳು ವಿವಿಧ ದೇಶಗಳಲ್ಲಿ ವಿಭಿನ್ನ ಸ್ವರೂಪಗಳನ್ನು ಪಡೆಯುತ್ತವೆ; ಆದರೂ ಸಹ ಎಲ್ಲೆಡೆಯೂ ಮಾರ್ಕ್ಸ್‌ವಾದ–ಲೆನಿನ್‌ವಾದದ ಸತ್ವವು ಒಂದೇ ಆಗಿರುತ್ತದೆ ಎಂದು ನವೆಂಬರ್ ಮಹಾಕ್ರಾಂತಿ ಮತ್ತೆ ಸಾಬೀತುಪಡಿಸಿತು. ಮಾರ್ಕ್ಸ್‌ವಾದ–ಲೆನಿನ್‌ವಾದದ ಮೂಲಭೂತ ಅಂಶಗಳನ್ನು ಪ್ರತಿಬಿಂಬಿಸುವ ಸಾಮಾನ್ಯತೆಯನ್ನು ಕಡೆಗಣಿಸಿ, ಏಕಪಕ್ಷೀಯವಾಗಿ ವ್ಯತ್ಯಾಸಗಳಿಗೆ ಒತ್ತು ನೀಡುವುದು ಎಂದರೆ ರಾಷ್ಟ್ರವಾದ ಮತ್ತು ಪರಿಷ್ಕರಣವಾದಕ್ಕೆ ಆಹ್ವಾನ ನೀಡುವುದು ಎಂದರ್ಥ. ಕ್ರುಶ್ಚೇವ್ ವಿವಿಧ ಸಮಾಜವಾದಿ ರಾಷ್ಟ್ರಗಳಲ್ಲಿನ ಸಾಮಾನ್ಯ ಅಂಶಗಳನ್ನು ತಿಳಿಸದೇ, ಅವುಗಳಲ್ಲಿ ಇರುವ ವ್ಯತ್ಯಾಸಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿದ್ದೇ ಬಾಲ್ಕನ್ ರಾಷ್ಟ್ರಗಳ ಕಮ್ಯುನಿಸ್ಟ್ ಪಕ್ಷಗಳಲ್ಲಿ ರಾಷ್ಟ್ರವಾದಿ ಬದಲಾವಣೆಗಳು ಕಂಡುಬರಲು ಕಾರಣವಾಯಿತು.

"ಕಾರ್ಮಿಕ ವರ್ಗವು ಈಗಾಗಲೇ ಇರುವ, ಬಂಡವಾಳಶಾಹಿ ರಾಜ್ಯಯಂತ್ರವನ್ನು ವಶಪಡಿಸಿಕೊಂಡು ತನ್ನ ಉದ್ದೇಶಗಳ ಈಡೇರಿಕೆಗೆ ಅದನ್ನು ಬಳಸಲು ಸಾಧ್ಯವಿಲ್ಲ" ಎಂಬ ಮಾರ್ಕ್ಸ್‌ವಾದದ ಮೂಲಭೂತ ಅಂಶವನ್ನು ನವೆಂಬರ್ ಮಹಾಕ್ರಾಂತಿಯು ದೃಢಪಡಿಸಿತು. ಬಂಡವಾಳಶಾಹಿ ರಾಜ್ಯಯಂತ್ರವನ್ನು ನಾಶಪಡಿಸಿ, ಅದರ ಸ್ಥಾನದಲ್ಲಿ ಕಾರ್ಮಿಕವರ್ಗದ ರಾಜ್ಯಯಂತ್ರವನ್ನು ಸ್ಥಾಪಿಸದೇ ಸಮಾಜವಾದವನ್ನು ಸ್ಥಾಪಿಸಲು ಸಾಧ್ಯವಿಲ್ಲ. ಆದರೂ, ವಿವಿಧ ದೇಶಗಳಲ್ಲಿನ ನಿರ್ದಿಷ್ಟ ಪರಿಸ್ಥಿತಿಗಳು ಬೇರೆಬೇರೆ ರೀತಿ ಇರುವುದರಿಂದ ಪ್ರಜಾಪ್ರಭುತ್ವದಲ್ಲಿ ಬೇರೆಬೇರೆ ಲಕ್ಷಣಗಳು ಕಂಡುಬಂದು, ಬಂಡವಾಳವಾದದಿಂದ ಕಮ್ಯುನಿಸ್ಟ್ ವ್ಯವಸ್ಥೆಗೆ ಪರಿವರ್ತನೆ ಆಗುವ ಸಮಯದಲ್ಲಿ ಬೇರೆಬೇರೆ ರಾಜಕೀಯ ಸ್ವರೂಪಗಳು ಸೃಷ್ಟಿಯಾಗುತ್ತವೆ. ಆದರೆ, ರಾಜಕೀಯ ಸ್ವರೂಪಗಳಲ್ಲಿ ಬದಲಾವಣೆಗಳು ಇದ್ದರೂ, ಅವುಗಳ ಸತ್ವವು ಎಲ್ಲಾ ಕಡೆಯೂ ಒಂದೇ ಆಗಿರುತ್ತದೆ – ಅದೆಂದರೆ, ಕಾರ್ಮಿಕವರ್ಗದ ಸರ್ವಾಧಿಕಾರ. ಕಾರ್ಮಿಕವರ್ಗದ ಸರ್ವಾಧಿಕಾರ ಇಲ್ಲದೇ ಸಮಾಜವಾದ ಸ್ಥಾಪಿಸುವುದು ಸಾಧ್ಯವೇ ಇಲ್ಲ. ನವೆಂಬರ್ ಮಹಾಕ್ರಾಂತಿಯು ಕಾರ್ಮಿಕರ ರಾಜ್ಯಯಂತ್ರ ಮತ್ತು ಕಾರ್ಮಿಕವರ್ಗದ ಸರ್ವಾಧಿಕಾರ ಎಂಬ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಪರಿಕಲ್ಪನೆಗಳನ್ನು ಕಾಪಾಡುವ ಮೂಲಕ ಮಾರ್ಕ್ಸ್‌ವಾದ–ಲೆನಿನ್‌ವಾದ ಮತ್ತು ಸೋಷಲ್ ಡೆಮಾಕ್ರಸಿ ನಡುವೆ ವಿಶಾಲ ಕಂದರ ಸೃಷ್ಟಿಸಿದೆ. ಸೋಷಲ್ ಡೆಮಾಕ್ರಸಿಯು ಬಂಡವಾಳಶಾಹಿ ರಾಜ್ಯಯಂತ್ರದ ವಿನಾಶವನ್ನು ವಿರೋಧಿಸುತ್ತದೆ, ಚುನಾವಣೆಗಳ ಮೂಲಕ ಶಾಂತಿಯುತವಾಗಿ ಸಮಾಜವಾದಕ್ಕೆ ಪರಿವರ್ತನೆಯಾಗಬಹುದು ಎನ್ನುತ್ತದೆ ಹಾಗೂ ಕಾರ್ಮಿಕವರ್ಗದ ಸರ್ವಾಧಿಕಾರವನ್ನು ವಿರೋಧಿಸುತ್ತದೆ.

ತನ್ನ ಇಪ್ಪತ್ತನೇ ಕಾಂಗ್ರೆಸ್‌ನಿಂದಲೂ ಸಿಪಿಎಸ್‌ಯು (ಕಮ್ಯುನಿಸ್ಟ್ ಪಾರ್ಟಿ ಆಫ್ ಸೋವಿಯತ್ ಯೂನಿಯನ್)ಪಕ್ಷವು ಕಡುನಿಂದನೆಗೆ ಒಳಗಾಗಿರುವ ಸೋಷಲ್ ಡೆಮಾಕ್ರಸಿಯ ಶಾಂತಿಯುತ ಸಮಾಜವಾದಿ ಪರಿವರ್ತನೆ ಸಿದ್ಧಾಂತ ಹಾಗೂ ಸಮಸ್ತ ಜನರ ಪ್ರಭುತ್ವದ ಸಿದ್ಧಾಂತದ ಜಪ ಮಾಡುತ್ತಿರುವುದು ಖೇದನೀಯ. ಕಮ್ಯುನಿಸ್ಟ್ ಪಕ್ಷಗಳೆಂದು ಕರೆಸಿಕೊಳ್ಳುವ ಹಲವಾರು ಪಕ್ಷಗಳೂ ಇದನ್ನೇ ಮಾಡುತ್ತಿರುವುದು ಇನ್ನೂ ಖೇದನೀಯ. ಕ್ರುಶ್ಚೇವ್ ನಾಯಕತ್ವದಲ್ಲಿ ಸಿಪಿಎಸ್‌ಯು ಪಕ್ಷವು ಚುನಾವಣೆಯ ಮೂಲಕ ಸಮಾಜವಾದಕ್ಕೆ ಶಾಂತಿಯುತ ಪರಿವರ್ತನೆ ಮತ್ತು ಎಲ್ಲಾ ಜನರ ಪ್ರಭುತ್ವ ಎಂದು ಜಪ ಪ್ರಾರಂಭಿಸಿದಾಗಿನಿಂದ ಈ ಪಕ್ಷಗಳು ಅದೇ ರೀತಿ ವಾದಿಸುತ್ತಿರುವುದು ಆಕಸ್ಮಿಕವೇನಲ್ಲ. ಇವು ಸಿಪಿಎಸ್‌ಯು ಪಕ್ಷವು ಹೇಳಿದ್ದನ್ನೆಲ್ಲಾ ಕುರುಡಾಗಿ ಅನುಸರಿಸುತ್ತವೆ ಎಂಬುದನ್ನು ಮತ್ತೊಮ್ಮೆ ತೋರಿಸುತ್ತದೆ. ವಿಶ್ವ ಕಮ್ಯುನಿಸ್ಟ್ ಚಳುವಳಿಗೆ ಕಂಟಕವಾಗಿರುವ ಹಾಗೂ ಜಾಗತಿಕ ಸಾಮ್ರಾಜ್ಯವಾದ ಮತ್ತು ಬಂಡವಾಳವಾದಕ್ಕೆ ಲಾಭದಾಯಕವಾದ ಆಧುನಿಕ ಪರಿಷ್ಕರಣಾವಾದವು ಸಿಪಿಎಸ್‌ಯು ಮೇಲಿನ ಕ್ರುಶ್ಚೇವ್ ನಾಯಕತ್ವದ ಸೃಷ್ಟಿಯಾಗಿದೆ ಹಾಗೂ ವಿಶ್ವದ ಕಮ್ಯುನಿಸ್ಟ್ ಪಕ್ಷಗಳು ಮತ್ತು ಸಿಪಿಎಸ್‌ಯು ನಡುವಿನ ಕುರುಡಾದ ಸಂಬಂಧವೇ ಕಾರಣ.

ಎಲ್ಲಾ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಫ್ಯಾಸಿವಾದವೇ ಸಾಮಾನ್ಯವಾಗಿರುವ ಇಂದಿನ ಪರಿಸ್ಥಿತಿಯಲ್ಲಿ, ಸಾಂಪ್ರದಾಯಿಕ ಪ್ರಜಾತಾಂತ್ರಿಕ ದೇಶಗಳಲ್ಲಿ ಸಾಮಾನ್ಯ ಪ್ರಜಾತಾಂತ್ರಿಕ ಚಳುವಳಿಗಳನ್ನು ನಿರ್ದಯವಾಗಿ ಹತ್ತಿಕ್ಕಲಾಗುತ್ತಿದೆ; ಸಾಮ್ರಾಜ್ಯಶಾಹಿಗಳು ಅಡಿಯಿಂದ ಮುಡಿಯವರೆಗೂ ಸಶಸ್ತ್ರರಾಗಿ ಸಮಾಜವಾದಿ ರಾಷ್ಟ್ರಗಳಲ್ಲಿ ಪ್ರತಿಕ್ರಾಂತಿಯನ್ನು ಸಂಘಟಿಸುತ್ತಿದ್ದಾರೆ; ದುರ್ಬಲವಾಗಿದ್ದರೂ ಜಾಗತಿಕ ವ್ಯವಸ್ಥೆಯಾಗಿ ಉಳಿದುಕೊಂಡಿರುವ ಜಾಗತಿಕ ಸಾಮ್ರಾಜ್ಯವಾದವು

10ನೇ ಪುಟಕ್ಕೆ...

# “ಐತಿಹಾಸಿಕ ಆರ್‌ಜಿ ಕರ್ ಆಂದೋಳನ ಅನ್ಯಾಯದ ವಿರುದ್ಧದ ಭವಿಷ್ಯದ ಹೋರಾಟಗಳಿಗೆ ದಾರಿದೀಪವಾಗಲಿ!” –ಕಾಮ್ರೇಡ್ ಪ್ರವಾಶ್ ಘೋಷ್

ಕೊಲ್ಕತ್ತಾದ ಆರ್‌ಜಿ ಕರ್ ಆಸ್ಪತ್ರೆಯಲ್ಲಿ ಘೋರ ಪಾತಕ ಘಟಿಸಿ ಒಂದೂವರೇ ತಿಂಗಳೇ ಗತಿಸಿದೆ. ಈ ಸುದೀರ್ಘ ಕಾಲದಲ್ಲಿ, ಕೊಲ್ಕತ್ತಾ ಮತ್ತು ಪಶ್ಚಿಮ ಬಂಗಾಲದ ಜನತೆ ಮಾತ್ರವಲ್ಲದೆ ದೇಶದ ಮೂಲೆಮೂಲೆಗಳಲ್ಲಿನ, ವಿದೇಶಗಳ ಜನರು ಸಹ ಈ ಪಾತಕಕ್ಕೆ ಬಲಿಯಾದ ಮಹಿಳಾ ವೈದ್ಯೆಗೆ ನ್ಯಾಯ ಆಗ್ರಹಿಸಿ ಪ್ರತಿಭಟಿಸಿದ್ದಾರೆ. ‘ನಮಗೆ ನ್ಯಾಯ ಬೇಕು’ ಎಂಬ ಘೋಷಣೆ ಎಲ್ಲೆಲ್ಲೂ ಮೊಳಗಿದೆ. ಈ ಜನಾಂದೋಳನದಲ್ಲಿ ಮಹಿಳಾ ಸಮುದಾಯದ ಪಾಲ್ಗೊಳ್ಳುವಿಕೆ ಗಮನಾರ್ಹವಾದದ್ದು. ಈ ಘಟನೆ ಬಗ್ಗೆ ಯೂ ಟ್ಯೂಬ್ ಚಾನೆಲ್, ‘ಸಾಮ್ಯವಾದಿ ದೃಷ್ಟಿಕೋನ’ದಲ್ಲಿ ಪ್ರಸಾರವಾದ ಎಸ್‌ಯುಸಿಐ(ಸಿ) ಪ್ರಧಾನ ಕಾರ್ಯದರ್ಶಿಗಳಾದ ಕಾ. ಪ್ರವಾಶ್ ಘೋಷ್‌ರವರ ಸಂದರ್ಶನದ ಕೆಲ ಆಯ್ದ ಭಾಗಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

“ರಾಜ್ಯ ಸರ್ಕಾರ ಘಟನೆಯ ಮೊದಲ ದಿನದಿಂದಲೂ ವಾಸ್ತವಾಂಶವನ್ನು ಮುಚ್ಚಿಡಲು ಪ್ರಯತ್ನಿಸುತ್ತಿದೆ; ಕಿರಿಯ ವೈದ್ಯರ ಆಗ್ರಹವಿಲ್ಲದಿದ್ದಲ್ಲಿ, ಸರ್ಕಾರ ಈ ಕೊಲೆಯನ್ನು ಆತ್ಮಹತ್ಯೆಯೆಂದು ಮುಚ್ಚಿಹಾಕುತ್ತಿತ್ತು. ಈ ಪ್ರಕರಣದಲ್ಲಿ ತ್ವರಿತ ಗತಿಯಲ್ಲಿ ನಡೆಯಬೇಕಾದ ಕಾನೂನು ಪ್ರಕ್ರಿಯೆ ನಿಧಾನಗತಿಯಲ್ಲಿ ನಡೆದಿದೆ. ಜೊತೆಗೆ, ಪಾತಕ ನಡೆದ ಸ್ಥಳದಲ್ಲಿ ವಿಧ್ವಂಸಕ ಕ್ರಿಯೆಯೂ ನಡೆದಿತ್ತು. ಸರ್ಕಾರ ಏನನ್ನೋ ಮುಚ್ಚಿಡಲು ಪ್ರಯತ್ನಿಸುತ್ತಿದೆ ಎಂಬುದು ಸುಸ್ಪಷ್ಟ.

“ದೇಶದಲ್ಲಿ ಪ್ರತಿ 15 ನಿಮಿಷಗಳಿಗೆ ಒಂದರಂತೆ ಮಹಿಳೆಯರ ಮೇಲೆ ಅತ್ಯಾಚಾರ ನಡೆಯುತ್ತದೆ ಎಂದು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ವರದಿ ಮಾಡಿದರೂ, ವಾಸ್ತವದಲ್ಲಿ ಅದು ಇನ್ನೂ ಹೆಚ್ಚು; ಪ್ರತಿನಿಮಿಷವೂ ಹಲವಾರು ಘಟನೆಗಳು ನಡೆಯುತ್ತಿದ್ದು, ಪುಟ್ಟ ಮಕ್ಕಳು ಮತ್ತು ವೃದ್ಧೆಯರೂ ಅದಕ್ಕೆ ಬಲಿಯಾಗುತ್ತಿದ್ದಾರೆ; ಮಾಧ್ಯಮಗಳಲ್ಲಿ ವರದಿಯಾಗುವುದು ಬಹಳ ಕಡಿಮೆ. ಸರ್ಕಾರಗಳಿಗೆ ಈ ಬಗ್ಗೆ ಗಮನವೇ ಇಲ್ಲ.

“ಈ ಪುರುಷ ಪ್ರಧಾನ ಸಮಾಜದಲ್ಲಿ ದಮನಕ್ಕೆ ಮತ್ತು ಅವಗಣನೆಗೆ ಒಳಗಾಗಿರುವ, ಅಬಲೆಯರು ಎಂದು ಪರಿಗಣಿಸಲ್ಪಡುವ ಶಿಕ್ಷಿತ, ಅಶಿಕ್ಷಿತ ಮಹಿಳೆಯರು ಅನ್ಯಾಯದ ವಿರುದ್ಧ ಧೀರೋದಾತ್ತವಾಗಿ ಹೋರಾಡುತ್ತಾ ಈ ಆಂದೋಳನದಲ್ಲಿ ಒಂದು ಐತಿಹಾಸಿಕ ಪಾತ್ರವನ್ನು ವಹಿಸಿದ್ದಾರೆ. ಸ್ವಾತಂತ್ರ್ಯ ಸಂಗ್ರಾಮದ ಕಾಲದಿಂದ ಇದುವರೆಗೂ ಮಹಿಳೆಯರ ಇಂತಹ ಬೃಹತ್ ಹೋರಾಟವನ್ನು ದೇಶ ಕಂಡಿರಲಿಲ್ಲ; ಇದು ಇತಿಹಾಸದ ಪುಟಗಳಲ್ಲಿ ಒಂದು ಅವಿಸ್ಮರಣೀಯ ಗಾಥೆಯಾಗಿ ದಾಖಲಾಗುತ್ತಾ ಮುಂಬರುವ ಹೋರಾಟಗಳಿಗೆ ಒಂದು ಸ್ಫೂರ್ತಿಯ ಸೆಲೆಯಾಗಲಿದೆ. ಮನೆಗಳಲ್ಲಿ, ರೈಲು–ಬಸ್‌ಗಳಲ್ಲಿ, ಎಲ್ಲೆಡೆ ಮಹಿಳೆಯರು ದೌರ್ಜನ್ಯಗಳನ್ನು ಎದುರಿಸುತ್ತಿದ್ದು ಅವರಲ್ಲಿ ದಶಕಗಳಿಂದ ಮಡುಗಟ್ಟಿರುವ ಆಕ್ರೋಶ ಈ ಪ್ರಕರಣದಲ್ಲಿ ಸ್ಫೋಟಗೊಂಡಿದೆ; ಜೊತೆಗೆ, ಬೆಲೆ ಏರಿಕೆ, ನಿರುದ್ಯೋಗ, ವ್ಯಾಪಕ ಭ್ರಷ್ಟಾಚಾರ, ಜೀವನದಲ್ಲಿನ ಅಭದ್ರತೆ, ಇವೆಲ್ಲವುಗಳಿಂದ ಸಂಕಷ್ಟಕ್ಕೆ ಒಳಗಾಗಿರುವ ಜನರಲ್ಲಿ ಹೆಚ್ಚುತ್ತಿರುವ ಅಸಂತೃಪ್ತಿಯೂ ಈ ರೀತಿಯಲ್ಲಿ ಅಭಿವ್ಯಕ್ತಗೊಂಡಿದೆ.

“ಎಲ್ಲಾ ರಾಜ್ಯಗಳಲ್ಲಿ, ಕಾಂಗ್ರೆಸ್, ಬಿಜೆಪಿ ಅಥವಾ ಯಾವುದೇ ಪ್ರಾಂತೀಯ ಪಕ್ಷ ಅಧಿಕಾರದಲ್ಲಿರಲಿ, ಅಲ್ಲಿ ಮಹಿಳೆಯರ ಮೇಲಿನ ಅತ್ಯಾಚಾರಗಳು ದಿನನಿತ್ಯದ ಮಾತಾಗಿವೆ. ಪಶ್ಚಿಮ ಬಂಗಾಲದಲ್ಲಿ, ಸಿಂಗೂರ್–ನಂದಿಗ್ರಾಮಗಳಲ್ಲಿ ಫಲವತ್ತಾದ ಕೃಷಿ ಭೂಮಿಯನ್ನು ಕಬಳಿಸುವ ಸಿಪಿಐ(ಎಂ) ಸರ್ಕಾರದ ಯತ್ನದ ವಿರುದ್ಧದ ಪ್ರತಿಭಟನಾ ಹೋರಾಟಗಳನ್ನು ಹತ್ತಿಕ್ಕಲು ಸರ್ಕಾರ ಅತ್ಯಾಚಾರವನ್ನು ಒಂದು ಅಸ್ತ್ರವನ್ನಾಗಿ ಬಳಸಿತ್ತು. ಪ್ರಸಕ್ತದಲ್ಲೂ, ಕೇರಳದ ಸಿಪಿಐ(ಎಂ) ಸರ್ಕಾರದ ವಿರುದ್ಧ ಹೋರಾಟವೊಂದು ನಡೆ–ಯುತ್ತಿದೆ; ಇದು, ಸಿನೆಮಾ ರಂಗದಲ್ಲಿ, ಉದ್ಯೋಗದ ಸ್ಥಳಗಳಲ್ಲಿ, ಮಹಿಳೆಯರ ಮೇಲಿನ ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯಗಳ ವಿರುದ್ಧದ ಆಂದೋಳನ. ಈ ಬಗ್ಗೆ ತನಿಖೆ ನಡೆಸಿದ ಜಸ್ಟೀಸ್ ಹೇಮಾ ಸಮಿತಿಯ ವರದಿಯನ್ನು ಸರ್ಕಾರ 5 ವರ್ಷಗಳಾದರೂ ಬಯಲುಗೊಳಿಸದೆ ಇರುವುದನ್ನು ಕೇರಳ ಉಚ್ಚ ನ್ಯಾಯಾಲಯ ಖಂಡಿಸಿದೆ.

“ಆರ್‌ಜಿ ಕರ್ ಪ್ರಕರಣ, ಒಂದು ಕಿಡಿಯಾಗಿ ಕಾಡ್ಗಿಚ್ಚನ್ನು ಸೃಷ್ಟಿಸಿದೆ. ಆಳ್ವಿಕರನ್ನೇ ಬದಲಾಯಿಸಿದ ಬಾಂಗ್ಲಾದೇಶದ ಇತ್ತೀಚಿನ ಜನಾಂದೋಳನದಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸಿದ್ದರು. ತಮ್ಮನ್ನು ಮೂಲೆಗುಂಪು ಮಾಡಿದ ಪರದೆಯನ್ನು ಕಿತ್ತೊಗೆದ ಮುಸ್ಲಿಂ ಮಹಿಳೆಯರು ಲಕ್ಷೋಪಾದಿಯಲ್ಲಿ ಬೀದಿಗೆ ಬಂದರು. ಹಿಂದೂ–ಮುಸ್ಲಿಂ, ಎರಡೂ ಜನಾಂಗದ ಮಹಿಳೆಯರು ಪಾಲ್ಗೊಂಡಿದ್ದ ಈ ಆಂದೋಳನ ಆರ್‌ಜಿ ಕರ್ ಹೋರಾಟಕ್ಕೂ ಸ್ಫೂರ್ತಿ ನೀಡಿದೆ.

“ಆಗಸ್ಟ್ 9ರಂದು, ಘಟನೆ ನಡೆದ ದಿನವೇ ನಮ್ಮ ವಿದ್ಯಾರ್ಥಿ–ಯುವಜನ ಮತ್ತು ಮಹಿಳಾ ಮುಂದಳಗಳ ಕಾರ್ಯಕರ್ತರು ಆ ಆಸ್ಪತ್ರೆ ಮತ್ತು ಸ್ಥಳೀಯ ಪೊಲೀಸ್ ಸ್ಟೇಶನ್ ಮುಂದೆ ಪ್ರತಿಭಟನೆ ನಡೆಸಿದರು; ಆಗಸ್ಟ್ 14ರಂದು ‘ರಾತ್ರಿಯನ್ನು ಹಿಂಪಡೆಯೋಣ’ ಎಂಬ ಪ್ರತಿಭಟನೆಯಲ್ಲಿ ನಮ್ಮ ಮಹಿಳಾ ಕಾಮ್ರೇಡರು ಪ್ರಮುಖ ಪಾತ್ರ ವಹಿಸಿದ್ದರು. ಆಸ್ಪತ್ರೆಯ ಮುಂದೆ ನಡೆದ ಧರಣಿಯಲ್ಲಿ ನಮ್ಮ ವೈದ್ಯ ಕಾಮ್ರೇಡರು ಮುಂಚೂಣಿಯಲ್ಲಿದ್ದರು. ಆಗಸ್ಟ್ 14ರ ರಾತ್ರಿ ಆಸ್ಪತ್ರೆಯಲ್ಲಿ ನಡೆದ ವಿಧ್ವಂಸಕ ಕೃತ್ಯವನ್ನು ವಿರೋಧಿಸಿ ನಮ್ಮ ಪಕ್ಷ 15ರಂದು ನಡೆಸಿದ 12 ಗಂಟೆಗಳ ಕಾಲದ ಮುಷ್ಕರ ಬಹಳ ಯಶಸ್ಸನ್ನು ಕಂಡಿತು. ಆಗಸ್ಟ್ 29ರಂದು, ‘ಎದ್ದೇಳು ಮಹಿಳೆ, ನೀನು ಅಗ್ನಿಶಿಖೆ’ ಎಂಬ ಘೋಷಣೆಯೊಂದಿಗೆ ಮುನ್ನಡೆದ ಬೃಹತ್ ಮೆರವಣಿಗೆಯ ಮುಂಚೂಣಿಯಲ್ಲೂ ನಮ್ಮ ಮಹಿಳಾ ಕಾಮ್ರೇಡರು ಇದ್ದರು. ಸೆಪ್ಟೆಂಬರ್ 9ರಂದು ನಮ್ಮ ವಿದ್ಯಾರ್ಥಿ ಮುಂದಳ, ಎಐಡಿಎಸ್‌ಓ ಒಂದು ಬೃಹತ್ ರ್ಯಾಲಿಯನ್ನು ಸಂಘಟಿಸಿತ್ತು. ಹೀಗೆ ನಮ್ಮ ಪಕ್ಷ ಎಸ್‌ಯುಸಿಐ(ಸಿ) ಮತ್ತದರ ಮುಂದಳಗಳು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಈ ಹೋರಾಟ ಬೆಂಬಲಿಸಿ ಸಕ್ರಿಯ ಪಾತ್ರ ವಹಿಸಿವೆ.

“ದಮನಿತ ಜನತೆ ಎಲ್ಲಾ ಸಂಸದೀಯ ಪಕ್ಷಗಳಿಂದ ಭ್ರಮನಿರಸನಗೊಂಡಿವೆ. ಆದರೆ, ನಮ್ಮ ಪಕ್ಷದ ಕಾಮ್ರೇಡರು ಎಲ್ಲೆಡೆಗಳಲ್ಲಿ ಜನರಿಂದ ಸಕಾರಾತ್ಮಕ ಪ್ರತಿಕ್ರಿಯೆಯನ್ನು ಪಡೆಯುತ್ತಿದ್ದಾರೆ. ಈ ಘಟನೆಗೆ ಸಂಬಂಧಿಸಿದಂತೆ, ಬಿಜೆಪಿ ಮತ್ತು ಸಿಪಿಐ(ಎಂ) ಪಕ್ಷಗಳು ಕೇವಲ ಚುನಾವಣಾ ದೃಷ್ಟಿಯಿಂದ ತೋರಿಕೆಯ ಪ್ರತಿಭಟನೆ ನಡೆಸುತ್ತಿವೆ ಮತ್ತು ಆಂದೋಳನದ ಹಾದಿಯನ್ನು ದಿಕ್ಕು ತಪ್ಪಿಸುವ ಪ್ರಯತ್ನ ಮಾಡುತ್ತಿವೆ; ಬದಲಿಗೆ, ನಾವು ಮಾತ್ರ ಹೋರಾಟದ ಕಣದಲ್ಲಿರುವುದು ನ್ಯಾಯಕ್ಕಾಗಿ ಎಂಬುದನ್ನು ಜನರು ಮನಗಂಡಿದ್ದಾರೆ.

“ಈ ಆಂದೋಳನ ಯಾವುದೇ ರಾಜಕೀಯ ಪಕ್ಷದ ಪತಾಕೆಯಡಿಯಲ್ಲಿ ನಡೆಯದಿದ್ದರೂ, ಇದರಲ್ಲಿ ರಾಜಕೀಯದ ಅಡಗಿದೆ. ಈ ದೇಶದಲ್ಲಿನ ಆರ್ಥಿಕ ವ್ಯವಸ್ಥೆ ಒಂದು ಶೋಷಕ ಬಂಡವಾಳಶಾಹಿ ವ್ಯವಸ್ಥೆಯಾಗಿದ್ದು, ಅದನ್ನು ಮಿಲಿಟರಿ, ನ್ಯಾಯಾಂಗ ಮತ್ತು ಅಧಿಕಾರಶಾಹಿ, ಇವನ್ನು ಒಳಗೊಂಡ ಪ್ರಭುತ್ವ ರಕ್ಷಿಸುತ್ತದೆ. ಚುನಾಯಿತ ಸರ್ಕಾರ, ಅದು ಯಾವುದೇ ಪಕ್ಷದಾಗಿರಲಿ, ಅದು ಏಕಸ್ವಾಮ್ಯಾಧಿಪತಿಗಳ ವರ್ಗ ಹಿತಾಸಕ್ತಿಯಲ್ಲಿ ಕಾನೂನು ರೂಪಿಸುತ್ತದೆ. ಉದ್ಯೋಗ, ಬೆಲೆ ಏರಿಕೆ, ಕೃಷಿ, ಕೈಗಾರಿಕೆ, ಶಿಕ್ಷಣ, ಆರೋಗ್ಯ, ಹೀಗೆ ಎಲ್ಲವನ್ನೂ ನಿಯಂತ್ರಿಸುವುದು ರಾಜಕೀಯವೇ. ಹಾಗಾಗಿ, ಆರ್‌ಜಿ ಕರ್ ಆಂದೋಳನ ಇರುವುದು, ಒಂದು ರಾಜಕೀಯ ಶಕ್ತಿಯಾದ ರಾಜ್ಯ ಸರ್ಕಾರದ ದುರಾಡಳಿತದ ವಿರುದ್ಧ. ಈ ಅತ್ಯಾಚಾರ ಮತ್ತು ಹತ್ಯೆ ಒಂದು ರಾಜಕೀಯ ಷಡ್ಯಂತ್ರದ ಪರಿಣಾಮವಾಗಿವೆ. ಹಾಗಾಗಿ ಈ ಆಂದೋಳನವನ್ನು ರಾಜಕೀಯಕ್ಕೆ ಹೊರತಾದದ್ದು ಎನ್ನಲಾಗುವುದಿಲ್ಲ.

“ಇಡೀ ಬಂಡವಾಳಶಾಹಿ ವ್ಯವಸ್ಥೆ ಭ್ರಷ್ಟಾಚಾರದ ಕೂಪದಲ್ಲಿ ಮುಳುಗಿದ್ದು ಕುಸಂಸ್ಕೃತಿಯ ವಾಹಕನಾಗಿದೆ. ಯುವಜನಾಂಗವನ್ನು ಮದ್ಯ, ಮಾದಕ ವಸ್ತು ಮತ್ತು ಲೈಂಗಿಕತೆಗಳ ಅಮಲಿನಲ್ಲಿ ಮುಳುಗಿಸಿ ಅವರನ್ನು ಸತ್ವವಿಹೀನರನ್ನಾಗಿಸಲಾಗುತ್ತಿದೆ. ಸಮೂಹ ಮಾಧ್ಯಮಗಳು ಸಹ ಅಶ್ಲೀಲತೆಯನ್ನೇ ಪ್ರಚುರ ಪಡಿಸುತ್ತಿವೆ. ಇವೆಲ್ಲವೂ ಯುವಕರ ನೈತಿಕ ಬೆನ್ನೆಲುಬನ್ನೇ ನಾಶ ಮಾಡುತ್ತಿವೆ. ನಮ್ಮ ನವೋದಯ ಮತ್ತು ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಜನರು ಆ ಪರಿಸರದಿಂದ ಉನ್ನತ ಮೌಲ್ಯಗಳನ್ನು ಗಳಿಸಿದ್ದರು. ಆದರೀಗ, ಇಲ್ಲಿ ಕಲುಷಿತ ವಾತಾವರಣವಿದೆ. ನೀತಿ, ನೈತಿಕತೆ, ಸಭ್ಯತೆ ಇವೆಲ್ಲವನ್ನೂ ಸಮಾಧಿ ಮಾಡಲಾಗುತ್ತಿದೆ. ದೈಹಿಕವಾಗಿ ಮಾನವನಾಗಿದ್ದರೂ, ಮಾನವ ಮೌಲ್ಯಗಳೇ ಇಲ್ಲದ ಹೊಸ ಜೀವಿಯೊಂದು ಸೃಷ್ಟಿಯಾಗಿದೆ. ಇಡೀ ಸಮಾಜ ಕೊಳೆತು ನಾರುತ್ತಿದೆ. ಇದೆಲ್ಲಾ ಬಂಡವಾಳವಾದವೇ ಕಾರಣ. ಆದಾಗ್ಯೂ, ಸಮಾಜದಲ್ಲಿನ ಎಲ್ಲಾ ಮಾನವ ಮೌಲ್ಯಗಳು ನಾಶವಾಗಿಲ್ಲ ಎಂಬುದಕ್ಕೆ ಆರ್‌ಜಿ ಕರ್



ಆಂದೋಳನವೇ ಸಾಕ್ಷಿ.

“ದೇಶದ ಮೂಲೆಮೂಲೆಗಳಲ್ಲೂ ಹೋರಾಟದ ಅಸ್ತ್ರಗಳಾಗಿ ಜನಸಮಿತಿಗಳು ರಚನೆಯಾಗಿ ಆಂದೋಳನಗಳಿಗೆ ಚಾಲನೆ ನೀಡಬೇಕು, ಪ್ರಾಮಾಣಿಕ, ಧೀರ ಯುವಕರು ಸ್ವಯಂಸೇವಕ ಪಡೆಗಳನ್ನು ಕಟ್ಟಿಕೊಂಡು ಇಂತಹ ದೌರ್ಜನ್ಯಗಳನ್ನು ಪ್ರತಿರೋಧಿಸಬೇಕು. ಆರ್‌ಜಿ ಕರ್ ಆಂದೋಳನದಂತಹ ಹೋರಾಟಗಳನ್ನು ಕಟ್ಟಿ ಪಾತಕಿಗಳನ್ನು ಶಿಕ್ಷಿಸಲು ಸರ್ಕಾರದ ಮೇಲೆ ಒತ್ತಡ ತರಬೇಕು. ಇದು ಈ ಘಳಿಗೆಯ ಕರೆ.

“ಇನ್ನೊಂದೆಡೆ, ನಾವು ಒಂದು ಪರ್ಯಾಯವಾಗಿ ವೈಚಾರಿಕ–ಸಾಂಸ್ಕೃತಿಕ–ನೈತಿಕ ಹೋರಾಟವನ್ನು ಹರಿಬಿಡಬೇಕು. ಮಕ್ಕಳು ಮತ್ತು ಕಿಶೋರರನ್ನು ಕ್ರೀಡೆ, ನಾಟಕ, ಸಂಗೀತಗಳಲ್ಲಿ ಹಾಗೂ ನವೋದಯದ ಮಹಾನ್ ವ್ಯಕ್ತಿಗಳ, ಸ್ವಾತಂತ್ರ್ಯ ಸಂಗ್ರಾಮದ ಕ್ರಾಂತಿಕಾರಿಗಳ ಜೀವನ ಸಂಘರ್ಷಗಳ ಕುರಿತಾದ ಚರ್ಚೆಗಳಲ್ಲಿ ತೊಡಗಿಸಿಕೊಳ್ಳಬೇಕಾಗುತ್ತದೆ. ಈ ಮೂಲಕ ಇಂದಿನ ಯುವ ಜನಾಂಗದಲ್ಲಿ ಉನ್ನತ ಚಾರಿತ್ರ್ಯವನ್ನು ಕಟ್ಟುವುದು ಸಾಧ್ಯವಾಗುತ್ತದೆ.

“ಒಂದೇ ಮಾತಿನಲ್ಲಿ ಹೇಳುವುದಾದರೆ, ಆರ್ ಜಿ ಕರ್ ಆಂದೋಳನ ಒಂದು ಯಶಸ್ವಿ ಹೋರಾಟ. ಅದರ ಒತ್ತಡದಿಂದಲೇ, ಸಿಬಿಐ, ಕಾಲೇಜಿನ ಮಾಜಿ ಪ್ರಾಂಶುಪಾಲರಾದ ಡಾ. ಸಂದೀಪ್ ಘೋಷ್‌ನನ್ನು, ಪೊಲೀಸ್ ಅಧಿಕಾರಿಯೊಬ್ಬನನ್ನು ಬಂಧಿಸಬೇಕಾಯಿತು; ಹಠಮಾರಿ ಮುಖ್ಯಮಂತ್ರಿಯನ್ನು ಧರಣಿ ಸ್ಥಳಕ್ಕೆ ಕರೆಸಿ ಅವರಿಂದ ತಮ್ಮ ಕೆಲವು ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಾಯಿತು. ಕಿರಿಯ ವೈದ್ಯರಿಗೆ ನಾನು ಹೇಳುವುದೆಂದರೆ, ನೀವು ಕೋಟ್ಯಂತರ ಜನರಿಗೆ ಒಂದು ಸಾಮಾಜಿಕ ಪರಿವರ್ತನೆಯ ಸಂದೇಶವಾಹಕರಾಗಬಲ್ಲಿರಿ. ಅಸಮರ್ಪಕ ಮೂಲಸೌಕರ್ಯಗಳು, ಮತ್ತಿತರ ತೊಂದರೆಗಳ ಹೊರತಾಗಿಯೂ ನೀವು ನೀಡುತ್ತಿರುವ ಆರೋಗ್ಯ ಸೇವೆ ನಿದರ್ಶನೀಯವಾದದ್ದು. ನಿಮ್ಮ ಮಾನವೀಯತೆ ಇತರರಲ್ಲೂ ಮಾನವ ಮೌಲ್ಯಗಳನ್ನು ಉದ್ದೀಪಿಸಲಿ. ನೀವು ಅನ್ಯಾಯದ ವಿರುದ್ಧ ಪ್ರತಿಭಟನೆಯ ಅಗ್ನಿಯನ್ನು ಪ್ರಜ್ವಲಿಸುವ ಜವಾಬ್ದಾರಿಯನ್ನು ಹೊತ್ತುಕೊಳ್ಳಿ ಎಂಬುದೇ ನಿಮ್ಮಲ್ಲಿ ನನ್ನ ಮನವಿ. ■

---

...9ನೇ ಪುಟದಿಂದ

## ನವೆಂಬರ್ ಮಹಾಕ್ರಾಂತಿಯ ಬೋಧನೆಗಳು

ಸ್ವಾತಂತ್ರ್ಯವನ್ನು ಕಡೆಗಣಿಸಿ, ಮಿಲಿಟರೀಕರಣಕ್ಕೆ ಒತ್ತು ನೀಡುತ್ತಿದೆ; ಇಂತಹ ಪರಿಸ್ಥಿತಿಯಲ್ಲಿ ಬಂಡವಾಳಶಾಹಿ ರಾಷ್ಟ್ರಗಳ ಬಂಡವಾಳಿಗರು ಯಾವುದೇ ವಿರೋಧ ತೋರದೇ ಕಾರ್ಮಿಕವರ್ಗಕ್ಕೆ ಅಧಿಕಾರವನ್ನು ಹಸ್ತಾಂತರಿಸುತ್ತಾರೆ ಮತ್ತು ಶಾಂತಿಯುತವಾಗಿ ಸಮಾಜವಾದಕ್ಕೆ ಪರಿವರ್ತನೆ ಆಗುವುದಕ್ಕೆ ಅನುವು ಮಾಡಿಕೊಡುತ್ತಾರೆ ಎಂದು ನಂಬುವುದು ದಡ್ಡತನವಾಗುತ್ತದೆ. ಮುಂದೆ ಎಂದೋ ಸಮಾಜವಾದಿ ರಾಷ್ಟ್ರಗಳು ತಮಗಿಂತ ಹೆಚ್ಚಿನ ಪ್ರಾಬಲ್ಯವನ್ನು ಪಡೆದಾಗ, ಬಂಡವಾಳಶಾಹಿಗಳು ಕ್ರಾಂತಿಯನ್ನು ಹಿಂಸೆಯಿಂದ ಹತ್ತಿಕ್ಕಲು ಹೆದರಿದಾಗ, ಸಮಾಜವಾದಕ್ಕೆ ಶಾಂತಿಯುತ ಪರಿವರ್ತನೆ ಸಾಧ್ಯವಾಗಬಹುದು.

ಜೊತೆಗೆ, ಮೇಲೆ ಚರ್ಚಿಸಿರುವ ಪರಿಸ್ಥಿತಿಯಲ್ಲಿ ಶಾಂತಿಯುತವಾಗಿ ಸಮಾಜಕ್ಕೆ ಪರಿವರ್ತನೆ ಆಗುವುದನ್ನು ಮಾರ್ಕ್ಸ್‌ವಾದ–ಲೆನಿನ್‌ವಾದವು ಸಂಪೂರ್ಣವಾಗಿ ಅಲ್ಲಗಳೆಯುವುದಿಲ್ಲವಾದರೂ, ಚುನಾವಣೆ ಮೂಲಕ ಸಮಾಜವಾದವನ್ನು ಸಾಧಿಸುವುದು ಮಾರ್ಕ್ಸ್‌ವಾದ–ಲೆನಿನ್‌ವಾದಕ್ಕೆ ಹೊರತಾದದ್ದು. ಶ್ರೇಷ್ಠ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಚಿಂತಕರಲ್ಲಿ ಒಬ್ಬರಾದ ಕಾಮ್ರೇಡ್ ಶಿವದಾಸ್ ಘೋಷ್ ಅವರ ಮಾತುಗಳಲ್ಲಿ ಹೇಳುವುದಾದರೆ, “ಒಬ್ಬ ಮಾರ್ಕ್ಸ್‌ವಾದಿ–ಲೆನಿನ್‌ವಾದಿಗೆ ಒಂದು ಬಂಡವಾಳಶಾಹಿ ರಾಷ್ಟ್ರದಲ್ಲಿ ಶಾಂತಿಯುತ ಸಮಾಜವಾದಿ ಕ್ರಾಂತಿ ಎಂದರೆ, ಕಾರ್ಮಿಕವರ್ಗವು ಶಾಂತಿಯುತವಾಗಿ ಅಧಿಕಾರ ವಶಪಡಿಸಿಕೊಳ್ಳುವುದು, ಬಂಡವಾಳಿಗರು ಯಾವುದೇ ವಿರೋಧ ತೋರದೇ ಇರುವುದು ಹಾಗೂ ಬಂಡವಾಳಶಾಹಿ ರಾಜ್ಯಯಂತ್ರದ ಶಾಂತಿಯುವ ಧ್ವಂಸ ಹಾಗೂ ಅದರ ಬದಲಾಗಿ ಹೊಸ ರಾಜ್ಯಯಂತ್ರದ, ಹೊಸ ರಾಜ್ಯದ, ಅಂದರೆ ಕಾರ್ಮಿಕವರ್ಗದ ರಾಜ್ಯ ಸ್ಥಾಪನೆ. ಇದರರ್ಥ ಬಂಡವಾಳಶಾಹಿ ಪ್ರಭುತ್ವವನ್ನು ಶಾಂತಿಯುತವಾಗಿ ಕಾರ್ಮಿಕ ರಾಜ್ಯವನ್ನಾಗಿ ಪರಿವರ್ತಿಸುವುದು ಎಂದಲ್ಲ. ಅದು ಎಂದಿಗೂ ಸಾಧ್ಯವಿಲ್ಲ. ಜೊತೆಗೆ, ಇದರರ್ಥವು ಪಾರ್ಲಿಮೆಂಟಿನ ಶಾಂತಿಯುತ ವಿನಾಶ ಮತ್ತು ಅದಕ್ಕೆ ಬದಲಾಗಿ ಕಾರ್ಮಿಕರ ಪ್ರಜಾತಾಂತ್ರಿಕ ಸಂಸ್ಥೆಯನ್ನು ಸ್ಥಾಪಿಸುವುದು, ಬದಲಿಗೆ ಪಾರ್ಲಿಮೆಂಟಿನ ಶಾಂತಿಯುತ ಪರಿವರ್ತನೆ ಎಂದರ್ಥವಲ್ಲ. ಪಾರ್ಲಿಮೆಂಟು ಒಂದು ಬಂಡವಾಳಶಾಹಿ ರಾಜಕೀಯ ಸಂಸ್ಥೆಯಾಗಿದ್ದು ಅದನ್ನು “ಜನಾಧಿಕಾರದ ನೈಜ ಅಂಗ”ವನ್ನಾಗಿ (ಕ್ರುಶ್ಚೇವ್ ಹೇಳಿದ್ದು) ಎಂದಿಗೂ ಪರಿವರ್ತಿಸಲು ಸಾಧ್ಯವಿಲ್ಲ.”

ಕೊನೆಯದಾಗಿ, ನವೆಂಬರ್ ಮಹಾಕ್ರಾಂತಿಯು ಪಕ್ಷದ ಬಗ್ಗೆ ಲೆನಿನ್ ಅವರ ಬೋಧನೆಯ ಸೂಕ್ತತೆಯನ್ನು ದೃಢಪಡಿಸುತ್ತದೆ. ಪಕ್ಷವು ಕಾರ್ಮಿಕವರ್ಗದ ಸರ್ವಾಧಿಕಾರದ ಮುಂಚೂಣಿ ಸಾಧನ. ಕ್ರಾಂತಿಕಾರಿ ಸಿದ್ಧಾಂತವನ್ನು ಹೊಂದಿರುವ ಕ್ರಾಂತಿಕಾರಿ ಕಾರ್ಮಿಕ ವರ್ಗದ ಪಕ್ಷ ಮಾತ್ರವೇ ಈ ಐತಿಹಾಸಿಕ ಕೆಲಸವನ್ನು ಮಾಡಬಲ್ಲದು. ಕ್ರುಶ್ಚೇವ್ ಮಾಡಿದ ಹಾಗೆ ಒಂದು ಪಕ್ಷವನ್ನು “ಎಲ್ಲಾ ಜನರ ಪಕ್ಷ” ಎಂದು ಬಿಂಬಿಸುವುದು ಪಕ್ಷದ ಮುಂಚೂಣಿ ಪಾತ್ರವನ್ನು ಕಡೆಗಣಿಸಿದಂತೆ, ಕಾರ್ಮಿಕ ವರ್ಗದ ಅಗ್ರಪಂಕ್ತಿಯಲ್ಲಿರುವ ಪಕ್ಷ ಮತ್ತು ಇತರ ವರ್ಗಗಳ ಹಾಗೂ ಸಮೂಹಗಳ ನಡುವಿರುವ ವ್ಯತ್ಯಾಸವನ್ನು ಗುರುತಿಸದೇ ಇದ್ದಂತೆ, ಇಡೀ ವರ್ಗ ಮತ್ತು ಜನರನ್ನು ಮುಂಚೂಣಿ ಮಟ್ಟಕ್ಕೆ ಬೆಳೆಸುವ ಜವಾಬ್ದಾರಿ ಯಿಂದ ನುಣುಚಿಕೊಂಡಂತೆ ಮತ್ತು ಯಾವುದೋ ಕೆಲಸಗಳಿಗಾಗಿ ಕೆಲವು ಜನರ ಒಂದು ವೇದಿಕೆಯಂತೆ ಪಕ್ಷವನ್ನು ಬಳಸಿಕೊಳ್ಳುವ ಮಟ್ಟಕ್ಕೆ ಅದನ್ನು ಅವನತಿಗೊಳಿಸಿಕೊಂಡಂತೆ. ಅಂತಹ ಪಕ್ಷವು ಜನರಿಗೆ ಅಧಿಕಾರ ಗಳಿಸಿಕೊಡಲಾರದು. ನಮ್ಮ ದೇಶದಲ್ಲಿ ಕಮ್ಯುನಿಸ್ಟ್ ಎಂದು ಕರೆಸಿಕೊಂಡು ತಿರುಗಾಡುವ ಪಕ್ಷಗಳು ನಕಲಿ ಕಮ್ಯುನಿಸ್ಟ್ ಪಕ್ಷಗಳು. ಅವರ ಚಟುವಟಿಕೆಗಳಿಂದ ಇದು ಪದೇಪದೇ ಸಾಬೀತಾಗಿದೆ. ಅವರ ನಿಜ ಸ್ವಭಾವವನ್ನು ಜನರು ಅರ್ಥ ಮಾಡಿಕೊಂಡು, ಅವರ ಪ್ರಭಾವದಿಂದ ಹಿಂದೆ ಸರಿಯಬೇಕಿದೆ. ನಮ್ಮ ದೇಶದ ಒಂದೇ ಒಂದು ನಿಜವಾದ ಕಮ್ಯುನಿಸ್ಟ್ ಪಕ್ಷವು ಕಾಮ್ರೇಡ್ ಶಿವದಾಸ್ ಘೋಷ್ ನಾಯಕತ್ವದ ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್). ನವೆಂಬರ್ ಮಹಾಕ್ರಾಂತಿಯ ಈ 54ನೇ ವಾರ್ಷಿಕೋತ್ಸವದಂದು ಈ ಪಕ್ಷದ ಪ್ರಾಬಲ್ಯ ಹೆಚ್ಚಿಸಲು ನೀವು ಶಪಥ ಮಾಡಿ ಹಾಗೂ ಇದರ ಸಂಘಟನೆಗಳ ಬಲ ಹೆಚ್ಚಿಸಿ. ನಮ್ಮ ದೇಶದ ಶೋಷಿತ ಜನತೆಯಿಂದ ಇತಿಹಾಸವು ಆಕಾಂಕ್ಷಿಸುವುದು ಇದನ್ನೇ.

**ನವೆಂಬರ್ ಮಹಾಕ್ರಾಂತಿ ಚಿರಾಯುವಾಗಲಿ!**
**ಭಾರತದಲ್ಲಿ ಸಮಾಜವಾದಿ ಕ್ರಾಂತಿ ಚಿರಾಯುವಾಗಲಿ!**
**ಎಸ್‌ಯುಸಿಐ (ಸಿ) ಚಿರಾಯುವಾಗಲಿ!**
**ಕಾಮ್ರೇಡ್ ಶಿವದಾಸ್ ಘೋಷ್ ಚಿರಾಯುವಾಗಲಿ!**

## ನ್ಯಾಯಮೂರ್ತಿ ಹೇಮಾ ಸಮಿತಿ ವರದಿ

# ಬಚ್ಚಿಟ್ಟಿದ್ದ ಹೊಲಸು ಬಯಲಾಗುತ್ತಲೇ ಸಿಪಿಐ(ಎಂ) ಇಬ್ಬಗೆಯ ಉವಾಚ

ಪ್ರಸಕ್ತ ಭಾರತದಲ್ಲಿ, ಮಹಿಳೆಯರ ಮೇಲೆ ನಡೆಯುತ್ತಿರುವ ಅಪರಾಧಗಳ ಪ್ರಮಾಣವು ಆತಂಕಕಾರಿ ಮಟ್ಟವನ್ನು ಮುಟ್ಟಿದೆ. ಮನರಂಜನಾ ಮಾಧ್ಯಮದಲ್ಲಂತೂ ಹೆಣ್ಣಿನ ಸರಕೀಕರಣ ಪ್ರಕ್ರಿಯೆಯು ಎಲ್ಲಾ ಮಿತಿಗಳನ್ನು ದಾಟಿ-ದೆ. ಸಿನಿಮಾ ಮತ್ತು ಟಿವಿ ಮೂಲಕ ಬದುಕನ್ನು ಕಟ್ಟಿಕೊಳ್ಳ ಬಯಸುವ ಯುವವಯಸ್ಸಿನ ಹೆಣ್ಣುಮಕ್ಕಳು ಅವಕಾಶಕ್ಕಾಗಿ ನಿರ್ದೇಶಕ, ನಿರ್ಮಾಪಕ ಮತ್ತಿತರ ಪ್ರಭಾವಿಗಳ ಕಾಮದಾಹವನ್ನು ತಣಿಸಬೇಕೆನ್ನುವುದು ಸರ್ವೇಸಾಮಾನ್ಯವೆನ್ನುವಂತಾಗಿದೆ. ಇದನ್ನು 'ಕ್ಯಾಸ್ಟಿಂಗ್ ಕೌಚ್' ಎನ್ನಲಾಗುತ್ತದೆ. ಹೆಣ್ಣುಮಕ್ಕಳನ್ನು ಈ ರೀತಿ ಉಪಯೋಗಿಸುವ ವಿಷಯದಲ್ಲಿ ಸಿನಿಮಾ ನಿರ್ಮಾಣಕ್ಕೆ ಹಣ ಒದಗಿಸುವ ಭೂಗತ ದೊರೆಗಳು ಮತ್ತು ಅವರ ಸಹಚರರು ಸಹ ಹಿಂದೆಯೇನೂ ಬಿದ್ದಿಲ್ಲ. ಇದು ಇಡೀ ಭಾರತದ ಸಿನಿಮಾರಂಗವನ್ನು ವ್ಯಾಪಿಸಿದೆ.

### ಬಲಿಯಾದ ನಟಿಯರ ಬಾಯಿ ತೆರೆಯಲು ಉತ್ತೇಜಿಸಿದ #ಮೀಟೂ ಚಳುವಳಿ

ಅವಕಾಶ ವಂಚಿತರಾಗುತ್ತೇವೆ ಎಂದೋ, ಬಲಿಷ್ಠರ ಮುನಿಸಿಗೆ ಕಾರಣವಾಗುತ್ತೇವೆ ಎಂದೋ ಈ ಹಿಂದೆ ದೌರ್ಜನ್ಯಕ್ಕೆ ಒಳಗಾದ ಯುವತಿಯರು ಬಾಯಿ ತೆರೆಯಲು ಅಂಜುತ್ತಿದ್ದರು. ಆದರೆ 2018ರಲ್ಲಿ ಭಾರತದಲ್ಲಿ ಬಾಲಿವುಡ್ ತಾರೆ ತನುಶ್ರೀ ದತ್ತ ಧೈರ್ಯ ಮಾಡಿ ಮಾತನಾಡಿ, ಆಗ ಆರಂಭವಾದ #ಮೀಟೂ ಒಂದು ಚಳುವಳಿಯಾಗಿ ಬೆಳೆಯಿತು. ಸಾಮಾಜಿಕ ಮಾಧ್ಯಮದ ಮೂಲಕ ವ್ಯಾಪಕ ಟ್ರಾಲಿಂಗ್ ಮತ್ತು ಕುಹಕಗಳ ಹೊರತಾಗಿಯೂ ಲೈಂಗಿಕ ದೌರ್ಜನ್ಯಕ್ಕೆ ಬಲಿಯಾಗಿದ್ದ ಹಲವರು ಮಾತನಾಡಲು ಆರಂಭಿಸಿದರು. ಕೆಲವು ಮಹಿಳೆಯರಂತೂ ಸಿನಿಮಾರಂಗದಲ್ಲಿ ನಡೆಯುವ ಭಯಾನಕ ಕೃತ್ಯಗಳಿಗೆ ಹೆದರಿ ತಾವು ಹೇಗೆ ಪಲಾಯನ ಮಾಡಬೇಕಾಯಿತು ಎಂದು ದು:ಖದಿಂದ ವಿವರಿಸಿದರು. ದೌರ್ಜನ್ಯ ಎಸಗಿದವರ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳು ಇರದೆ ಅವರು ಅಸಹಾಯಕರಾಗಿದ್ದೂ ಸಹ ತಮ್ಮ ಬೀಭತ್ಸ ಅನುಭವಗಳನ್ನು ಹೊರಹಾಕುವ ಮೂಲಕ ತಮ್ಮ ಮನಸ್ಸುಗಳಲ್ಲಿ ಅವರು ಒಂದು ಅಂತ್ಯವನ್ನು ಕಂಡುಕೊಂಡರು. ಕೆಲವು ಟ್ಯಾಬ್ಲಾಯ್ಡ್‌ಗಳು ಮತ್ತು ಟಿವಿ ಚಾನೆಲ್‌ಗಳಂತೂ ಕುಕೃತ್ಯಗಳನ್ನು ಎಸಗಿದವರ ರಕ್ಷಣೆಗೆ ನಿಂತವು. ಇದೇನು ಮಹಾ, ಇಂತಹ 'ಅಡ್ಜಸ್ಟ್‌ಮೆಂಟ್‌ಗಳು' ಸಿನಿಮಾಗಳಲ್ಲಿ ಸಾಮಾನ್ಯ ಎಂದು ಹಗುರವಾಗಿ ಮಾತನಾಡಿದವು.

### ಹೇಮಾ ಸಮಿತಿಯ ರಚನೆ

2017ರಲ್ಲಿ ಮಲಯಾಳಿ ಸಿನಿತಾರೆಯರೊಬ್ಬರು ಕೊಚ್ಚಿಯಲ್ಲಿ ನಡೆದ ತಮ್ಮ ಅಪಹರಣ ಮತ್ತು ತಮ್ಮ ಮೇಲೆ ನಡೆದ ಲೈಂಗಿಕ ಆಕ್ರಮಣವನ್ನು ಬಹಿರಂಗವಾಗಿ ಹೇಳಿಕೊಂಡರು. ದಿಲೀಪ್ ಎಂಬ ನಟನೊಬ್ಬ ಲೈಂಗಿಕ ದೌರ್ಜನ್ಯವನ್ನು ಎಸಗಲು ರೂಪಿಸಿದ್ದ ಪಿತೂರಿ ಕೇರಳ ಪೊಲೀಸರ ತನಿಖೆಯಿಂದ ಬಯಲಾಯಿತು. ಸಂತ್ರಸ್ತೆಯು ಸಾಮಾಜಿಕ ಮಾಧ್ಯಮಗಳಲ್ಲಿ ತನ್ನನ್ನು ಗುರುತಿಸಿಕೊಂಡು ಹೊರಬರುತ್ತಿದ್ದಂತೆ ಸಿನಿಮಾರಂಗವು ಅಲುಗಾಡಿತು. ತಮ್ಮ ಪುರುಷಾಧಿಪತ್ಯದ ಧೋರಣೆಯ ಮೂಲಕ ಆಪಾದನೆಯನ್ನು ಹಾರಿಸಿಬಿಡಲು ಕೆಲವರು ಪ್ರಯತ್ನಿಸಿದರೂ ಸಹ ಲೈಂಗಿಕ ದೌರ್ಜನ್ಯಕ್ಕೆ ಸಿಲುಕಿದ ನಟಿಯರನ್ನು ಬೆಂಬಲಿಸಲು ಮಲೆಯಾಳಂ ಸಿನಿರಂಗದಲ್ಲಿ ದುಡಿಯುತ್ತಿರುವ ಕೆಲವು ಮಹಿಳೆಯರು ಒಟ್ಟಾಗಿ ನಿಂತು 'ವಿಮೆನ್ ಇನ್ ಸಿನಿಮಾ ಕಲೆಕ್ಟಿವ್'(ಡಬ್ಲ್ಯೂಸಿಸಿ)ನ್ನು ರಚಿಸಿಕೊಂಡರು. ಸಮಗ್ರ ತನಿಖೆಯನ್ನು ನಡೆಸಿ ಸಂಪೂರ್ಣ ಸತ್ಯವನ್ನು ಬಯಲಿಗೆಳೆಯಲು ಸಿಪಿಐ(ಎಂ) ನೇತೃತ್ವದ ಕೇರಳ ಸರ್ಕಾರಕ್ಕೆ ಡಬ್ಲ್ಯೂಸಿಸಿ ಆಗ್ರಹಿಸಿತು. ಒತ್ತಡಕ್ಕೆ ಮಣಿದ ಕೇರಳ ರಾಜ್ಯ ಸರ್ಕಾರವು ಕೇರಳ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ.ಹೇಮಾ ನೇತೃತ್ವದಲ್ಲಿ, ಹಿರಿಯ ನಟಿ ಶಾರದಾ ಮತ್ತು ನಿವೃತ್ತ ಐಎಎಸ್ ಅಧಿಕಾರಿ ಕೆ.ಬಿ.ವಲ್ಸಲಾಕುಮಾರಿಯವರನ್ನು ಒಳಗೊಂಡ ಸಮಿತಿಯನ್ನು ರಚಿಸಿತು. ಅದೇ ಹೇಮಾ ಸಮಿತಿ. ತನಿಖೆಯನ್ನು ನಡೆಸಿದ ಹೇಮಾ ಸಮಿತಿಯು 2019ರ ಡಿಸೆಂಬರ್ ತಿಂಗಳಿನಲ್ಲೇ ತನ್ನ ವರದಿಯನ್ನು ಕೇರಳ ಸರ್ಕಾರಕ್ಕೆ ಸಲ್ಲಿಸಿದರೂ ಸಹ 'ಅನೂಹ್ಯ' ಕಾರಣಗಳಿಗಾಗಿ ವರದಿಯು ಕೂಡಲೇ ದಿನದ ಬೆಳಕನ್ನು ಕಾಣಲೇ ಇಲ್ಲ. ಕೊನೆಯಲ್ಲಿ, ವರದಿಯಲ್ಲಿನ ಗೋಪ್ಯ ಮತ್ತು ವಿವಾದಾತ್ಮಕ ಭಾಗಗಳನ್ನು ಹೊರತುಪಡಿಸಿ ಉಳಿದ ಭಾಗವನ್ನು ಬಿಡುಗಡೆ ಮಾಡಲು 2024ರ ಜುಲೈ 5ರಂದು ರಾಜ್ಯ ಮಾಹಿತಿ ಆಯೋಗವು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದ ನಂತರವೇ ವರದಿ ಆಚೆಗೆ ಬಂದದ್ದು. ಆನಂತರವೂ ಸಹ ಸಾರ್ವಜನಿಕ ವಲಯದಲ್ಲಿ ವರದಿಯು ಕಾಣಿಸಿಕೊಂಡದ್ದು 2024ರ ಆಗಸ್ಟ್ 19ರಂದು.

### ಸಿನಿಮಾರಂಗದಲ್ಲಿ ಲೈಂಗಿಕ ದೌರ್ಜನ್ಯದ ವರದಿ: ಎರಡನೆಯ ಎಚ್ಚರಿಕೆ ಘಂಟೆ

2018ರ #ಮೀಟೂ ಚಳುವಳಿಯ ನಂತರದ ಕಾಲದಲ್ಲಿ ಸಿನಿಮಾರಂಗದ ಒಳಗೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯಗಳ ವಿರುದ್ಧ ಕೇಳಿ ಬಂದಿರುವ ಇದು ಎರಡನೆಯ ಎಚ್ಚರಿಕೆ ಘಂಟೆಯಂತಿದೆ. ನಟಿಯರು, ತಂತ್ರಜ್ಞೆಯರು ಮತ್ತು ಸಹಾಯಕಿಯರು ಲೈಂಗಿಕ ದೌರ್ಜನ್ಯಗಳ ಬಗ್ಗೆ ದನಿಯೆತ್ತಿರುವುದರಿಂದ ಸಿನಿರಂಗದ ಬಲಿಷ್ಠರು ಹೇರಿರುವ ದೌರ್ಜನ್ಯದ ಸಾಮ್ರಾಜ್ಯವು ನುಚ್ಚುನೂರಾಗುವ ಭರವಸೆ ಕಾಣಿಸುತ್ತಿದೆ. ಅದಕ್ಕೆ ಸಿನಿಮಾರಂಗದ ನಿಯಂತ್ರಕ ಸಮಿತಿಗಳಲ್ಲಿ ಮಹಿಳೆಯರು ಪ್ರಧಾನಪಾತ್ರವನ್ನು ನಿರ್ವಹಿಸಬೇಕಾಗುತ್ತದೆ. ಹಾಗೆಯೇ, 2017ರಲ್ಲಿ ಪುರುಷರ ಹತೋಟಿಯಲ್ಲಿದ್ದ 'ಅಸೋಸಿಯೇಷನ್ ಆಫ್ ಮಲಯಾಳಂ ಮೂವಿ ಆರ್ಟಿಸ್ಟ್' (ಅಮ್ಮ)ನಿಂದ ಕೆಲವು ನಟಿಯರು, ನಿರ್ಮಾಪಕಿಯರು ಮತ್ತು ನಿರ್ದೇಶಕಿಯರು ಹೊರಬಂದು ಡಬ್ಲ್ಯೂಸಿಸಿಯನ್ನು ಕಟ್ಟಿಕೊಂಡರು. ಕೂಡು ಕುಟುಂಬದಂತಿರುವ ಸಿನಿಮಾರಂಗದ ವಿರುದ್ಧ ಡಬ್ಲ್ಯೂಸಿಸಿ ಒಂದು ವಿಕೃತ ಬಂಡಾಯವನ್ನು ಸಾರಿದೆ ಎಂದು 'ಅಮ್ಮ' ಹೀಗಳೆಯಿತು. ಆದರೂ ಸಹ ಅಮ್ಮ ಮತ್ತು ಸರ್ಕಾರವನ್ನು ಗುರಿಯಾಗಿಸಿಕೊಂಡ ಡಬ್ಲ್ಯೂಸಿಸಿ ಕೇವಲ ಕೆಲವು ಘಟನೆಗಳ ವಿಷಯ ಮಾತ್ರವಲ್ಲ, ಒಂದು ವಿಶಾಲ ಸ್ತರದ ಮೇಲೆ ನ್ಯಾಯಬೇಕು ಎಂದು ಆಗ್ರಹಿಸಲು ಆರಂಭಿಸಿತು. 2018ರಲ್ಲಿ ಡಬ್ಲ್ಯೂಸಿಸಿ ನಡೆಸಿದ ಒಂದು ಪತ್ರಿಕಾಗೋಷ್ಠಿಯು ಇದಕ್ಕೆ ಸ್ಪಷ್ಟ ನಿದರ್ಶನದಂತೆ ಕಾಣಿಸುತ್ತದೆ. ಹೋರಾಟದ ಮುಂಚೂಣಿಯಲ್ಲಿ ನಿಂತಿರುವ ಆ ಮಹಿಳೆಯರು ಸಿನಿಮಾರಂಗಕ್ಕೆ ತಾವು ನೀಡಿರುವ ಕೊಡುಗೆಯ ಸಾಮರ್ಥ್ಯದ ಆಧಾರದಲ್ಲಿ ತಮ್ಮನ್ನು ಗುರುತಿಸಿಕೊಂಡು ಒಟ್ಟಾರೆ ಮಹಿಳಾ ಸಮುದಾಯದ ಬೇಡಿಕೆಗಳನ್ನು ಅಂದು ಮಂಡಿಸಿದ ರೀತಿಯು ಕೇರಳದ ಮಹಿಳಾ ಕಾರ್ಮಿಕರ ಇತಿಹಾಸದಲ್ಲಿ ದಾಖಲಾಗಬೇಕಾದ ಸಂದರ್ಭವಾಗಿತ್ತು.

### ವರದಿಯು ಬಯಲಿಗೆಳೆದಿರುವ ಸತ್ಯಗಳು

ಕೆಲವು ಕೈಬೆರಳೆಣಿಕೆಯಷ್ಟು ಸೂಪರ್ ಸ್ಟಾರ್ ನಟರು, ನಿರ್ದೇಶಕರು, ಉದ್ಯಮದಲ್ಲೇ ಇದ್ದು ಬಲಿತು ಬೆಳೆದಿರುವ ಪ್ರೊಡಕ್ಷನ್ ನಿಯಂತ್ರಕರು ಮತ್ತು ನಿರ್ಮಾಪಕರು ಒಟ್ಟಾಗಿ ಕೈ ಜೋಡಿಸಿ, ಒಂದು ಶಕ್ತಿಕೇಂದ್ರವಾಗಿ, ಒಂದು ಮಾಫಿಯಾದ ಮಾದರಿಯಲ್ಲಿ ಭದ್ರವಾಗಿ ನಿಂತಿದ್ದು, ಉದ್ಯಮದಲ್ಲಿ ಇರುವ ಅವಕಾಶಗಳು ಮತ್ತು ದುಡಿಮೆಯ ಪರಿಸ್ಥಿತಿಗಳನ್ನು ಹೇಗೆ ತಮ್ಮಿಷ್ಟದಂತೆ ಅವರು ನಿರ್ಣಯಿಸುತ್ತಾರೆ ಎಂಬುದನ್ನು ವರದಿಯು ಬಹಳ ನಿಖರವಾಗಿ ಎತ್ತಿ ತೋರಿಸಿದೆ. ಹೀಗೆ ಬಲಿತ ಪುರುಷರ ದೌರ್ಜನ್ಯಕಾರಿ ವರ್ತನೆಯನ್ನು ಕೇವಲ ಒಂದು ವೈಲಕ್ಷಣವೆಂದು ಮತ್ತು ಅದು ಪೌರುಷದ ಹೆಗ್ಗುರುತು ಎಂದು ತಮ್ಮ ಅಭಿಮಾನಿ ವೃಂದವು ಸಹಿಸಿಕೊಳ್ಳುತ್ತದೆ ಮತ್ತು ಅದನ್ನು ವಿರೋಧಿಸುವ ಮಹಿಳೆಯರನ್ನು ಅದು ಸಹಿಸುವುದಿಲ್ಲ ಎನ್ನುವ ಅಂಶವು ಅವರನ್ನು ಇನ್ನಷ್ಟು ಉತ್ತೇಜಿಸುತ್ತದೆ. ಅಕ್ರಮ ನಿಷೇಧಗಳು, ಅವಕಾಶ ವಂಚನೆ ಮತ್ತು ಆ ನಟರ ಅಭಿಮಾನಿ ಸಂಘಗಳು ನಡೆಸುವ ಸೈಬರ್ ದಾಳಿಗಳು ಹೆಚ್ಚಿನ ಮಹಿಳೆಯರು ತಮ್ಮ ಅನುಭವದ ಸತ್ಯಗಳನ್ನು ಬಿಚ್ಚಿಡದಂತೆ ಅವರನ್ನು ತಡೆದಿದ್ದವು. ಆದರೆ, ವರದಿಯು ಬಹಿರಂಗವಾಗುತ್ತಲೇ, ಹಲವಾರು ಮಹಿಳೆಯರು ತಮ್ಮ ನೋವು-ಸಂಕಟದ ಅನುಭವಗಳನ್ನು ಸಾರ್ವಜನಿಕವಾಗಿ ಹೇಳಿಕೊಂಡಿದ್ದಾರೆ ಮತ್ತು ಹಲವು ಪ್ರಭಾವಿಗಳು, ಸ್ಟಾರ್‌ಗಳು, ನಿರ್ಮಾಪಕರು ಮತ್ತು ನಿರ್ದೇಶಕರ ಮೇಲೆ ಡಜನ್‌ಗಟ್ಟಲೇ ದೂರುಗಳು ದಾಖಲಾಗಿವೆ.

ಸಿನಿಮಾರಂಗದಲ್ಲಿ ಪ್ರತಿದಿನವೂ ಅವ್ಯಾಹತವಾಗಿ ನಡೆಯುತ್ತಿರುವ ಲೈಂಗಿಕ ಅಸಮಾನತೆ ಮತ್ತು ಮಹಿಳೆಯರ ಮೇಲಿನ ದಬ್ಬಾಳಿಕೆಯ ವಾಸ್ತವವನ್ನು ವರದಿಯು ನಗ್ನಗೊಳಿಸಿದೆ. ಸಮಿತಿಯ ವರದಿಯು ಹೊರಬಂದಿರುವುದರೊಂದಿಗೆ ಕೆಲವು ಅತ್ಯಂತ ಬಲಿಷ್ಠರ ಕಪಾಟುಗಳಲ್ಲಿ ಬಚ್ಚಿಟ್ಟಿದ್ದ ಅಸ್ತಿಪಂಜರಗಳು ಈಗ ಹೊರಬಿದ್ದಿವೆ. ಕೇರಳದಲ್ಲಿ ಉಂಟಾಗಿರುವ ಈ 'ಭೂಕಂಪ'ದಿಂದ ಅಕ್ಕಪಕ್ಕದ ತಮಿಳು, ತೆಲುಗು ಮತ್ತು ಕನ್ನಡ ಸಿನಿಉದ್ಯಮಗಳಲ್ಲಿ ಕಂಪನ ಉಂಟಾಗಿದೆ. ಅವು ಸಹ ಪುರುಷಾಧಿಪತ್ಯದ ಕೂಪಗಳೇ ಆಗಿವೆಯಲ್ಲ!

ಸಮಿತಿಯ ವರದಿಯನ್ನು ಬಹಳ ಹತ್ತಿರದಿಂದ ಗಮನಿಸಿದಾಗ ಮತ್ತು ಕೇರಳ ಮಹಿಳಾ ಆಯೋಗ ಹಾಗೂ ಕೇರಳದ ಮಹಾತ್ಮ ಗಾಂಧಿ ವಿಶ್ವವಿದ್ಯಾಲಯದ 'ಸ್ಕೂಲ್ ಆಫ್ ಜೆಂಡರ್ ಸ್ಟಡೀಸ್' ಗಳ ಜಂಟಿ ಕಾರ್ಯಾಚರಣೆಯೊಂದಿಗೆ ವರದಿಗಾಗಿ ಅನುಭವಜನ್ಯ ಸಾಕ್ಷಿಗಳನ್ನು ಸಂಗ್ರಹಿಸಿದ "ಮಲಯಾಳಂ ಫಿಲಂ ಇಂಡಸ್ಟ್ರಿ ಆಸ್ ಎ ಜಂಡರ್ ವರ್ಕ್‌ಸ್ಪೇಸ್: ಅಂಡಸ್ಟ್ಯಾಂಡಿಂಗ್, ಇಶ್ಯೂಸ್, ಇಂಟರವೆಂಷನ್ಸ್ ಅಂಡ್ ಪಾಲಿಸಿಸ್" ಎಂಬ ಅಧ್ಯಯನವನ್ನು ಅಭ್ಯಸಿಸಿದಾಗ ಅದು ಹಲವಾರು ಪ್ರಶ್ನೆಗಳನ್ನು ಮತ್ತು ಆತಂಕಗಳನ್ನು ನಮ್ಮ ಮುಂದಿಡುತ್ತದೆ. ಸರಿಯಾದ ಆಯ್ಕೆ ಪ್ರಕ್ರಿಯೆ, ಸಮಾನ ವೇತನ, ತಾರತಮ್ಯ ಮತ್ತು ದುಡಿಮೆಯ ಸ್ಥಳದಲ್ಲಿ ಕಿರುಕುಳ ಇತ್ಯಾದಿ ವಿಷಯಗಳ ಸುತ್ತ ಏಳುವ ಎಲ್ಲ ಸಮಂಜಸ ಪ್ರಶ್ನೆಗಳಿಂದ ಸಿನಿಮಾರಂಗವು ತಪ್ಪಿಸಿಕೊಳ್ಳಲು ಸಾಧ್ಯವೇಕೆಂದರೆ, ಯಾವುದೇ ಕೆಲಸಕ್ಕೆ ಯಾರನ್ನೇ ಆಗಲಿ ನಿಯೋಜಿಸುವ ವಿಷಯದಲ್ಲಿ ಅಲ್ಲಿ ಇರುವ ಅಪಾರದರ್ಶಕತೆಯಿಂದ. ಇದಕ್ಕಿಂತ ಹೆಚ್ಚಿನದೇನೆಂದರೆ, ಇಲ್ಲಿ ಸರಿಯಾದ ಪ್ರಕ್ರಿಯೆಯನ್ನು ನಡೆಸುತ್ತಿಲ್ಲ ಎಂದು ದೂರುವವರು ಇಡೀ ವ್ಯವಸ್ಥೆಯ ಕೆಂಗಣ್ಣಿಗೆ ಖಂಡಿತವಾಗಿಯೂ ಗುರಿಯಾಗುತ್ತಾರೆ. "ಸಿನಿಮಾ ರಂಗವು ಒಂದು ವಿಭಿನ್ನ ಮತ್ತು ವಿಶೇಷ ಕಾರ್ಯಕ್ಷೇತ್ರವಾಗಿದೆ. ಇದೊಂದು ಕಲಾಕ್ಷೇತ್ರವಾಗಿರುವುದರಿಂದ, ಇಲ್ಲಿ ನಿಮ್ಮ ದೇಹವೇ ನಿಮ್ಮ ಕೆಲಸದ ಮಾಧ್ಯಮ. ಆದ್ದರಿಂದಲೇ, ಒಂದು ಅರ್ಥದಲ್ಲಿ, ಇಲ್ಲಿ ದೇಹವನ್ನೇ 'ಮಾರಾಟ' ಮಾಡಬೇಕು. ಹೀಗಾಗಿ, ಇತರೆಲ್ಲಾ ದುಡಿಮೆಯ ಸ್ಥಳಗಳಿಗೆ ಹೋಲಿಸಿದಾಗ ಇಲ್ಲಿ ಕಿರುಕುಳದ ಸಾಧ್ಯತೆಗಳು ಬಹಳವೇ ಹೆಚ್ಚು" ಎಂದು ಒಬ್ಬ ಸಹಾಯಕ ನಿರ್ದೇಶಕರು ಅಲವತ್ತುಕೊಂಡಿದ್ದನ್ನು ವರದಿಯು ದಾಖಲಿಸಿದೆ. ಮಹಿಳೆಯರು ಮತ್ತು ಇತರೆ ಕಡೆಗಣಿಸಲ್ಪಟ್ಟ ದುಡಿಮೆಗಾರರ ಬವಣೆಯು ವ್ಯವಸ್ಥೆಯ ಒಳಗಿನ ಒಂದು ವಿಕೃತಿ ಅಲ್ಲ, ಬದಲಿಗೆ, ಮಲಯಾಳಂ ಸಿನಿಮೋದ್ಯಮದ ರಚನೆ ಮತ್ತು ಅದರ ಸಂಘಟನೆಯ ಮೂಲ ಗುಣಲಕ್ಷಣವಾಗಿಯೇ ಇದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಈ ವಿಷಯದಲ್ಲಿ ನಿಷ್ಕ್ರಿಯವಾಗಿ ಕೂತಿದ್ದು, ಮೂಕಪ್ರೇಕ್ಷಕರಾಗಿವೆ. ಸದ್ಯ-ಕ್ಕೆ ರಾಜ್ಯ ಸರ್ಕಾರವು ಒಂದು ವಿಶೇಷ ತನಿಖಾ ತಂಡ(ಎಸ್‌ಐಟಿ)ಯನ್ನು ನಿಯೋಜಿಸಿದೆ ಮತ್ತು ವರದಿಯಲ್ಲಿ ಕಾಣಿಸಿರುವ ಎಲ್ಲ ಘಟನೆಗಳನ್ನು ತನಿಖೆ ಮಾಡಬೇಕು ಎಂದು ಕೇರಳ ಉಚ್ಚ ನ್ಯಾಯಾಲಯವು ಎಸ್‌ಐಟಿಗೆ ನಿರ್ದೇಶನ ನೀಡಿದೆ. ತಮಿಳು ಮತ್ತು ಕನ್ನಡ ಸಿನಿಮಾರಂಗದಲ್ಲಿ ದುಡಿಯುತ್ತಿರುವ ಮಹಿಳೆಯರು ತಮ್ಮ ರಾಜ್ಯಸರ್ಕಾರಗಳೂ ಸಹ ಅಲ್ಲಿನ ದುಡಿಮೆಯ ಪರಿಸ್ಥಿತಿಯನ್ನು ಉತ್ತಮಪಡಿಸಲು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಈಗ ಒತ್ತಾಯಿಸುತ್ತಿದ್ದಾರೆ. ಬಂಗಾಳಿ ಸಿನಿಮಾ ಉದ್ಯಮವನ್ನು ಶುಚಿ ಮಾಡಲು ಪಶ್ಚಿಮ ಬಂಗಾಳ ಸರ್ಕಾರವು ಸಮಿತಿಯೊಂದನ್ನು ರಚಿಸಿದೆ ಎಂಬ ಸುದ್ದಿ ಇದೆ.

### ಸಿಪಿಐ(ಎಂ)ನ ವಿರೋಧಾಭಾಸ

ಹೇಮಾ ಸಮಿತಿಯ ವರದಿಗೆ ಸಂಬಂಧಿಸಿದಂತೆ ಸಿಪಿಐ(ಎಂ)ನ ನಿಲುವು ಅತ್ಯಂತ ಅಸಹ್ಯಕರವಾಗಿದೆ. ಕೊಚ್ಚಿಯ ಸಿಪಿಐ(ಎಂ) ಪಕ್ಷದ ಶಾಸಕ ಮುಕೇಶ್ ವಿರುದ್ಧ ಮಿನು ಮುನೀರ್ ಎಂಬ ನಟಿಯೊಬ್ಬರು ದೂರು ನೀಡಿದ್ದಾರೆ. ಶಾಸಕ ಮುಕೇಶ್ ರಾಜೀನಾಮೆಗೆ ಒತ್ತಾಯ ಕೇಳಿ ಬಂದಿದೆ. ಆದರೆ ಸಿಪಿಐ(ಎಂ)ನ ಕೇರಳ ರಾಜ್ಯ ಸಮಿತಿಯು ಶಾಸಕ ಎಂ.ಮುಕೇಶ್ ಬೆನ್ನಿಗೆ ನಿಂತಿದ್ದು, ಲೈಂಗಿಕ ದೌರ್ಜನ್ಯ ಎಸಗಿದ ವಿಚಾರದಲ್ಲಿ ಶಾಸಕರು ರಾಜೀನಾಮೆ ನೀಡುವ ಅಗತ್ಯವಿಲ್ಲ ಎಂದು ಹೇಳಿದೆ. "ನ್ಯಾಷನಲ್ ಎಲೆಕ್ಷನ್ ವಾಚ್ ಪ್ರಕಾರ ದೇಶದಲ್ಲಿ 16 ಮಂದಿ ಸಂಸದರು ಮತ್ತು 135 ಮಂದಿ ಶಾಸಕರು ಮಹಿಳೆಯರ ಮೇಲೆ ಎಸಗಿರುವ ದೌರ್ಜನ್ಯಗಳಿಗೆ ಸಂಬಂಧಪಟ್ಟ ಆಪಾದನೆಗಳನ್ನು ಎದುರಿಸುತ್ತಿದ್ದಾರೆ. ಅದರಲ್ಲಿ 54 ಮಂದಿ ಬಿಜೆಪಿಗೆ ಸೇರಿದ್ದಾರೆ, 23 ಮಂದಿ ಕಾಂಗ್ರೆಸ್‌ನವರಾಗಿದ್ದಾರೆ. ನೈತಿಕ ಹೊಣೆಯನ್ನು ಹೊತ್ತ ಮೇಲೆ ಮುಕೇಶ್ ಈಗ ತಮ್ಮ ಸ್ಥಾನವನ್ನು ತೊರೆದರೆ, ಮುಂದೆ ಅವರು ನಿರ್ದೋಷಿ ಎಂದು ಸಾಬೀತಾದಾಗ, ಮತ್ತೆ ಆ ಸ್ಥಾನವನ್ನು ಮರುಪಡೆಯಲು ಆಗುವುದಿಲ್ಲ. ಆದ್ದ-ರಿಂದ, ರಾಜೀನಾಮೆ ಬೇಡಿಕೆಯು ನ್ಯಾಯದ ನಿರಾ-ಕರಣೆಯಂತಾಗುತ್ತದೆ." ಎಂದು ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಎಂ.ವಿ.ಗೋವಿಂದನ್ ಅಪ್ಪಣೆ ಕೊಡಿಸಿದ್ದಾರೆ. ಇಂತಹ ಅಸಹ್ಯಕರ ವಾದವನ್ನು ಮುಂದಿಡುವ ಬದಲು ನಮ್ಮ ಪಕ್ಷವೂ ಸಹ ಬಿಜೆಪಿ ಮತ್ತು ಕಾಂಗ್ರೆಸ್‌ಗಿಂತ ಭಿನ್ನವೇನೂ ಅಲ್ಲ ಎಂದು ಒಪ್ಪಿಕೊಂಡರೆ ಸಾಕಾಗುತ್ತದೆ! ಹಲವು ದಿನಗಳ ಕಾಲ ಮೀನಾಮೇಷ ಎಣಿಸಿದ ನಂತರ ಕಡೆಗೂ ಸೆಪ್ಟೆಂಬರ್ 20ರಂದು ಎಸ್‌ಐಟಿಯು ಮುಕೇಶ್ ಬಂಧನವನ್ನು ಮಾಡಿದರೂ ಸಹ, ಕೂಡಲೇ ಆತನ ಬಿಡುಗಡೆಯೂ ಆಗಿಹೋಯಿತು. ಏಕೆಂದರೆ, ಬಹಳ ಮೊದಲೇ ಒಂದು ಸೆಷನ್ಸ್ ನ್ಯಾಯಾಲಯವೊಂದು ಶಾಸಕರಿಗೆ ನಿರೀಕ್ಷಣಾ ಜಾಮೀನನ್ನು ನೀಡಿ ಆಗಿತ್ತು.

### ಕೊನೆಯ ಮಾತು

ಇಂದು, ಮಹಿಳೆಯರ ಮೇಲಿನ ಪಾತಕಗಳು ನಡೆಯದಿರುವ ಸ್ಥಳವೇ ಉಳಿದಿಲ್ಲ. ಮನೆಯ ಒಳಗೆ, ಮನೆಯ ಹೊರಗೆ, ದುಡಿಮೆಯ ಸ್ಥಳಗಳಲ್ಲಿ, ಓಡಾಡುವ ವಾಹನಗಳಲ್ಲಿ, ಮನರಂಜನಾ ಮಾಧ್ಯಮದಲ್ಲಿ - ಹೀಗೆ ಎಲ್ಲೂ ಸಹ ಮಹಿಳೆಗೆ ರಕ್ಷಣೆ ಇಲ್ಲದಂತಾಗಿದೆ. ಹೊಲಸು ಆಲೋಚನೆಗಳು, ಮೂಲ ಪ್ರವೃತ್ತಿಯನ್ನು ಉದ್ರೇಕಿಸುವ ಮತ್ತು ಮನಸ್ಸಿನ ವಿಕೃತಿಯನ್ನು ಉದ್ದೀಪಿಸುವ ವಿಷಯಗಳು ಕೊಳೆತು ಹೋಗಿರುವ ಬಂಡವಾಳಶಾಹಿ ವ್ಯವಸ್ಥೆಯಿಂದ ಪುರುಷರ ಮನಸ್ಸಿನೊಳಗೆ ನುಸುಳುತ್ತಿವೆ. ಬಂಡವಾಳಶಾಹಿ ವ್ಯವಸ್ಥೆಯು ಮಾನವೀಯ ಎನಿಸಿಕೊಂಡಿರುವ ಎಲ್ಲವನ್ನೂ ಅಳಿಸಿಹಾಕಲು ಹವಣಿಸಿದೆ. ಮನುಷ್ಯರ ಮನಸ್ಸನ್ನು ವಿಕೃತ ವಿಚಾರಗಳೇ ಆವರಿಸಿಕೊಂಡಾಗ, ಮನುಷ್ಯನು ಸರಿ-ತಪ್ಪುಗಳ ನಡುವಿನ ವ್ಯತ್ಯಾಸವನ್ನು ಅರಿಯದಂತಾದಾಗ ಅವನು ಕಿಂಚಿತ್ತು ಅಳುಕಿಲ್ಲದೆ ಪಾತಕಗಳಲ್ಲಿ ತೊಡಗುತ್ತಾನೆ.

ಆಧುನಿಕತೆ ಮತ್ತು ಲಿಂಗ ಸಮಾನತೆಯ ಬಗ್ಗೆ ಎಷ್ಟೇ ಮಾತನಾಡಿದರೂ ಸಹ, ನಾವಿಂದು ಬದುಕುತ್ತಿರುವ ಸಮಾಜವು ಮಹಿಳೆಯನ್ನು ಗಂಡಿನ ಆಳಾಗಿಸುವ ಪುರುಷಪ್ರಧಾನ ಧೋರಣೆ ಹೊಂದಿರುವ ಸಮಾಜವೇ ಆಗಿದೆ ಎನ್ನುವುದನ್ನು ಮರೆಯಲಾಗದು. ಈಗಂತೂ, ಪುರುಷಾಟ್ಟಹಾಸದ ಮತ್ತು ಮಹಿಳಾ ವಿರೋಧಿಯಾದ ಆಲೋಚನೆಗಳಿಗೆ ವಿಕೃತವಾದ ಉತ್ತೇಜನವು ಎಲ್ಲೆಡೆ ದೊರಕುತ್ತಿರುವುದರಿಂದ ಪರಿಸ್ಥಿತಿಯು ಇನ್ನಷ್ಟು ಬಿಗಡಾಯಿಸಿದೆ. ಇದನ್ನು ತೊಳೆದು ಶುಚಿ ಮಾಡಲು ಯಾವುದೇ ಆಳ್ವಿಕ ರಾಜಕೀಯ ಪಕ್ಷಗಳು ತಯಾರಾಗಿಲ್ಲ ಮತ್ತು ಅವಕ್ಕೆ ಅದು ಬೇಕಾಗಿಯೂ ಇಲ್ಲ.

ಮಾನವ ಗುಣಗಳು ಮತ್ತು ಮೌಲ್ಯಗಳ ಮೇಲೆ ಯಾವ ರೀತಿಯಲ್ಲಿ ಅಮಾನವೀಯತೆಯು ಇಂದು ವಿಜೃಂಭಿಸಿ, ಪಶುತ್ವವನ್ನು ಉದ್ದೀಪಿಸಿದೆ ಎಂಬುದಕ್ಕೆ ಸಿನಿಮಾ ಪ್ರಪಂಚದಲ್ಲಿ ಇಂದು ಕಣ್ಣಿಗೆ ರಾಚುತ್ತಿರುವ ಪರಿಸ್ಥಿತಿಯೇ ಒಂದು ವೇದನಾದಾಯಕ ಉದಾಹರಣೆಯಾಗಿದೆ. ಹಿಂದೆ ಬಲಿಪಶುಗಳಾಗಿದ್ದು ಇಂದು ಸೆಡ್ಡು ಹೊಡೆದು ನಿಂತಿರುವವರ ಎದೆಗಾರಿಕೆಯನ್ನು ಮೆಚ್ಚಿಕೊಳ್ಳುತ್ತಲೇ, ಇಂದಿನ ಕಾಲಘಟ್ಟದಲ್ಲಿ, ಸಮಾಜ ಬೆಳವಣಿಗೆಯ ವೈಜ್ಞಾನಿಕ ನಿಯಮದ ಅತ್ಯುನ್ನತ ಸೈದ್ಧಾಂತಿಕ ನೆಲೆಯ ಆಧಾರದ ಮೇಲೆ ಒಂದು ಪ್ರಜ್ಞಾಪೂರ್ವಕ ಸಾಂಸ್ಕೃತಿಕ ಪ್ರತಿಪ್ರವಾಹವನ್ನು ಹರಿ ಬಿಡದೆ, ಈ ಸಮಾಜದ ಕೊಳೆತವನ್ನು ತಡೆಗಟ್ಟಲಾಗದು ಎಂದು ಎಲ್ಲಾ ಸಂಬಂಧ ಪಟ್ಟವರು ಮತ್ತು ಆತ್ಮಸಾಕ್ಷಿಯನ್ನು ಹೊಂದಿರುವ ಎಲ್ಲರನ್ನೂ ಎಚ್ಚರಿಸುತ್ತಲೇ, ಅಂತಹ ಸಮಾಜ ನಿರ್ಮಾಣ ಕಾರ್ಯದಲ್ಲಿ ಎಲ್ಲ ಪ್ರಜ್ಞಾವಂತರೂ ಸೇರಿಕೊಳ್ಳಬೇಕೆಂದು ನಾವು ಆಗ್ರಹಿಸುತ್ತೇವೆ. ■

Registered Newspaper
Karmika Drushtikona RNI. KARKAN/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)




ಎಸ್‌ಯುಸಿಐ(ಸಿ) ಪಕ್ಷದ ಶಹಾಬಾದ ಸ್ಥಳೀಯ ಸಮಿತಿಯ ನೇತೃತ್ವದಲ್ಲಿ ಜನರಿಗೆ ಮೂಲಭೂತ ಸೌಕರ್ಯ ಒದಗಿಸಲು ಆಗ್ರಹಿಸಿ ನಡೆದ ಪ್ರತಿಭಟನಾ ಮೆರವಣಿಗೆ




ಬೆಂಗಳೂರು: ಜನಾಂಗೀಯವಾದಿ ಇಸ್ರೇಲ್, ಪ್ಯಾಲೆಸ್ಟೀನ್ ಹಾಗೂ ಲೆಬನಾನ್ ನಾಗರಿಕರ ಮೇಲೆ ನಡೆಸುತ್ತಿರುವ ದಾಳಿ ಖಂಡಿಸಿ ಎಸ್‌ಯುಸಿಐ(ಸಿ) ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿ ಸಂಘಟಿಸಿರುವ ಪ್ರತಿಭಟನೆ



27.10.2024: ತುಮಕೂರಿನ ಅನುಗ್ರಹ ಬಡಾವಣೆಗೆ ರಸ್ತೆ, ಚರಂಡಿ ನಿರ್ಮಿಸಲು ಒತ್ತಾಯಿಸಿ, ತುಮಕೂರಿನ ಎಸ್‌ಯುಸಿಐ(ಸಿ) ಪಕ್ಷ ಹಾಗೂ ಅನುಗ್ರಹ ಬಡಾವಣೆ ನಾಗರಿಕ ಸಮಿತಿಗಳ ನೇತೃತ್ವದಲ್ಲಿ ಜನರು ಗ್ರಾಮಾಂತರ ಶಾಸಕರಾದ ಶ್ರೀ. ಸುರೇಶ್ ಗೌಡ ಅವರಿಗೆ ಮನವಿಪತ್ರ ಸಲ್ಲಿಸಿದರು.

## ರೈಲ್ವೆ ಯೂನಿಯನ್ ಚುನಾವಣೆಯಲ್ಲಿ SWREU ಸ್ಪರ್ಧೆ




**18–10–2024:** ನಮ್ಮ ಕಾರ್ಮಿಕ ಸಂಘಟನೆ ಎಐಯುಟಿಯುಸಿ ಸಂಯೋಜಿತ ಸೌಥ್ ವೆಸ್ಟರ್ನ್ ರೈಲ್ವೆ ಎಂಪ್ಲಾಯಿಸ್ ಯೂನಿಯನ್ **(SWREU)** ನಿಂದ ರೈಲ್ವೆ ಯೂನಿಯನ್ ಚುನಾವಣೆಯಲ್ಲಿ ಸ್ಪರ್ಧಿಸಲು, ಹುಬ್ಬಳ್ಳಿಯಲ್ಲಿನ ಚುನಾವಣಾಧಿಕಾರಿಯಾದ ಈಶಾನ್ಯ ರೈಲ್ವೆಯ ಜನರಲ್ ಮ್ಯಾನೇಜರ್ ಅವರಿಗೆ ನಾಮಪತ್ರವನ್ನು ಸಲ್ಲಿಸಲಾಯಿತು. ಕೇಶವಾಪುರ ವೃತ್ತದಿಂದ ಜನರಲ್ ಮ್ಯಾನೇಜರ್ ಕಚೇರಿಯವರೆಗೆ ಬಂದ ಮೆರವಣಿಗೆಯ ನೇತೃತ್ವವನ್ನು **SWREU** ವಲಯ ಅಧ್ಯಕ್ಷರಾದ ಕಾ. ಕೆ. ಸೋಮಶೇಖರ್, **SWREU** ಪ್ರಧಾನ ಕಾರ್ಯದರ್ಶಿ ಕಾ. ಎಂ.ಬಿ. ತಾಯಿದಾಸ್, **SWREU** ಕಾರ್ಯಾಧ್ಯಕ್ಷರಾದ ಕಾಮ್ರೇಡ್ ಗುಡದಪ್ಪ ವಹಿಸಿದ್ದರು.

## ಉನ್ನತ ಶಿಕ್ಷಣ ಉಳಿಸಿ ಹಾಗೂ ದಾವಣಗೆರೆ ಬಂದ್ ಬೆಂಬಲಿಸಿ: ರಾಜ್ಯಾದ್ಯಂತ ಎಐಡಿಎಸ್‌ಓ ಸಂಘಟಿತ ಅಖಿಲ ಕರ್ನಾಟಕ ಪ್ರತಿಭಟನಾ ದಿನ
















Published by: K.Radhakrishna on behalf of SOCIALIST UNITY CENTRE OF INDIA-COMMUNIST, Karnataka State Committee, No.31, 3rd Cross, Malleswaram, Bangalore-03 Ph: 080-23561443. E-mail: karmikadrushtikona@gmail.com and Printed by him at Balaji Publications, No.16/2, Bychatura Road, Magadi Town, Magadi-562120 Website: www.sucic.org EDITOR: K.RADHAKRISHNA